ಆಚಾರ ವಿಧಿ:

(ಶಾ)

---0---

॥ ಶ್ರೀಃ ॥

ಆಚಾರ ವಿಧಿಃ

ಸುಲಭ ಕನ್ನಡ ಟೀಕಾತಾತ್ಪರ್ಯದಿಂದ ಸಹಿತವಾದದ್ದು.

ಇದನ್ನು

ವೇ॥ ಶಂಭು ಶರ್ಮಾ ನಾಜಗಾರ ಇವರು

ಜ್ಯೋತಿಷ ಕಾರ್ಯಾಲಯದಲ್ಲಿ

ಪ್ರಸಿದ್ಧಪಡಿಸಿದರು.

ಶ್ರೀ॥ ಗಣಪತ ರಾಮರಾವ ಮಾಸೂರ ಇವರಿಂದ

ಕುಮಟಾ ಶ್ರೀರಾಮಕೃಷ್ಣ ಪ್ರಿಂಟಿಂಗ ವರ್ಕ್ಸ, ಲಿಮಿಟೆಡ್‌ದಲ್ಲಿ ಮುದ್ರಿಸಲ್ಪಟ್ಟಿತು.

ಮೊದಲನೇ ಆವೃತ್ತಿ.

[೧೦೦೦ ಪ್ರತಿಗಳು.]

೧೯೨೯.

ಬೆಲೆ ೧೨ ಆಣೆ.

—ಗ್ರಂಥಾರ್ಪಣಂ—

योगिराजकरे भक्त्या ग्रंथोऽयं शंभुशर्मणा ॥
समर्प्यते तनूजेन नारायण मनीषिण: ॥

ಯಾವ ಯೋಗೀಂದ್ರರ
ವಿಚಿತ್ರ—ಚರಿತ್ರೆಯು
ಧರಿತ್ರಿಯನ್ನೇ ಪವಿತ್ರವನ್ನಾಗಿ ಮಾಡುತ್ತದೋ
ಯಾವ ದೇಶಿಕ ಸ್ವಾಮಿಗಳು ಉಜ್ವಲ ಧಾರ್ಮಿಕರಾಗಿ
ದೇದೀಪ್ಯಮಾನವಾದ ತಮ್ಮ ಅಲೌಕಿಕ ತಪಸ್ತೇಜೋವಿಶೇಷದಿಂದ
ದಿವಾಕರನಂತೆ ಜನತಮಸ್ತೋಮವನ್ನು ದೂರೀಕರಿಸುತ್ತಿರುವರೋ
ಆ ಶ್ರೀಮನ್ನೆಲೆಮಾವಿನ ಮಠದ ಶ್ರೀ ನರಸಿಂಹ ಭಾರತೀಸ್ವಾಮಿ
ಗಳವರ ಕರಕಮಲದಲ್ಲಿ ಅವರ ಸ್ವಾರ್ಥತ್ಯಾಗ,
ಧರ್ಮಾಭಿಮಾನಿತೆ, ವೇದಾಂತನಿಷ್ಣಾತತೆ,
ಅಸಾಧಾರಣವಾದ ವಾಕ್ಪಟುತಾ, ವಿದ್ಯಾ
ಪಾರಂಗತ್ವ ಮೊದಲಾದ ಸದಾರ್ಯ
ಶೀಲಕ್ಕೆ ಮನಸೋತು ಈ
ಗ್ರಂಥರತ್ನವನ್ನು
ಅವರ ನೇತ್ರಾಂತಪಾತಪೂತವನ್ನಾಗಿ ಮಾಡುವದಕ್ಕೋಸ್ಕರ
ಸಮರ್ಪಿಸುವೆನು.

ಶಂಭು ಶರ್ಮಾ ನಾಜಗಾರ.

ಪ್ರಸ್ತಾವನೆಯು.

ಎಲೈ ಧರ್ಮಾಭಿಮಾನಿ ಕನ್ನಡಿಗರೇ,

ಜನತೆಯೀಗ ಧರ್ಮದೃಷ್ಟಿಯಿಂದ ಅತೀವ ಅವನತಿಯ ದಶೆಯನ್ನು-ಹೊಂದಿರುವದನ್ನು ನೋಡಿ ನೀವೆಂತು ಸಹಿಸಿಕೊಳ್ಳುವಿರಿ? ಯಾವ ಕರ್ಣಾಟಕದಲ್ಲಿ ವಿದ್ಯಾರಣ್ಯ, ವಿಜ್ಞಾನೇಶ್ವರಾದಿ ಉಜ್ವಲ ಧಾರ್ಮಿಕರು ಸನಾತನಧರ್ಮವನ್ನು ಪ್ರಚಾರದಲ್ಲಿ ತಂದರೋ ಅಂಥ ಕರ್ಣಾಟಕ ಭೂದೇವಿಯ ಸದ್ಯದ ಪರಿಸ್ಥಿತಿಯನ್ನು ಅವಲೋಕಿಸಿದರೆ ಎಂಥ ಕಲ್ಲೆದೆಯ ಧಾರ್ಮಿಕನಾದರೂ ಭಗ್ನಹೃದಯನಾಗುವನು. "यान्यस्माकꣳ सुचरितानि। तानित्वयोपास्यानि । नो इतराणि (श्रुतिः) वर्णाश्रमेषु ये धर्माः शास्त्रोक्ता मुनिसत्तम ॥ तेषु तिष्ठन्नरो विष्णुमाराधयति नान्यथा ॥ (स्मृतिः) ಇತ್ಯಾದಿಗಳಿಂದ ಸನಾತನಧರ್ಮಗಳನ್ನಾಚರಿಸುವದು ಪ್ರತಿಯೊಬ್ಬನ ಕರ್ತವ್ಯವಿರುತ್ತದೆ.

ತಾನು ಪ್ರಾತಃಕಾಲದಲ್ಲೆದ್ದು ಮಲಗುವ ವರೆಗೆ ಹೇಗೆ ವರ್ತಿಸಬೇಕೆಂಬುದನ್ನು ಬೋಧಿಸುವದೇ "ಆಚಾರವಿಧಿ" ಯು. ಇದು ಸ್ಮೃತಿಗಳ ಸಾರಸಂಗ್ರಹವಾಗಿದ್ದು ಪ್ರತಿಯೊಬ್ಬ ಕನ್ನಡಿಗನ ಕೈಪಿಡಿಯೆಂಬದರಲ್ಲಿ ಸಂಶಯವಿರುವದಿಲ್ಲ. ಕನ್ನಡ ತಾತ್ಪರ್ಯದಿಂದ ಯುಕ್ತವಾದ ಕಾರಣದಿಂದಂತೂ ಇದರ ಉಪಯೋಗವನ್ನು ಹೇಳಲಾಸಲ್ಲ.

ಇದನ್ನು ಟೀಕಿಸಿರುವ ವೇ॥ **ಶಂಭು ಶರ್ಮಾ ನಾಜಗಾರ** ಇವರು ನುರಿತ ಲೇಖಕರಿದ್ದು ಕೇವಲ ಬಾಲಭಾಷೆಯಿಂದಲೇ ಟೀಕೆಯನ್ನು ಬರೆದಿರುವರು. ಈ ಪುಸ್ತಕವು ಲೋಕಪ್ರಿಯವಾಗುವದಕ್ಕಾಗಿ ವಿಶೇಷ ಪ್ರಶಂಸೆಮಾಡುವ ಕಾರಣವಿಲ್ಲ. ಇದು ತನ್ನ ಆವಶ್ಯಕ ಗುಣಗಳಿಂದ ಅಖಿಲ ಕರ್ಣಾಟಕದಲ್ಲಿ ಪಸರಿಸುವದೆಂದಾಶಿಸುವೆವು. ಕನ್ನಡದಲ್ಲಿ ಇಷ್ಟು ವಿಷಯಗಳನ್ನೊಳಗೊಂಡ ಕೈಗನ್ನಡಿಯು ಯಾವದೂ ಇಲ್ಲವೆಂದರೆ ಸಲ್ಲುವದು. 'ಆಚಾರಃ ಪರಮೋಧರ್ಮಃ' ನಿಜವಾಗಿ ಆಚಾರವನ್ನು ಬೋಧಿಸುವ ಗ್ರಂಥದಿಂದ ಕರ್ಣಾಟಕಕ್ಕೆ ನವಚೈತನ್ಯವುಂಟಾಗುವದೆಂದರೆ ಅತಿಶಯೋಕ್ತಿಯಾಗಲಾರದು.

ನಾರಾಯಣಾತ್ಮಜಃ

ಗಣೇಶ ಭಟ್ಟಃ ನಾಜಗಾರ.

ಆಚಾರವಿಧಿಯು

ಮೊದಲನೇ ಅಧ್ಯಾಯದ ವಿಷಯಾನುಕ್ರಮಣಿಕೆ.

ಎರಡನೇ ಅಧ್ಯಾಯದ ವಿಷಯಾನುಕ್ರಮಣಿಕೆ.

ಮೂರನೇ ಅಧ್ಯಾಯದ ವಿಷಯಾನುಕ್ರಮಣಿಕೆ.

ನಾಲ್ಕನೇ ಅಧ್ಯಾಯದ ವಿಷಯಾನುಕ್ರಮಣಿಕೆ.


ಐದನೇ ಅಧ್ಯಾಯದ ವಿಷಯಾನುಕ್ರಮಣಿಕೆ.

ಆರನೇ ಅಧ್ಯಾಯದ ವಿಷಯಾನುಕ್ರಮಣಿಕೆ.

ಐದನೇ ಅಧ್ಯಾಯದ ವಿಷಯಾನುಕ್ರಮಣಿಕೆ.

ಆರನೇ ಅಧ್ಯಾಯದ ವಿಷಯಾನುಕ್ರಮಣಿಕೆ.

॥ ಶ್ರೀಃ ॥



॥ ಶ್ರೀ ಗಣೇಶಾಯ ನಮಃ ॥

ಆಚಾರವಿಧಿಃ ಪ್ರಾರಭ್ಯತೇ.

ಪ್ರಥಮೋಽಧ್ಯಾಯಃ

ಸಟೀಕಃ

ನತ್ವಾ ಗುಂಜಾವನಾಧೀಶಂ ವಿಘ್ನೇಶಂ ವರದಾಯಕಂ ।
ವಿಲೋಕ್ಯ ಪೂರ್ವಶಾಸ್ತ್ರಾಣಿ ಲಿಖ್ಯತೇ ಸಾರಸಂಗ್ರಹಃ ॥ ೧ ॥

ಗುಂಜಾವನ (ಇಡಗುಂಜಿ) ವೆಂಬಲ್ಲಿ ವಾಸವಾಗಿದ್ದು ಭಕ್ತಜನರ ವಿಘ್ನಗಳನ್ನು ಪರಿಹರಿಸಿ ವರಗಳನ್ನು ಕೊಡುವ ಶ್ರೀ ಗಣಪತಿಯನ್ನು ನಮಸ್ಕರಿಸಿ ಅನೇಕ ಸ್ಮೃತಿಗಳ ಸಾರಸಂಗ್ರಹ ರೂಪವಾದ ಈ ಆಚಾರವಿಧಿಯು ಬರೆಯಲ್ಪಡುತ್ತದೆ.

ಬ್ರಾಹ್ಮೇ ಮುಹೂರ್ತೇ ಚೋತ್ಥಾಯ ಚಿಂತಯೇದಾತ್ಮನೋ ಹಿತಂ ।
ಧರ್ಮಾರ್ಥಕಾಮಾನ್ ಸ್ವೇಕಾಲೇ ಯಥಾಶಕ್ತಿ ನ ಹಾಪಯೇತ್ ॥ ೨ ॥

ಬ್ರಾಹ್ಮಮುಹೂರ್ತ (ರಾತ್ರಿಯ ಅಂತ್ಯಯಾಮದ ೫-೬ ಘಟಿ) ದಲ್ಲಿಯೇ ಹಾಸಿಗೆಯಿಂದೆದ್ದು ತನ್ನ ಹಿತದ ಬಗ್ಗಾಗಿ ಯೋಚಿಸತಕ್ಕದ್ದು. ಅಂದರೆ ಪರಮಾತ್ಮನನ್ನು ಧ್ಯಾನಿಸತಕ್ಕದ್ದು. ಧರ್ಮ, ಅರ್ಥ, ಕಾಮಗಳನ್ನು ಆಯಾಯ ಕಾಲದಲ್ಲಿ ಯಥಾಶಕ್ತಿಯಾಗಿ ಸೇವಿಸತಕ್ಕದ್ದು.

ಬ್ರಾಹ್ಮೇ ಮುಹೂರ್ತೇ ಯಾ ನಿದ್ರಾ ಸಾ ಪುಣ್ಯಕ್ಷಯಕಾರಿಣೀ ।
ತಾಂ ಕರೋತಿ ತು ಯೋ ಮೋಹಾತ್ ಪಾದಕೃಚ್ಛ್ರೇಣ ಶುದ್ಧ್ಯತಿ ॥ ೩ ॥

ಬ್ರಾಹ್ಮಮುಹೂರ್ತದಲ್ಲಿ ನಿದ್ರೆಯನ್ನು ಮಾಡಿದರೆ ಪುಣ್ಯಗಳು ನಾಶವಾಗುವದಲ್ಲದೆ ಶುದ್ಧನಾಗಬೇಕಾದರೆ ಕಾಲು ಅಂಶ ಕೃಚ್ಛ್ರವನ್ನಾಚರಿಸಬೇಕಾಗುವದು.

ಪಂಚ ಪಂಚ ಉಷಃಕಾಲಃ ಸಪ್ತ ಪಂಚಾರುಣೋದಯಃ ।
ಅಷ್ಟಪಂಚಭವೇತ್ಪ್ರಾತಃ ಶೇಷಃ ಸೂರ್ಯೋದಯಃ ಸ್ಮೃತಃ ॥ ೪ ॥

ರಾತ್ರಿಯ ಅಂತ್ಯದಲ್ಲಿ ೫೫ ಘಟಿಯಾದರೆ ಉಷಃಕಾಲವೆಂಬದಾಗಿಯೂ ೫೭ ಕ್ಕೆ ಅರುಣೋದಯವಾಗಿಯೂ ೫೮ ಘಟಿಗೆ ಪ್ರಾತಃಕಾಲವಾಗಿಯೂ ಆಮೇಲೆ ಸೂರ್ಯೋದಯವಾಗಿಯೂ ತಿಳಿಯಲ್ಪಡುತ್ತದೆ.

ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ಜಾಯತೇ ದ್ವಿಜಃ ।
ವೇದಾಧ್ಯಾಯೀ ಚ ಯೋ ವಿಪ್ರೋ ಬ್ರಹ್ಮಜಾನಾತಿ ಬ್ರಾಹ್ಮಣಃ ॥ ೫ ॥

ಮನುಷ್ಯನು ಹುಟ್ಟಿದಂದಿನಿಂದ ವೇದೋಕ್ತ ಸಂಸ್ಕಾರವಾಗುವವರೆಗೆ ಶೂದ್ರನಂತಿದ್ದು ಉಪನಯನ ಕರ್ಮದಿಂದ ದ್ವಿಜತ್ವವು ಪ್ರಾಪ್ತವಾಗಿ ವೇದಾಧ್ಯಯನಮಾಡಿ ವಿಪ್ರನೆಂಬ ಹೆಸರಿಗೆ ಪಾತ್ರನಾಗಿ ಬ್ರಹ್ಮಜ್ಞಾನದಿಂದ ಅನ್ವರ್ಥಕನಾಮದಿಂದ ಬ್ರಾಹ್ಮಣನಾಗುತ್ತಾನೆ.

ದೇಶಾಚಾರಸ್ತಾವದಾದೌ ವಿಚಿಂತ್ಯೋ
ದೇಶೇ ದೇಶೇ ಯಾ ಸ್ಥಿತಿಃ ಸೈವ ಕಾರ್ಯಾ ।
ಲೋಕದ್ವಿಷ್ಟಂ ಪಂಡಿತಾವರ್ಜಯಂತೇ ।
ದೈವಜ್ಞೋ ತೋ ಲೋಕಮಾರ್ಗೇಣ ಯಾಯಾತ್ ॥ ೬ ॥

ಸದಾಚಾರ ಪದ್ಧತಿಯು ಧರ್ಮಶಾಸ್ತ್ರಗಳ ಉಕ್ತಿಗಳಿಂದ ಭಿನ್ನಗಳಾಗಿರುವಾಗ ದೇಶಾಚಾರವನ್ನು ನೋಡಿ ಮಾಡಬೇಕಾಗುತ್ತದೆ. ತಿಳಿದವರು ಲೋಕನಿಂದ್ಯವಾದ ಕಾರ್ಯವನ್ನು ಮಾಡುವದಿಲ್ಲ. ಕಾರಣ ಲೋಕಪದ್ಧತಿಯನ್ನನುಸರಿಸಿ ಕರ್ಮವನ್ನಾಚರಿಸತಕ್ಕದ್ದು.

ಸ್ನಾನೇ ದಾನೇ ಜಪೇ ಹೋಮೇ ಸ್ವಾಧ್ಯಾಯೇ ಭೋಜನೇ ರತಾ ।
ಅಂತ್ಯೇ ಕ್ಷಣೇ ಮಲೋತ್ಸರ್ಗೇ ಮೌನಂ ಚಾಚಮನಂ ಸ್ಮೃತಂ ॥ ೭ ॥

ಸ್ನಾನ, ದಾನ, ಜಪ, ಹೋಮ ವೇದಾಭ್ಯಾಸ, ಭೋಜನ, ಮೈಥುನ, ಚಂಡಾಲ ದರ್ಶನ, ಮಲವಿಸರ್ಜನ ಇವುಗಳ ಆದಿಯಲ್ಲಿಯೂ ಅಂತ್ಯದಲ್ಲಿಯೂ ಆಚಮನ ಮಾಡತಕ್ಕದ್ದು. ಮತ್ತು ಮೌನವಿರತಕ್ಕದ್ದು.

ತತಃ ಪ್ರಾತಃ ಸಮುತ್ಥಾಯ ಕುರ್ಯಾದ್ವಿಣ್ಮೂತ್ರಮೇವ ಚ ।
ನೈರುತ್ಯಾಮಿಷುವಿಕ್ಷೇಪಮತೀತ್ಯಾಭ್ಯಧಿಕಂ ಭುವಃ ॥ ೮ ॥

ಬೆಳಿಗ್ಗೆ ಎದ್ದವನಾಗಿ ನೈರುತ್ಯ ದಿಕ್ಕಿನಲ್ಲಿ ಮನೆಯಿಂದ ಒಂದು ಧನುಸ್ಸೊಗೆದರೆ ಎಷ್ಟು ದೂರವಾಗುವದೋ ಅಷ್ಟಕ್ಕಿಂತ ಕಡಿಮೆಯಾಗದಂತೆ ಮಲಮೂತ್ರಗಳನ್ನು ಬಿಡತಕ್ಕದ್ದು.

ದಶಹಸ್ತಂ ಪರಿತ್ಯಜ್ಯ ಮೂತ್ರಂ ಕುರ್ಯಾಜ್ಜಲಾಶಯಾತ್ ।
ಶತಹಸ್ತಂ ಪುರೀಷೇ ತು ತೀರ್ಥೇ ಚೈವ ಚತುರ್ಗುಣಂ ॥ ೯ ॥

ನೀರಿದ್ದ ಸ್ಥಳದಿಂದ ದಶಹಸ್ತ ಪರಿಮಿತ ಸ್ಥಳವನ್ನು ಮೂತ್ರದಲ್ಲೂ ನೂರು ಹಸ್ತ ಪರಿಮಿತ ಸ್ಥಳವನ್ನು ಮಲವಿಸರ್ಜಸೆಯಲ್ಲೂ ಬಿಡತಕ್ಕದ್ದು. ಉತ್ತಮ ತೀರ್ಥವಾದರೆ ಇದಕ್ಕಿಂತ ನಾಲ್ಕು ಪಟ್ಟು ಹೆಚ್ಚು ಬಿಡತಕ್ಕದ್ದು.

ಪ್ರಾಚೀನಾವೀತಿಕಃ ಪೈತ್ರೇ ದೈವೇ ಯಜ್ಞೋಪವೀತವಾನ್ ।
ವಿಣ್ಮೂತ್ರೇ ದಕ್ಷಿಣೇ ಕರ್ಣೇ ನಿದಧ್ಯಾದ್ದ್ವೈವತಂ ತ್ರಿವೃತ್ ॥ ೧೦ ॥

ಜನಿವಾರವನ್ನು ಎಡಕ್ಕೆ ಮಾಡಿಕೊಂಡು ಪಿತೃಕಾರ್ಯವನ್ನೂ ಬಲಕ್ಕೆ ಮಾಡಿಕೊಂಡು ದೇವತಾಕಾರ್ಯವನ್ನೂ ಮಾಡತಕ್ಕದ್ದು. ಮಲಮೂತ್ರ ವಿಸರ್ಜನೆಯಾದರೆ ಬಲದ ಕಿವಿಗೆಸಿಕ್ಕಿಸಿಕೊಳ್ಳಬೇಕು.

ಅಂತರ್ಜಲೇ ದೇವಗೃಹೇ ವಲ್ಮೀಕೇ ಮೂಷಕಸ್ಥಲೇ ।
ಅನ್ಯಶೌಚಾವಶೇಷಾಶ್ಚ ನ ಗ್ರಾಹ್ಯಾಃ ಪಂಚಮೃತ್ತಿಕಾಃ ॥ ೧೧ ॥

ನೀರಲ್ಲಿರುವ ಮಣ್ಣನ್ನೂ, ದೇವಸ್ಥಾನ, ವರಲೇಹುತ್ತು, ಇಲಿಬಿಲ ಬೇರೆಯವರು ಶೌಚಾಚಾರ ಮಾಡಿ ಹೆಚ್ಚುಳಿದದ್ದು ಇಂಥ ಮಣ್ಣನ್ನೂ ವರ್ಜಿಸತಕ್ಕದ್ದು.

ದಿವಾ ಸಂಧ್ಯಾಸು ಕರ್ಣಸ್ಥಬ್ರಹ್ಮಸೂತ್ರಉದಙ್ಮುಖಃ ।
ಕುರ್ಯಾನ್ಮೂತ್ರಪುರೀಷೇ ಚ ರಾತ್ರೌ ಚೇದ್ದಕ್ಷಿಣಾಮುಖಃ ॥ ೧೨ ॥

ಹಗಲಿನಲ್ಲಿಯೂ ಸಂಧ್ಯಾಕಾಲಗಳಲ್ಲಿಯೂ ಯಜ್ಞೋಪವೀತವನ್ನು ಕಿವಿಗೆ ಸಿಲುಕಿಸಿ ಉತ್ತರ ದಿಕ್ಕಿಗೆ ಮೋರೆ ಮಾಡಿಕೊಂಡೂ ರಾತ್ರಿಯಲ್ಲಾದರೆ ದಕ್ಷಿಣ ದಿಕ್ಕಿಗೆ ಮೋರೆ ಮಾಡಿಕೊಂಡೂ ಮಲಮೂತ್ರಗಳನ್ನು ಮಾಡತಕ್ಕದ್ದು,

ಛಾಯಾಯಾಮಂಧಕಾರೇ ವಾ ರಾತ್ರಾವಹನಿ ವಾ ದ್ವಿಜಃ ।
ಯಥಾ ಸುಖಮುಖಃ ಕುರ್ಯಾತ್ ಪ್ರಾಣಬಾಧಾಭಯೇಷು ಚ ॥ ೧೩ ॥

ಬ್ರಾಹ್ಮಣನು ನೆರಳಿನಲ್ಲಿ, ಕತ್ತಲಲ್ಲಿ ರಾತ್ರಿಯಲ್ಲಿ ಅಥವಾ ಹಗಲಿನಲ್ಲಾದರೂ ಪ್ರಾಣ ಹೋಗುವಂಥ ಪ್ರಸಂಗದಲ್ಲಿ ತನಗೆ ಯಾವ ದಿಕ್ಕಿನಲ್ಲಿ ಸುಖವಾಗಬಹುದೋ ಆ ದಿಕ್ಕಿನಲ್ಲಿ ಮಲಮೂತ್ರ ವಿಸರ್ಜನೆಯನ್ನು ಮಾಡತಕ್ಕದ್ದು.

ಕರಸ್ಥಮುದಪಾತ್ರಂ ಚೇತ್ಕುರ್ವನ್ಮೂತ್ರಪುರೀಷಯೋಃ ।
ತಜ್ಜಲಂ ಮೂತ್ರಸದೃಶಂ ಸುರಾಪಾನೇನ ತತ್ಸಮಂ ॥ ೧೪ ॥

ಮಲಮೂತ್ರಗಳನ್ನು ಬಿಡುವಾಗ ಕೈಯಲ್ಲಿ ನೀರು ತಂಬಿಗೆಯನ್ನು ಹಿಡಕೊಂಡಿದ್ದರೆ ಅದು ಮೂತ್ರದಂತೆಯೇ ತ್ಯಾಜ್ಯವು. ಅದನ್ನು ಪಾನ ಮಾಡಿದರೆ ಸುರಾಪಾನ ಮಾಡಿದಂತೆಯೇ ಸರಿ.

ಅಂತರ್ಧಾಯ ತೃಣೈರ್ಭೂಮಿಂ ಶಿರಃಪ್ರಾವೃತ್ಯ ವಾಸಸಾ ।
ವಾಚಂ ನಿಯಮ್ಯ ಯತ್ನೇನ ಷ್ಠೀವನೋಚ್ಛ್ವಾಸವರ್ಜಿತಃ ॥ ೧೫ ॥

ಹುಲ್ಲುಗಳಿಂದ ಮಲಮೂತ್ರ ಸ್ಥಾನವನ್ನು ಮುಚ್ಚಿ ವಸ್ತ್ರದಿಂದ ತಲೆಯನ್ನು ಮುಚ್ಚಿಕೊಂಡು ಮಾತಾಡದೆ ಎಂಜಲುಗುಳುವದು, ದೊಡ್ಡಕ್ಕೆ ಶ್ವಾಸ ತೆಗಿಯುವದು ಇವನ್ನು ಬಿಟ್ಟು ಮೂತ್ರಮಲಗಳನ್ನು ಬಿಡುವದು.

ಅಗ್ನೌ ಚ ಗಚ್ಛಂಸ್ತಿಷ್ಠನ್ ವೈರಥ್ಯಾಂ ತೀರ್ಥೇ ಸ್ಮಶಾನಕೇ ।
ಅಂಗಾರೇ ಗೋಮಯೇ ನದ್ಯಾಂ ಯಜ್ಞಭೂಮಿಷು ಸರ್ವದಾ ॥ ೧೬ ॥

ಫಲೇ ದಲೇ ಚಿತಾಯಾಂ ಚ ವಲ್ಮೀಕೇ ಗಿರಿಮಸ್ತಕೇ ।
ದೇವಾಲಯೇ ನದೀತೀರೇ ದರ್ಭಪುಷ್ಪಕುಶಸ್ಥಲೇ ॥ ೧೭ ॥

ಸೇವ್ಯಚ್ಛಾಯೇಷು ವೃಕ್ಷೇಷು ಮಾರ್ಗಗೋಷ್ಠಾಂಬುಭಸ್ಮಸು ।
ಸ್ಥಾನೇಷ್ವೇತೇಷು ಸರ್ವೇಷು ಕುರ್ಯಾನ್ಮೂತ್ರಾದಿಕಂ ಚ ನ ॥ ೧೮ ॥

ಅಗ್ನಿಯಲ್ಲಿಯೂ, ಹೋಗುತ್ತಿರುವಾಗಲೂ, ನಿಂತಿರುವಾಗಲೂ, ಬೀದಿಯಲ್ಲಿಯೂ, ತೀರ್ಥದಲ್ಲಿಯೂ, ಸ್ಮಶಾನದಲ್ಲಿಯೂ, ಮಶಿಕೆಂಡದಲ್ಲಿಯೂ, ಗೋಮಯದಲ್ಲಿಯೂ, ನದಿಯಲ್ಲಿಯೂ, ಯಜ್ಞ-ಭೂಮಿಗಳಲ್ಲಿಯೂ, ಹಂಣು, ಎಲೆ, ವರಲೇಹುತ್ತು, ಪರ್ವತದ ಶಿಖರ, ದೇವಾಲಯ, ನದೀತೀರ, ದರ್ಭಪುಷ್ಪ, ಕುಶ, ತಂಪಾಗಿ ನೆರಳು ಕೊಡತಕ್ಕ ವೃಕ್ಷಗಳ ಸ್ಥಳ, ಮಾರ್ಗಸ್ಥಳ, ದನಗಳ ಹಕ್ಕೆ, ಜಲ, ಭಸ್ಮ, ಈ ಸ್ಥಾನಗಳಲ್ಲಿ ಮಲಮೂತ್ರಗಳನ್ನು ಯಾವಾಗಲೂ ಮಾಡಕೂಡದು.

ವಾಯ್ವಗ್ನ್ಯರ್ಕಾಂಶ್ಚ ಸೋಮಂ ಚ ಪಯೋಗೋಸ್ತ್ರೀದ್ವಿಜನ್ಮನಃ ।
ಪಶ್ಯನ್ನಭಿಮುಖಶ್ಚೈತಾನ್ ವಿಷ್ಠಾಂ ಮೂತ್ರಂ ಚ ನೋತ್ಸೃಜೇತ್ ॥ ೧೯ ॥

ವಾಯು, ಅಗ್ನಿ, ಸೂರ್ಯ, ಚಂದ್ರ, ಜಲ, ಗೋವು, ಸ್ತ್ರೀ, ಬ್ರಾಹ್ಮಣ ಇವರನ್ನು ಸಂಮುಖ ಮಾಡಿಕೊಂಡು ಮಲವನ್ನೂ ಮೂತ್ರವನ್ನೂ ಬಿಡಬಾರದು.

ಅರ್ಧಪ್ರಸೃತಿಮಾತ್ರಾ ತು ಪ್ರಥಮಾಮೃತ್ತಿಕಾ ಸ್ಮೃತಾ ।
ದ್ವಿತೀಯಾ ಚ ತೃತೀಯಾ ಚ ತದರ್ಧಾರ್ಧಾಃ ಪ್ರಕೀರ್ತಿತಾಃ ॥ ೨೦ ॥

ಒಂದು ಅಂಗೈಯ್ಯ ಅರ್ಧ ಪ್ರಮಾಣ ಮಣ್ಣನ್ನುಪಯೋಗಿಸುವದು ಉತ್ತಮ ಪಕ್ಷವು. ಅದರ ಅರ್ಧವು ಎರಡನೇ, ಅದರ ಅರ್ಧವು ಮೂರನೇ ಅಂದರೆ ಕನಿಷ್ಠವಾಗುವದು.

ಏಕಾ ತು ಮೃತ್ತಿಕಾ ಲಿಂಗೇ ತಿಸ್ರಃ ಸವ್ಯಕರೇ ಮೃದಃ ।
ಕರದ್ವಯೋ ಮೃದ್ವಯಂ ಸ್ಯಾನ್ಮೂತ್ರೇ ಶೌಚಂ ಪ್ರಕೀರ್ತಿತಂ ॥ ೨೧ ॥

ಮೂತ್ರಶೌಚದಲ್ಲಿ ಶಿಶ್ನಕ್ಕೆ ಒಂದಾವರ್ತಿ ಎಡಗೈಗೆ ಮೂರು ಸರತಿ ಎರಡೂ ಕೈಗಳಿಗೆ ಎರಡೆರಡಾವರ್ತಿ ಹೀಗೆ ಮಣ್ಣನ್ನು ಹಾಕತಕ್ಕದ್ದು.

ಪಂಚಾಪಾನೇ ಮೃದಃ ಕ್ಷೇಪ್ಯಾಕರೇ ವಾಮೇ ದಶಸ್ಮೃತಾ ।
ಹಸ್ತಯೋಃ ಸಪ್ತದಾತವ್ಯಾಃ ಪಾದಯೋರ್ಮೃತ್ತಿಕಾಸ್ತ್ರಯಃ ।
ಪುರೀಷೇ ಶೌಚಮಾಖ್ಯಾತಂ ಮುನಿಭಿಸ್ತತ್ತ್ವದರ್ಶಿಭಿಃ ॥ ೨೨ ॥

ಮಲಶೌಚದಲ್ಲಿ ಗುದದ್ವಾರ (ಆಸನ) ಕ್ಕೆ ಐದು ಸರತಿಯೂ, ಎಡಗೈಗೆ ಹತ್ತು ಸರತಿಯೂ, ಎರಡೂ ಕೈಗಳಿಗೆ ಏಳೇಳು ಸರತಿಯೂ, ಎರಡೂ ಪಾದಗಳಿಗೆ ಮೂರು ಸರತಿಯೂ ಮಣ್ಣನ್ನು ಹಾಕಬೇಕೆಂದು ಜ್ಞಾನಿಗಳಾದ ಮುನಿಗಳಿಂದ ಹೇಳಲ್ಪಟ್ಟದೆ.

ಏತಚ್ಛೌಚಂ ಗೃಹಸ್ಥಾನಾಂ ದ್ವಿಗುಣಂ ಬ್ರಹ್ಮಚಾರಿಣಾಂ ।
ತ್ರಿಗುಣಂ ಸ್ಯಾದ್ವನಸ್ಥಾನಾಂ ಯತೀನಾಂ ಸ್ಯಾಚ್ಚತುರ್ಗುಣಂ ॥ ೨೩ ॥

ಈ ಹಿಂದೆ ಹೇಳಿದ ಶೌಚಾಚಾರವು ಗೃಹಸ್ಥರಿಗೆ ಹೇಳಲ್ಪಟ್ಟದ್ದು ಬ್ರಹ್ಮಚಾರಿಗಳಿಗೆ ಇದರ ಎರಡುಪಟ್ಟು ವಾನಪ್ರಸ್ಥಾಶ್ರಮಿಗಳಿಗೆ ಮೂರು ಪಾಲು ಯತಿಗಳಿಗೆ ನಾಲ್ಕು ಪಾಲು ಆಚಾರವು ವಿಧಿಸಲ್ಪಡುತ್ತದೆ.

ಯದ್ದಿವಾವಿಹಿತಂ ಶೌಚಂ ತದರ್ಧಂ ನಿಶಿ ಕೀರ್ತಿತಂ ।
ತದರ್ಧಮಾತುರೇ ಪ್ರೋಕ್ತಂ ಆತುರಸ್ಯಾರ್ಧಮಧ್ವನಿ ॥ ೨೪ ॥

ಹಗಲಿನಲ್ಲಿ ಯಾವ ಆಚಾರವು ಎಷ್ಟು ವಿಧಿಸಲ್ಪಡುತ್ತದೋ ರಾತ್ರಿಯಲ್ಲಿ ಅದರ ಅರ್ಧದಷ್ಟು ಮಾಡಿದರೆ ಸಾಕು. ಅದರ ಅರ್ಧವು ಮರಣೋನ್ಮುಖನಿಗೂ, ಅದರಲ್ಲರ್ಧವು ದಾರಿಕಾರನಿಗೂ ವಿಧಿಸಲ್ಪಡುತ್ತದೆ.

ಸ್ತ್ರೀಶೂದ್ರಾದೇರಶಕ್ತಾನಾಂ ಬಾಲಾನಾಂ ಚೋಪವೀತಿನಾಂ ।
ಗಂಧಲೇಪಕ್ಷಯಕರಂ ಶೌಚಂ ಕುರ್ಯಾನ್ನಸಂಖ್ಯಯಾ ॥ ೨೫ ॥

ಸ್ತ್ರೀಯರು ಶೂದ್ರಾದಿಗಳು ಅಶಕ್ತರು, ಎಳೇ ಬ್ರಹ್ಮಚಾರಿಗಳು ಇವರೆಲ್ಲ ಮಣ್ಣಿನ ಸಂಖ್ಯೆಯಿಂದ ಆಚರಿಸುವದಗತ್ಯವಿಲ್ಲ. ಮಲಮೂತ್ರಗಂಧ (ವಾಸನೆ) ಹೋಗುವಷ್ಟು ಮಣ್ಣನ್ನುಪಯೋಗಿಸುವದು.

ಅರಣ್ಯೇ ನಿರ್ಜಲೇ ರಾತ್ರೌ ಚೋರವ್ಯಾಲಾಕುಲೇ ಪಥಿ ।
ಕುರ್ವನ್ ಮೂತ್ರಪುರಿಷೇ ತು ದ್ರವ್ಯಹಸ್ತೋ ನ ದುಷ್ಯತಿ ॥ ೨೬ ॥

ಅಡವಿ, ಜಲರಹಿತವಾದ ಪ್ರದೇಶ, ರಾತ್ರಿ, ಚೋರ, ಹುಲಿ ಮೊದಲಾದವುಗಳಿಂದ ಭಯಂಕರವಾದ ಮಾರ್ಗ ಈ ಇಕ್ಕಟ್ಟಿನಲ್ಲಿ ಮಲಮೂತ್ರಗಳನ್ನು ಬಿಡುವಾಗ ಯಾವದಾದರೊಂದು ವಸ್ತುವು ಕೈಯಲ್ಲಿದ್ದರೆ ಅದು ನಿಷೇಧಿಸಲ್ಪಡುವದಿಲ್ಲ.

ಸ್ನಾನಾದೂರ್ಧ್ವಂ ಜಪಾದರ್ವಾಗ್ವಿಣ್ಮೂತ್ರಂ ವಿಸೃಜೇದ್ಯದಿ।
ಪೂರ್ವವಸ್ತ್ರಂ ಪರಿತ್ಯಜ್ಯ ಶುದ್ಧಿಃ ಸ್ಯಾತ್ ಪುನರಾಚಮಾತ್ ॥೨೭ ॥

ಸ್ನಾನವಾದ ಮೇಲೆ ಸಂಧ್ಯಾವಂದನಾದಿಗಳಿಗಿಂತ ಮೊದಲು ಮಲಮೂತ್ರಗಳನ್ನು ಬಿಟ್ಟರೆ ಮೊದಲಿನ ವಸ್ತ್ರವನ್ನು ಬಿಟ್ಟು ಪುನಃ ಆಚಮನ ಮಾಡಿಕೊಂಡರೆ ಶುದ್ಧನಾಗುವನು.

ಶೌಚೇ ಯತ್ನಃ ಸದಾ ಕಾರ್ಯೋ ಶೌಚಮೂಲೋ ದ್ವಿಜಃ ಸ್ಮೃತಃ ।
ಶೌಚಾಚಾರವಿಹೀನಸ್ಯ ಸಮಸ್ತಾ ನಿಷ್ಫಲಾಃ ಕ್ರಿಯಾಃ ॥ ೨೮ ॥

ಬ್ರಾಹ್ಮಣನಾದವನು ಶೌಚಾಚಾರದಲ್ಲಿ ಪ್ರಯತ್ನಿಸತಕ್ಕದ್ದು. ಯಾಕಂದರೆ ಶೌಚಾಚಾರಮೂಲಕವೇ ಬ್ರಾಹ್ಮಣತ್ವವು ಸಿದ್ಧಿಸುತ್ತದೆ. ಯಾವಾತನು ಶೌಚಾಚಾರ ರಹಿತನಾಗಿರುವನೋ ಆತನು ಮಾಡುವ ಸಕಲ ಕಾರ್ಯಗಳೂ ವ್ಯರ್ಥಗಳೇ ಸರಿ.

ಜಲೇ ವಿಣ್ಮೂತ್ರಗಂಡೂಷಾನ್ ಯೇ ಕುರ್ವಂತಿ ನರಾಧಮಾಃ ।
ಆಬ್ರಹ್ಮಕಲ್ಪಪರ್ಯಂತಂ ಕುಂಭೀಪಾಕೇ ವಸಂತಿ ತೇ ।

ಯಾವ ನೀಚರು ನೀರಿನಲ್ಲಿ ಮಲ-ಮೂತ್ರ-ಬಾಯಿಎಂಜಲನ್ನು ಹಾಕುವರೋ ಅವರು ಬ್ರಹ್ಮಪ್ರಳಯದವರೆಗೂ ಕುಂಭೀಪಾಕವೆಂಬನರಕದಲ್ಲಿ ದುಃಖವನ್ನನುಭವಿಸುತ್ತಾರೆ.

ಚತುರಷ್ಟದ್ವಿಷಡ್ದ್ವ್ಯಷ್ಟಗಂಡೂಷೈಃ ಶುದ್ಧ್ಯತೇ ಕ್ರಮಾತ್ ।
ಮೂತ್ರೇ ಪುರೀಷೇ ಭುಕ್ತ್ಯಂತೇ ರೇತಃಸಂಸ್ರವಣೇಪಿ ಚ ॥ ೩೦ ॥

ಮೂತ್ರಶೌಚದಲ್ಲಿ ನಾಲ್ಕಾವರ್ತಿಯೂ ಮಲದಲ್ಲಿ ಎಂಟು ಸರತಿಯೂ, ಭೋಜನಾಂತ್ಯದಲ್ಲಿ ಹನ್ನೆರಡು ಸರತಿಯೂ ರೇತಪಾತವಾದಾಗ ಹದಿನಾರಾವರ್ತಿಯೂ ಬಾಯಿ ಮುಕ್ಕಳಿಸಬೇಕು.

ಪುರತಃ ಸರ್ವದೇವಾಶ್ಚ ದಕ್ಷಿಣೇ ಪಿತರಸ್ತಥಾ ।
ಪೃಷ್ಠತೋ ಋಷಯಃ ಸರ್ವೇ ವಾಮೇ ಗಂಡೂಷಮುತ್ಸೃಜೇತ್ ॥ ೩೧ ॥

ಮುಂಗಡೆಯಲ್ಲಿ ಸಕಲ ದೇವತೆಗಳೂ ಬಲಗಡೆಯಲ್ಲಿ ಪಿತೃಗಳೂ ಹಿಂಗಡೆಯಲ್ಲಿ ಋಷಿಗಳೂ ಇರುವ ಕಾರಣ ಎಡಭಾಗದಲ್ಲಿ ಬಾಯಿಮುಕ್ಕಳಿಸಿದ ನೀರನ್ನು ಹಾಕತಕ್ಕದ್ದು.

ಅದ್ಭಿಸ್ತು ಪ್ರಕೃತಿಸ್ಥಾಭಿರ್ಹೀನಾಭಿಃ ಫೇನಬುದ್ಬುದೈಃ ।
ಹೃತ್ಕಂಠತಾಲುಗಾಭಿಸ್ತು ಯಥಾ ಸಂಖ್ಯಂ ದ್ವಿಜಾತಯಃ ।
ಶುಧ್ಯೇರನ್ಸ್ತ್ರೀ ಚ ಶೂದ್ರಶ್ಚ ಸಕೃತ್ಸ್ಪೃಷ್ಟಾಭಿರಂತತಃ ॥ ೩೨ ॥

ಸ್ವಾಭಾವಿಕವಾಗಿಯೂ (ಮಿಶ್ರಣರಹಿತ) ನೊರೆಗುಂಬಳಿಕೆಗಳಿಂದ ರಹಿತವಾಗಿಯೂ ಇರುವ ಜಲವನ್ನು ಬ್ರಾಹ್ಮಣನಾದವನು ಹೃದಯಕ್ಕೆ ಮುಟ್ಟುವಂತೆಯೂ, ಕ್ಷತ್ರಿಯನು ಕುತ್ತಿಗೆಗೆ ಮುಟ್ಟುವಂತೆಯೂ ವೈಶ್ಯನು. ತಾಲು (ಅಂಗಳಿನ ಮುಂಭಾಗ) ವಿಗೆ ಮುಟ್ಟುವಂತೆಯೂ ಆಚಮನ ಮಾಡತಕ್ಕದ್ದು ಅಂದರೆ ಶುದ್ಧರಾಗುವರು. ಸ್ತ್ರೀ ಮತ್ತು ಶೂದ್ರರು ಒಂದಾವರ್ತಿ ಬಾಯೊಳಗೆ ಮುಟ್ಟುವಂತಾದರೆ ಸಾಕಾಗುವದು.

ಪ್ರಕ್ಷಾಳ್ಯ ಪಾದೌ ಹಸ್ತೌ ಚ ಮುಖಂ ಚ ಸುಸಮಾಹಿತಃ ।
ದಕ್ಷಿಣಂ ಬಾಹುಮುದ್ಧೃತ್ಯ ಜಾನ್ವಂತರಕರಸ್ತತಃ ॥ ೩೩ ॥

ಆಚಮನ ಮಾಡುವಾಗ ಪಾದಗಳನ್ನೂ, ಹಸ್ತಗಳನ್ನೂ, ಮುಖವನ್ನೂ ಪ್ರಕ್ಷಾಳನ ಮಾಡಿಕೊಂಡು ಮನಸ್ಸನ್ನು ಸಮಾಧಾನದಲ್ಲಿಟ್ಟು ಮೊಣಕಾಲೊಳಗೆ ಕೈಯನ್ನು ಮಾಡಿಕೊಂಡು ಬಲಗೈಯನ್ನೆತ್ತಿ ಆಚಮನ ಮಾಡುವದು.

ಗೋಕರ್ಣಾಕೃತಿಹಸ್ತೇನ ಮಾಷಮಗ್ನಂ ಜಲಂ ಪಿಬೇತ್ ।
ತನ್ನ್ಯೂನಮಧಿಕಂ ಪೀತ್ವಾ ಸುರಾಪಾನಸಮಂ ಭವೇತ್ ॥ ೩೪ ॥

ಗೋಕರ್ಣಾಕೃತಿಯಾದ ಕರದಿಂದ ಮಾಷಮಗ್ನಪರಿಮಿತವಾದ ಜಲವನ್ನು ಪ್ರಾಶನ ಮಾಡತಕ್ಕದ್ದು. ಆಚಮನದಲ್ಲಿ ಇದಕ್ಕಿಂತ ಕಡಿಮೆ ಅಥವಾ ಹೆಚ್ಚು ಕುಡಿದರೆ ಮದ್ಯಪಾನಕ್ಕೆ ಸರಿಯಾಗುವದು.

ಅಂಗುಷ್ಠಾಗ್ರಂ ಸಮಾಕುಂಚ್ಯ ಮಧ್ಯಮಾ ಮಧ್ಯಪರ್ವಣಿ ।
ಯೋಜಯಿತ್ವಾಚಮೇತ್ಪ್ರಜ್ಞ ಏಷ ಗೋಕರ್ಣಸಂಜ್ಞಿತಃ ॥ ೩೫ ॥

ಅಂಗುಷ್ಠ ತುದಿಯನ್ನು ಮಡಚಿ ಬೆರಳಿನ ಮಧ್ಯಪರ್ವದಲ್ಲಿಟ್ಟರೆ ಗೋಕರ್ಣಾಕೃತಿಯಾಗುತ್ತದೆ. ಇದೇ ಕ್ರಮದಲ್ಲಿ ಆಚಮನ ಮಾಡತಕ್ಕದ್ದು. "ಮುಕ್ತ್ವಾಂಗುಷ್ಠ ಕನಿಷ್ಠಾಭ್ಯಾಮೇತನ್ಮಾಷಮಿತಂ ಭವೇತ್" ಅಂದರೆ ಕೈಯನ್ನು ಕೊಟ್ಟಿಯಾಗಿ ಮಾಡಿಕೊಂಡು ಕನಿಷ್ಠಿಕೆ ಅಂಗುಷ್ಠಗಳನ್ನು ನೀಡಿದರೆ ಕೈಯಲ್ಲಿ ಎಷ್ಟು ನೀರು ನಿಲ್ಲುವದೋ ಅದಕ್ಕೆ ಮಾಷಮಿತವೆಂದೆನ್ನುತ್ತಾರೆ.

ಅಂತರ್ಜಾನುಃ ಶುಚೌ ದೇಶೇ ಉಪವಿಷ್ಟ ಉದಙ್ಮುಖಃ ।
ಪ್ರಾಗ್ವಾ ಬ್ರಾಹ್ಮೇನ ತೀರ್ಥೇನ ದ್ವಿಜೋ ನಿತ್ಯಮುಪಸ್ಪೃಶೇತ್ ॥ ೩೬ ॥

ಮೊಣಕಾಲುಗಳನ್ನು ಒಳಗೆ ಮಾಡಿಕೊಂಡು ಶುದ್ಧವಾದ ಪ್ರದೇಶದಲ್ಲಿ ಕುಳಿತು ಉತ್ತರ ಅಥವಾ ಪೂರ್ವದಿಕ್ಕಿಗೆ ಮೋರೆ ಮಾಡಿಕೊಂಡು ಬ್ರಾಹ್ಮತೀರ್ಥ (ಅಂಗುಷ್ಠಮೂಲ) ದಿಂದ ಆಚಮನ ಮಾಡುವದು.

ಕನಿಷ್ಠಾದೇಶಿನ್ಯಂಗುಷ್ಠಮೂಲಾನ್ಯಗ್ರಂ ಕರಸ್ಯ ಚ ।
ಪ್ರಜಾಪತಿಪಿತೃಬ್ರಹ್ಮದೇವತೀರ್ಥಾನ್ಯನುಕ್ರಮಾತ್ ॥ ೩೭ ॥

ಕನಿಷ್ಠಾಮೂಲದ ಜಲಕ್ಕೆ ಪ್ರಜಾಪತಿ ತೀರ್ಥವೆಂದೂ ಹಸ್ತದ ತರ್ಜನೀಮೂಲದ ಜಲಕ್ಕೆ ಪಿತೃತೀರ್ಥವೆಂದೂ ಅಂಗುಷ್ಠ ಮೂಲದ ಜಲಕ್ಕೆ ಬ್ರಹ್ಮತೀರ್ಥವೆಂದೂ ಹಸ್ತದ ತುದಿಯ ಜಲಕ್ಕೆ ದೇವತೀರ್ಥವೆಂದೂ ಎನ್ನುವರು.

ಕೃತ್ವಾದೌ ಪಾದಶೌಚಂ ವಿಮಲಮಥಜಲೈಸ್ತ್ರಿಃ ಪಿಬೇದ್ವಿರ್ಮೃಜೇದ್ವಿ ।
ರ್ದೇಶಿನ್ಯಂಗುಷ್ಠಯುಗ್ಮಾತ್ಸಜಲಮಭಿಮೃಶೇನ್ನಾಸಿಕಾರಂಧ್ರಯುಗ್ಮಂ ।
ಅಂಗುಷ್ಠಾನಾಮಿಕಾಭ್ಯಾಂ ನಯನಮಥಯುಗಂ ಕರ್ಣಯುಗ್ಮೇ ಕನಿಷ್ಠಾಂ।
ಗುಷ್ಠಾಭ್ಯಾಂ ನಾಭಿಮೂಲೇ ಹೃದಯಮಥತಲೇನಾಂಗುಲೀಭಿಃ ।
ಶಿರೋಂಸೌ ॥ ೩೮ ॥

ಮೊದಲು ಪಾದಗಳನ್ನು ನಿರ್ಮಲೋದಕಗಳಿಂದ ಒರಿಸಿಕೊಂಡು ಮೂರು ಸರ್ತಿಆಚಮನ ಮಾಡಿ ಎರಡಾವರ್ತಿ ಮುಖವನ್ನು ಒರಿಸಿಕೊಂಡು ತರ್ಜನಿ ಮತ್ತು ಅಂಗುಷ್ಠ ಈ ಎರಡು ಬೆರಳುಗಳಿಂದ ಜಲಸಹಿತವಾಗಿ ಮೂಗಿನ ಸೊಳ್ಳೆಗಳನ್ನೂ ಅಂಗುಷ್ಠ ಅನಾಮಿಕೆಗಳಿಂಪ ನೇತ್ರಗಳನ್ನೂ ಕನಿಷ್ಠ ಅಂಗುಷ್ಠ ಇವುಗಳಿಂಪ ಎರಡು ಕಿವಿಗಳನ್ನೂ ಹಸ್ತದ ತಳದಿಂದ ನಾಭಿಮೂಲವನ್ನೂ ಎದೆಯನ್ನೂ ಬೆರಳುಗಳ ಒಟ್ಟುಗೂಡುವಿಕೆಯಿಂಪ ಶಿರಸ್ಸು ಹೆಗಲುಗಳನ್ನೂ ಮುಟ್ಟತಕ್ಕದ್ದು. (ಇದಕ್ಕೆ ಆಚಮನಶೇಷವೆನ್ನುವರು.)

ಸೋಮಾರ್ಕವೇದಾನಲವಾಯವಶ್ಚ ವಿಪ್ರಸ್ಯ ವಾಮೇತರಕರ್ಣ ಏತೇ ।
ತಿಷ್ಠಂತಿ ತಸ್ಮಾಜ್ಜಪಹೋಮಕಾಲೇ ಶುಚಿಃ ಸ್ಪೃಶನ್ನಾಚಮನೇಽಸಮರ್ಥಃ ॥ ೩೯ ॥

ಬ್ರಾಹ್ಮಣನ ಬಲ ಕಿವಿಯಲ್ಲಿ ಚಂದ್ರ, ಸೂರ್ಯ, ವೇದ, ಅಗ್ನಿ, ವಾಯು ಈ ದೇವತೆಗಳಿರುತ್ತಾರೆ.- ಜಪಹೋಮಾದಿಗಳ ಮಧ್ಯದಲ್ಲಿ ಯಾವದಾದರೊಂದು ಕಾರಣದಿಂದ ಆಚಮನ ಮಾಡಲಿಕ್ಕೆ ಅನುಕೂಲವಿಲ್ಲದಿದ್ದರೆ ಬಲಕಿವಿಯನ್ನು ಮುಟ್ಟಿದರೂ ಶುದ್ಧನಾಗುವನು.

ಕ್ಷುತೇ ನಿಷ್ಠೀವನೇ ಚೈವ ದಂತೋಚ್ಛಿಷ್ಟೇ ತಥಾನೃತೇ ।
ಪತಿತಾನಾಂ ಚ ಸಂಭಾಷೇ ದಕ್ಷಿಣಂ ಶ್ರವಣಂ ಸ್ಪೃಶೇತ್ ॥ ೪೦ ॥

ಸೀನು ಬಂದಾಗಲೂ, ಎಂಜಲುಗುಳುವಿಕೆಯಲ್ಲೂ ಹಲ್ಲಿನ ಎಂಜಲು ತಾಗಿದಾಗಲೂ ಸುಳ್ಳಾಡಿದಾಗಲೂ ಪತಿತ (ನೀಚ) ರ ಸಂಭಾಷಣ ಮಾಡಿದಾಗಲೂ ಆಚಮನದ ಬದಲು ಬಲಕಿವಿಯನ್ನು ಮುಟ್ಟಿಕೊಳ್ಳತಕ್ಕದ್ದು.

ಭೋಜನೇ ಹವನೇ ದಾನೇ ಉಪಹಾರೇ ಪ್ರತಿಗ್ರಹೇ ।
ಸಂಧ್ಯಾತ್ರಯೇಂಬುಪಾನೇಷು ಪೂರ್ವಂ ಪಶ್ಚಾದ್ವಿರಾಚಮಃ ॥ ೪೧ ॥

ಊಟದಲ್ಲಿಯೂ ಹೋಮದ ಕಾಲದಲ್ಲಿಯೂ ದಾನ ಕೊಡುವಾಗಲೂ ಉಪಹಾರ ಕಾಲದಲ್ಲೂ ಪ್ರತಿಗ್ರಹ ಮಾಡುವಾಗಲೂ ಮೂರೂ ಸಂಧ್ಯಾವಂದನ ಕಾಲದಲ್ಲೂ ಜಲಪಾನ ಮಾಡುವಾಗಲೂ ಮೊದಲು ಮತ್ತು ಕಡೆಗೂ ಸಹ ಆಚಮನ ಮಾಡತಕ್ಕದ್ದು.

ಕಂಟಕೀಕ್ಷೀರವೃಕ್ಷೋತ್ಥಂ ದ್ವಾದಶಾಂಗುಲಸಂಮಿತಂ ।
ಕನಿಷ್ಠಿಕಾಗ್ರವತ್ಸ್ಥೂಲಂ ಪರ್ವಾರ್ಧಕೃತಕೂರ್ಚಕಂ ॥ ೪೨ ॥
ದಂತಧಾವನದಾರೂಕ್ತಂ ಜಿಹ್ವಾಲೇಖನಿಕಾ ತಥಾ ।
ಸಂಶೋಧ್ಯ ಕಾಷ್ಠಂ ಪ್ರಕ್ಷಾಳ್ಯ ಶುಚೌ ದೇಶೇ ಸಮುತ್ಸೃಜೇತ್ ॥ ೪೩ ॥

ಹಾಲುಳ್ಳ (ತೊಗಟೆಯಲ್ಲಿ ಬಿಳೀ ರಸವು ಹೊರಡುವ) ಮುಳ್ಳುಗಳಿಂದ ಯುಕ್ತವಾದ ವನಸ್ಪತಿಯ ಕಿರಿ ಬೆರಳಿನಷ್ಟು ಗಾತ್ರವಾದ ೧೨ ಅಂಗುಲ ಪರಿಮಾಣವುಳ್ಳ ಕಾಷ್ಠವನ್ನು ದಂತಧಾವನ (ಹಲ್ಲು ತಿಕ್ಕುವದು)ಕ್ಕಾಗಿ ತಯಾರು ಮಾಡಿಕೊಳ್ಳತಕ್ಕದ್ದು. ಗಂಟಿನ ಅರ್ಧದಷ್ಟು ತುದಿಯ ಕುಂಚವನ್ನು ಮಾಡಿಕೊಂಡು ಹಲ್ಲುಗಳನ್ನು ಉಜ್ಜಿ ನಾಲಿಗೆಯನ್ನು ಕೆರಸಿ ಚನ್ನಾಗಿ ತೊಳೆದು ಒಳ್ಳೇ ಜಾಗದಲ್ಲಿ ಒಗೆಯತಕ್ಕದ್ದು.

ಆಯುರ್ಬಲಂ ಯಶೋವರ್ಚಃ ಪ್ರಜಾಃ ಪಶುವಸೂನಿ ಚ ।
ಬ್ರಹ್ಮಪ್ರಜ್ಞಾಂ ಚ ಮೇಧಾಂ ಚ ತ್ವಂ ನೋ ದೇಹಿ ವನಸ್ಪತೇ ॥ ೪೪ ॥

ಹಲ್ಲು ತಿಕ್ಕುವ ಕಡ್ಡಿಯನ್ನು ಸಂಗ್ರಹಿಸುವಾಗ ಹೀಗೆ ಹೇಳಬೇಕು. ಹೇ ವನಸ್ಪತಿಯೇ, ನನಗೆ ಆಯುಷ್ಯವನ್ನೂ ಬಲ, ಯಶಸ್ಸು, ಓಜಸ್ಸು, ಪ್ರಜೆಗಳು, ಪಶು, ದ್ರವ್ಯ, ವೇದಜ್ಞಾನ, ಬುದ್ಧಿ ಧಾರಣಾಶಕ್ತಿ ಇವುಗಳನ್ನು ಕೊಡು.

ಅಂಗಾರವಾಲುಕಾಭಿಶ್ಚ ಭಸ್ಮಾಂಗಾರನಖೈರಪಿ ।
ಇಷ್ಟಿಕಾಲೋಷ್ಟಪಾಷಾಣೈರ್ನ ಕುರ್ಯಾದ್ದಂತಧಾವನಂ ॥ ೪೫ ॥

ಮಶಿ ಕೆಂಡ, ಮರಳು, ಬೂದಿ, ಉಗುರು, ಇಟ್ಟಂಗಿ, ಮಣ್ಣುಹೆಂಟೆ, ಕಲ್ಲು ಇವುಗಳಿಂದ ಹಲ್ಲನ್ನು ತಿಕ್ಕಬಾರದು.

ಪ್ರತಿಪದ್ದರ್ಶಷಷ್ಠೀಷು ಚತುರ್ದಶ್ಯಷ್ಟಮೀಷು ಚ ।
ದ್ವಾದಶ್ಯಾಂ ಚ ನವಮ್ಯಾಂ ಚ ವರ್ಜಯೇದ್ದಂತಧಾವನಂ ॥ ೪೬ ॥

ಪ್ರತಿಪದಿ, ಅಮಾವಾಸ್ಯೆ, ಷಷ್ಠಿ, ಚತುರ್ದಶಿ, ಅಷ್ಟಮಿ, ದ್ವಾದಶಿ, ನವಮಿ ಈ ತಿಥಿಗಳಲ್ಲಿ ದಂತಧಾವನೆಯನ್ನು ಮಾಡಕೂಡದು. (ಸಾಮಾನ್ಯ ವಾಕ್ಯವಿದು.)

ತೃಣಪರ್ಣೈಃ ಸದಾ ಕುರ್ಯಾದಮಾಂಚೈಕಾದಶೀಂ ವಿನಾ ।
ತಯೋರಪಿ ಚ ಕರ್ತವ್ಯಂ ಜಂಬೂನಿಂಬಾಮ್ರಪಲ್ಲವೈಃ ॥ ೪೭ ॥

ಉಕ್ತ ಹುಲ್ಲು ಎಲೆಗಳಿಂದ ಅಮಾವಾಸ್ಯೆ ಏಕಾದಶಿಗಳ ಹೊರತಾಗಿ ಎಲ್ಲಾ ತಿಥಿಗಳಲ್ಲಿಯೂ ದಂತಧಾವನೆಯನ್ನು ಮಾಡುವದು. ಅಥವಾ ನೇರಳೆ, ಕೈಬೇವು, ಮಾವಿನ ಚಿಗುರು ಇವುಗಳಿಂದ ಅವುಗಳಲ್ಲಿಯಾದರೂ ಮಾಡಬಹುದು.

ಉದಿತೇ ಚ ಸಹಸ್ರಾಂಶೌ ಯಃ ಕುರ್ಯಾದ್ದಂತಧಾವನಂ ।
ಸವಿತಾ ಭಕ್ಷಿತಸ್ತೇನ ಪಿತೃವಂಶಸ್ಯ ಘಾತುಕಃ ॥ ೪೮ ॥

ಸೂರ್ಯನು ಮೂಡಿದ ಮೇಲೆ ಯಾವಾತನು ದಂತಧಾವನೆಯನ್ನು ಮಾಡುತ್ತಾನೋ ಆತನು ಸೂರ್ಯನನ್ನೇ ತಿಂದ ಹಾಗೆ. ಮತ್ತು ಪಿತೃವಂಶವನ್ನು ನಾಶಮಾಡಿದವನಂತೆಯೇ ಸರಿ.

ಮಾಸೇ ನಭಸ್ಯಮಾವಾಸ್ಯಾ ತಸ್ಯಾಂದರ್ಭೋಚ್ಚಯೋ ಮತಃ ।
ಅಯಾತಯಾಮಾಸ್ತೇ ದರ್ಭಾನಿಯೋಜ್ಯಾಶ್ಚ ಪುನಃ ಪುನಃ ॥ ೪೯ ॥

ಶ್ರಾವಣ ಬಹುಳ ಅಮಾವಾಸ್ಯೆಯಲ್ಲಿ ದರ್ಭೆ ಸಂಗ್ರಹ ಮಾಡತಕ್ಕದ್ದು. ಅದು ಯಾವಾಗಲೂ ದೂಷಿಸಲ್ಪಡದೆ ಪದೇ ಪದೇ ಉಪಯೋಗಿಸಲರ್ಹವಾಗುವದು.

ಕುಶಾಃ ಕಾಶಾಯವಾ ದೂರ್ವಾ ಗೋಧೂಮಾಶ್ಚಾಥ ಕುಂದುರಾಃ ।
ಉಶೀರಾವ್ರೀಹಯೋ ಮುಂಜಾ ದಶದರ್ಭಾಃ ಸಬಲ್ವಜಾಃ ॥ ೫೦ ॥

ಕುಶ, ಕಾಶ, ಯವ, ದೂರ್ವಾ, ಗೋಧೂಮ, ಕುಂದುರ, ಉಶೀರ, ವ್ರೀಹಿ, ಮುಂಜ, ಬಲ್ವಜ ಹೀಗೆ ಹತ್ತು ವಿಧ ದರ್ಭೆಗಳು ಹೇಳಲ್ಪಟ್ಟವೆ.

ಅಗ್ರೇ ಸ್ಥೂಲಂಭವೇನ್ನಾರೀ ಮಧ್ಯೇ ಸ್ಥೂಲಂ ನಪುಂಸಕಃ ।
ಅಗ್ರಮೂಲಸಮುಶ್ಚೈವ ಪುಮಾನ್ ದರ್ಭಸ್ಯ ಲಕ್ಷಣಂ ॥ ೫೧ ॥

ತುದಿಯಲ್ಲಿ ಗಡುತರವಾದದ್ದು ಸ್ತ್ರೀದರ್ಭೆಯು. ಬುಡದಲ್ಲಿ ಸ್ಥೂಲವಾದದ್ದು ನಪುಂಸಕವು. ಬುಡವೂ ತುದಿಯೂ ಸರಿಯಾಗುಳ್ಳ ದರ್ಭೆಯು ಪುರುಷ ದರ್ಭೆಯು. (ಪುರುಷ ದರ್ಭೆಯು ಶ್ರೇಷ್ಠವು) ಹೀಗೆ ದರ್ಭೆಯ ಲಕ್ಷಣವು.

ಪೌಷ್ಟಿಕೇ ಪಂಚದರ್ಭಾಃಸ್ಯುಶ್ಚತ್ವಾರೋ ಯಜ್ಞಕರ್ಮಣಿ ।
ಪಿತೃಯಜ್ಞೇತ್ರಯೋದರ್ಭಾ ದ್ವಾವದರ್ಭೌ ನಿತ್ಯಕರ್ಮಣಿ ॥ ೫೨ ॥

ಶಾಂತಿಕ ಪೌಷ್ಟಿಕ ಕಾರ್ಯಗಳಲ್ಲಿ ಪವಿತ್ರವನ್ನು ಐದು ದರ್ಭೆಗಳಿಂದಲೂ ಯಜ್ಞಾದಿ ಕಾರ್ಯಾಂತರಗಳಲ್ಲಿ ನಾಲ್ಕು ದರ್ಭೆಗಳಿಂದಲೂ ಶ್ರಾದ್ಧಾದಿ ಪಿತೃಕಾರ್ಯಗಳಲ್ಲಿ ಮೂರು ದರ್ಭೆಗಳಿಂದಲೂ ನಿತ್ಯಕರ್ಮಗಳಲ್ಲಿ ಎರಡು ದರ್ಭೆಗಳಿಂದಲೂ ತಯ್ಯಾರಿಸತಕ್ಕದ್ದು.

ಅಗ್ರಂ ಪ್ರದಕ್ಷಿಣೀಕೃತ್ಯ ಪೂರ್ವರಂಧ್ರಾದ್ವಿನಿರ್ಗತಂ ।
ಅಧೋ ರಂಧ್ರಾದ್ವಿನಿರ್ಗತ್ಯ ಪವಿತ್ರಸ್ಯತು ಲಕ್ಷಣಂ ॥ ೫೩ ॥

ದರ್ಭೆಯ ತುದಿಯನ್ನು ಪ್ರದಕ್ಷಿಣಾಕಾರವಾಗಿ ಮಾಡಿ ಮೊದಲಿನ ರಂಧ್ರದಲ್ಲಿ ಪ್ರವೇಶಿಸಿ ಕೆಳಗಿನ ರಂಧ್ರದಲ್ಲಿ ಹೋಗುವಂತೆ ಮಾಡಿ ಕೂಡಿಸಿದರೆ ಪವಿತ್ರವು ತಯಾರಾಗುವದು. (ಇದನ್ನು ಕಣ್ಣಿನಿಂದ ನೋಡಿ ತಿಳಕೊಳ್ಳುವದು.)

ಅನಾಮಿಕಾ ಮೂಲದೇಶೇ ಬ್ರಾಹ್ಮಣಸ್ಯ ಪವಿತ್ರಕಂ ।
ರಾಜನ್ಯಸ್ಯ ಚ ಮಧ್ಯೇತು ವೈಶ್ಯಸ್ಯಾಗ್ರೇ ಸಮೀರಿತಂ ॥ ೫೪ ॥

ಬ್ರಾಹ್ಮಣನು ಪವಿತ್ರವನ್ನು ಅನಾಮಿಕಾ ಬೆರಳಿನ ಬುಡದಲ್ಲಿಯೂ ಕ್ಷತ್ರಿಯನು ಮಧ್ಯದಲ್ಲೂ ವೈಶ್ಯನು ತುದಿಯಲ್ಲೂ ಧರಿಸತಕ್ಕದ್ದು.

ದಾರ್ಭಂ ಪವಿತ್ರಂ ತಾಮ್ರಂ ವಾ ರಾಜತಂ ಹೈಮಮೇವ ವಾ ।
ಭೂಷಣಂ ದಕ್ಷಿಣೇ ಪಾಣೌ ಪವಿತ್ರಂ ಚೋತ್ತರೋತ್ತರಂ ॥ ೫೫ ॥

ಪವಿತ್ರವನ್ನು ದರ್ಭೆಯಿಂದಲಾಗಲೀ, ತಾಮ್ರ, ಬೆಳ್ಳಿ, ಬಂಗಾರಗಳಿಂದಾಗಲೀ ತಯಾರಿಸಬೇಕು. ದರ್ಭೆಗಿಂತ ತಾಮ್ರವೂ, ತಾಮ್ರಕ್ಕಿಂತ ಬೆಳ್ಳಿಯೂ

ಅದಕ್ಕಿಂತ ಚಿನ್ನದ್ದೂ ಹೆಚ್ಚು ಹೆಚ್ಚು ಶ್ರೇಷ್ಠವಾದವುಗಳು. ಇದು ಬಲಗೈಗೆ ಒಂದಾಭರಣದಂತಿರುವದು.

ಸಪವಿತ್ರೇಣ ಹಸ್ತೇನ ಕುರ್ಯಾದಾಚಮನಕ್ರಿಯಾಂ ।
ನೋಚ್ಛಿಷ್ಟಂ ತತ್ಪವಿತ್ರಂ ತು ಭುಕ್ತ್ವೋಚ್ಛಿಷ್ಟಂ ತು ವರ್ಜಯೇತ್ ॥ ೫೬ ॥

ಪವಿತ್ರವನ್ನು ಕೈಯಲ್ಲಿ ಧರಿಸಿಕೊಂಡು ಆಚಮನ ಮಾಡತಕ್ಕದ್ದು. ಎಷ್ಟು ಕಾರ್ಯಗಳನ್ನು ಮಾಡಿದರೂ ಪವಿತ್ರವು ಉಚ್ಛಿಷ್ಟ (ತ್ಯಾಜ್ಯ) ವಾಗುವದಿಲ್ಲ. ಊಟ ಮಾಡುವಾಗ ಧರಿಸಿದ ಪವಿತ್ರವು ಮಾತ್ರ ತ್ಯಾಜ್ಯವಾಗುವದು.

ಕುಶೈಃ ಪೂತಂ ಭವೇತ್ಸ್ನಾನಂ ಕುಶೇನೋಪಸ್ಪೃಶೇದಪಃ ।
ಕುಶೇನ ಚೋದ್ಧೃತಂ ತೋಯಂ ಸೋಮಪಾನೇನ ಸಂಮಿತಂ ॥ ೫೭ ॥

ದರ್ಭೆಯಿಂದ ಸಹಿತನಾಗಿ ಸ್ನಾನ ಮಾಡತಕ್ಕದ್ದು. ದರ್ಭೆಯಿಂದ ಸಹಿತನಾಗಿ ಆಚಮನ ಮಾಡತಕ್ಕದ್ದು. ದರ್ಭೆಯಿಂದ ಸಹಿತವಾದ ಜಲವನ್ನು ಪ್ರಾಶನ ಮಾಡಿದರೆ ಸೋಮಪಾನ ಮಾಡಿದ ಫಲವು ಪ್ರಾಪ್ತವಾಗುವದು. (ಅಷ್ಟು ಪವಿತ್ರವೆಂದರ್ಥವು.)

॥ ಇತ್ಯಾಚಾರವಿಧೌ ಶೌಚಾಚಾರಾಧ್ಯಾಯಃ ಪ್ರಥಮಃ ॥

ಆಚಾರವಿಧಿಯಲ್ಲಿ ಮೊದಲನೇ ಅಧ್ಯಾಯವು ಮುಗಿದುದು.

॥ ಅಥ ದ್ವಿತೀಯೋಽಧ್ಯಾಯಃ ॥

ಎರಡನೇ ಅಧ್ಯಾಯ ಪ್ರಾರಂಭವು.

ಸ್ನಾನಂ ಸಂಧ್ಯಾ ಜಪೋ ಹೋಮಃ ಸ್ವಾಧ್ಯಾಯೋ ದೇವತಾರ್ಚನಂ ।
ಆತಿಥ್ಯಂ ವೈಶ್ವದೇವಶ್ಚ ನಿತ್ಯಮಿತ್ಯಭಿಧೀಯತೇ । ॥ ೧ ॥

ಸ್ನಾನ, ಸಂಧ್ಯಾವಂದನ, ಜಪ, ಹೋಮ, (ಔಪಾಸನ) ವೇದಾಭ್ಯಾಸ, ದೇವಪೂಜಾ, ಅತಿಥಿ ಭೋಜನ, ವೈಶ್ವದೇವ, ಈ ಕರ್ಮಗಳು ನಿತ್ಯಕರ್ಮಗಳೆನ್ನಲ್ಪಡುವವು.

ಅತ್ಯಂತಮಲಿನಃ ಕಾಯೋ ನವಛಿದ್ರಸಮನ್ವಿತಃ ।
ಸ್ರವತ್ಯೇಷ ದಿವಾರಾತ್ರೌ ಪ್ರಾತಃ ಸ್ನಾನಂ ವಿಶೋಧನಂ ॥ ೨ ॥

ಈ ದೇಹ (ಪಾಂಚಭೌತಿಕ) ವು ಅತ್ಯಂತ ಹೊಲಸಾದದ್ದು. ಒಂಭತ್ತು ದ್ವಾರಗಳಲ್ಲಿ ಹಗಲೂ ರಾತ್ರಿಯೂ ಮಲ (ಕೀಟ) ವು ಸ್ರವಿಸುತ್ತಿರುವದು. ಪ್ರಾತಃಕಾಲದಲ್ಲಿ ಸ್ನಾನ ಮಾಡಿದರೆ ಅದನ್ನು ಚೊಕ್ಕಟ ಮಾಡಿದಂತಾಗುತ್ತದೆ.

ಪ್ರಾತಃ ಸ್ನಾತುಮಶಕ್ತಸ್ಯ ರೋಗಾದ್ಯೈರ್ವಾ ಭಯಾಚ್ಚ ವಾ ।
ಪೂರ್ವವಸ್ತ್ರಪರಿತ್ಯಾಗಾಚ್ಛುಚಿಸ್ತಸ್ಮಾದ್ಭವೇತ್ತದಾ ॥ ೩ ॥

ರೋಗಾದಿಗಳಿಂದಾಗಲೀ, ಭಯದ ದೆಸೆಯಿಂದಾಗಲೀ ಪ್ರಾತಃಕಾಲದಲ್ಲಿ ಸ್ನಾನ ಮಾಡುವದಶಕ್ಯವಾದರೆ ಮೊದಲಿನ ವಸ್ತ್ರವನ್ನಾದರೂ ಬಿಟ್ಟು ಅನ್ಯವಸ್ತ್ರವನ್ನು ಧರಿಸಿ ಕಾರ್ಯವನ್ನು ಮಾಡುವದು.

ಸಪ್ತಾಹಃ ಪ್ರಾತರಸ್ನಾಯೀ ದ್ವಿಜಃ ಶೂದ್ರತ್ವಮಾಪ್ನುಯಾತ್ ।
ತಸ್ಮಾತ್ ಸ್ನಾನಂ ಪ್ರಕರ್ತವ್ಯಂ ರವಿವಾರೇ ಸದೈವ ಹಿ ॥ ೪ ॥

ಬ್ರಾಹ್ಮಣನಾದವನು ಏಳು ದಿನಗಳೊಳಗೊಂದಾದರೂ ದಿನ ಪ್ರಾತಃಸ್ನಾನ ಮಾಡದಿದ್ದರೆ ಶೂದ್ರನಾಗುವನು. ಏಳು ದಿನಗಳಲ್ಲಿ ಸ್ನಾನ ಮಾಡುವದು ಆದಿತ್ಯವಾರವೇ ಉತ್ತಮವು.

ಮಾಂತ್ರಂ ಭೌಮಂ ತಥಾಗ್ನೇಯಂ ವಾಯವ್ಯಂ ದಿವ್ಯಮೇವ ಚ ॥
ವಾರುಣಂ ಮಾನಸಂ ಚೈವ ಸಪ್ತಸ್ನಾನಾನ್ಯನುಕ್ರಮಾತ್ ॥ ೫ ॥

ಮಾಂತ್ರ, ಭೂಮಿ, ಅಗ್ನಿ, ವಾಯು, ದಿವ್ಯ, ವಾರುಣ, ಮಾನಸ, ಹೀಗೆ ಸ್ನಾನದಲ್ಲಿ ಏಳು ಭೇದಗಳಿರುತ್ತವೆ.

ಆಪೋಹಿಷ್ಠಾದಿಭಿರ್ಮಾಂತ್ರಂ ಮೃದಾಲೇಪಸ್ತು ಪಾರ್ಥಿವಂ।
ಆಗ್ನೇಯಂ ಭಸ್ಮನಾಸ್ನಾನಂ ವಾಯುವ್ಯಂ ಗೋರಜಃ ಸ್ಮೃತಂ ॥ ೬ ॥

ಯತ್ತು ಸಾತಪವರ್ಷೇಣ ಸ್ನಾನಂ ತದ್ದಿವ್ಯಮುಚ್ಯತೇ।
ಅವಗಾಹೋ ವಾರುಣಂ ಚ ಮಾನಸಂ ವಿಷ್ಣುಚಿಂತನಂ ॥ ೭ ॥

ಆಪೋಹಿಷ್ಠಾದಿ ಮಂತ್ರಗಳಿಂದ ಮಾರ್ಜನ ಮಾಡಿಕೊಂಡರೆ ಮಂತ್ರ ಸ್ನಾನವಾಗುವದು. ಶುದ್ಧ ಮೃತ್ತಿಕೆಯನ್ನು ಮೈಗೆ ಒರಿಸಿಕೊಂಡರೆ ಪಾರ್ಥಿವ ಸ್ನಾನವೂ ಭಸ್ಮದಿಂದ ಒರಿಸಿಕೊಂಡರೆ ಆಗ್ನೇಯ ಸ್ನಾನವೂ ಗೋಧೂಳಿಯನ್ನು ತಳಿದುಕೊಂಡರೆ ವಾಯುವ್ಯಸ್ನಾನವು ಬಿಸಿಲು ಸಹಿತ ಮಳೆಯಿಂದ ಸ್ನಾನ ಮಾಡಿದರೆ ದಿವ್ಯಸ್ನಾನವೂ ಪ್ರವಾಹಾದಿಗಳಲ್ಲಿ ಮುಳುಗಿದರೆ ವಾರುಣಸ್ನಾನವೂ ವಿಷ್ಣುವನ್ನು ಮನಸ್ಸಿನಲ್ಲಿ ಧ್ಯಾನಿಸಿದರೆ ಮಾನಸಸ್ನಾನವೂ ಆಗುವದು.

ಗಲಾದಧಃಕ್ಷಾಳನಮೇವ ಕಂಠಸ್ನಾನಂ ಚ ನಾಭೌ ಕಟಿಸಂಜ್ಞಿಕಂ ತು।
ಆರ್ದ್ರೇಣ ವಸ್ತ್ರೇಣ ವಿಮೃಜ್ಯ ದೇಹಂ ಸ್ನಾನಂ ಭವೇತ್ಕಾಪಿಲಸಂಜ್ಞಿಕಂ ತು ॥ ೮ ॥

ಕುತ್ತಿಗೆಯಿಂದ ಕೆಳಗೆ ಸ್ನಾನ ಮಾಡಿದರೆ ಕಂಠ ಸ್ನಾನವೂ ನಾಭಿವರೆಗೆ ಮಾಡಿದರೆ ಕಟಿಸಂಜ್ಞಿತಸ್ನಾನವೂ ಒದ್ದೆ ವಸ್ತ್ರದಿಂದ ಒರಸಿಕೊಂಡರೆ ಕಾಪಿಲವೆಂಬ ಸ್ನಾನವೂ ಆಗುವದು.

ವಾರುಣೇನೈವ ವಿಪ್ರಸ್ತು ಪ್ರಾತಃ ಸರ್ವತ್ರ ಶಿಷ್ಯತೇ।
ವಿಧಿನಾ ವಿಧಿಹೀನಂ ತು ಸ್ನಾತೋಽಪ್ಯಸ್ನಾತ ಏವ ಸಃ ॥ ೯ ॥

ಬ್ರಾಹ್ಮಣನು ಪ್ರಾತಃಕಾಲದಲ್ಲಿ "ವಾರುಣ" ಸ್ನಾನವನ್ನು ವಿಧಿಪೂರ್ವಕವಾಗಿ ಮಾಡತಕ್ಕದ್ದು. ವಿಧಿಪೂರ್ವಕವಾಗಿ ಮಾಡದಿದ್ದರೆ ಸ್ನಾನ ಮಾಡಿದರೂ ಮಾಡದವನಂತೆಯೇ ಸರಿ.

ಪ್ರಾತರ್ಮಧ್ಯಾಹ್ನಯೋಃ ಸ್ನಾನಂ ವಾನಪ್ರಸ್ಥಗೃಹಸ್ಥಯೋಃ।
ಯತೇಸ್ತ್ರಿಷವಣಂ ಸ್ನಾನಂ ಸಕೃತ್ತು ಬ್ರಹ್ಮಚಾರಿಣಃ ॥ ೧೦ ॥

ವಾನಪ್ರಸ್ಥ, ಗೃಹಸ್ಥಾಶ್ರಮಿಗಳು ಪ್ರಾತಃಕಾಲ ಮಧ್ಯಾಹ್ನಗಳಲ್ಲಿ ಸ್ನಾನ ಮಾಡತಕ್ಕದ್ದು. ಯತಿಗಳು (ಸನ್ಯಾಸಿಗಳು) ಮೂರು ಕಾಲದಲ್ಲಿ ಸ್ನಾನ ಮಾಡುವದು. ಬ್ರಹ್ಮಚಾರಿಯು ಒಂದು ಹೊತ್ತು ಮಾಡುವದು.

ಚಕ್ಷೂರೋಗೀ ಕರ್ಣರೋಗೀ ಶಿರೋರೋಗೀ ಕಫಾಧಿಕಃ।
ಕಂಠಸ್ನಾನಂ ಪ್ರಕುರ್ವೀತ ಶಿರಃಸ್ನಾನಸಮಂ ಹಿ ತತ್ ॥ ೧೧ ॥

ನೇತ್ರರೋಗಿಯೂ, ಕಿವಿರೋಗವುಳ್ಳವನೂ, ತಲೆರೋಗವುಳ್ಳವನೂ, ಕಫರೋಗಿಯೂ, ಕಂಠಸ್ನಾನವನ್ನು ಮಾಡಬಹುದು. ಅದು ಅವನಿಗೆ ಶಿರಃಸ್ನಾನ ಸಮಾನವಾಗುವದು.

ಮಹಾನಿಶಾ ತು ವಿಜ್ಞೇಯಾ ಮಧ್ಯಸ್ಥಂ ಪ್ರಹರದ್ವಯಂ ।
ತಸ್ಯಾಂ ಸ್ನಾನಂ ನ ಕುರ್ವೀತ ಕಾಮ್ಯಮಾಚಮನಂ ತಥಾ ॥ ೧೨ ॥

ರಾತ್ರಿಯ ಮಧ್ಯದ ಎರಡು ಯಾಮುಗಳಿಗೆ ಕೂಡಿ ಮಹಾನಿಶಾ (ರಾತ್ರಿ) ಎಂಬ ಸಂಜ್ಞೆಯಿರುತ್ತದೆ. ಆಕಾಲದಲ್ಲಿ ಕಾಮ್ಯಸ್ನಾನವನ್ನೂ ಆಚಮನವನ್ನೂ ಮಾಡತಕ್ಕದ್ದಲ್ಲ.

ನದೀಸ್ನಾನಾನಿ ಪುಣ್ಯಾನಿ ತಡಾಗೇ ಮಧ್ಯಮಾನಿ ಚ ।
ವಾಪೀಕೂಪೇಜಘನ್ಯಾನಿ ಗೃಹೇಷ್ವತ್ಯವರಾಣಿ ಚ ॥ ೧೩ ॥

ನದೀ ಸ್ನಾನವು ಅತ್ಯಂತ ಪವಿತ್ರವಾದುದು. ಸರೋವರಾದಿಗಳ ಸ್ನಾನವು ಮಧ್ಯಮವು. ಇಳಿಭಾವಿ, ಭಾವಿಗಳಲ್ಲಿಳಿದು ಸ್ನಾನಮಾಡುವದು ಕನಿಷ್ಠವು. ಮನೆಯ ಬಚ್ಚಲಲ್ಲಿ ಸ್ನಾನಮಾಡುವದು ಹೀನದೊಳಗೆ ಹೀನವು.

ಕದಾಚಿದ್ವಿದುಷಾಮತ್ಯಾ ನ ಸ್ನಾತವ್ಯಂ ಪರಾಂಭಸಾ ।
ಪಂಚ ವಾ ಸಪ್ತ ವಾ ಪಿಂಡಾನ್ ಸ್ನಾಯಾದುದ್ಧೃತ್ಯ ತತ್ರ ತು ॥ ೧೪ ॥

ತಿಳಿದವನು ತಿಳಿದೂ ಬೇರೆಯವರ ಹಕ್ಕಿನಲ್ಲಿರುವ ಜಲದಿಂದ ಸ್ನಾನ ಮಾಡಬಾರದು. ಅಂಥ ಪ್ರಸಂಗ ಬಂದಲ್ಲಿ ಐದು ಅಥವಾ ಏಳು ಮಣ್ಣು ಮುದ್ದೆಗಳನ್ನು ಭಾವಿಯೊಳಗಿಂದ ತೆಗೆದುಹಾಕಿಕೊಂಡು ಸ್ನಾನಮಾಡುವದು.

ಸ್ರೋತಸೋಭಿಮುಖಃ ಸ್ನಾಯಾನ್ಮಾರ್ಜನಂ ಚಾಘಮರ್ಷಣಂ ।
ಸ್ಥಾವರೇಷು ಗೃಹೇ ಚೈವ ಸೂರ್ಯಸಂಮುಖಮಾಪ್ಲವೇತ್ ॥ ೧೫ ॥

ಮಾರ್ಜನ, ಅಘಮರ್ಷಣ, ಪಾರಾಯಣ, ಸ್ನಾನ, ಇವುಗಳನ್ನು ಪ್ರವಾಹದ ಸಮ್ಮುಖವಾಗಿ ಮಾಡತಕ್ಕದ್ದು. ಕೆರೆ ಮೊದಲಾದವುಗಳಲ್ಲಿಯೂ ಮನೆಯಲ್ಲಿಯೂ ಸೂರ್ಯನ ಸಮ್ಮುಖವಾಗಿ ಸ್ನಾನಮಾಡತಕ್ಕದ್ದು.

ನಾಭಿಮಾತ್ರೇ ಜಲೇ ತಿಷ್ಠನ್ ಸಪ್ತ ದ್ವಾದಶ ಪಂಚ ವಾ ।
ತ್ರಿವಾರಂ ವಾಪಿ ಚಾಪ್ಲುತ್ಯ ಸ್ನಾನಮೇವಂ ವಿಧೀಯತೇ ॥ ೧೬ ॥

ನಾಭಿಗೆ ಬರುವಷ್ಟು ನೀರಿನಲ್ಲಿ ನಿಂತು ಏಳು, ಹನ್ನೆರಡು, ಐದು ಇಲ್ಲವೆ ಮೂರು ಸರ್ತಿ ಮುಳುಗತಕ್ಕದ್ದು. ಹೀಗೆ ಸ್ನಾನವಿಧಿಯಿರುತ್ತದೆ.

ಜಲಂ ದೇವಗೃಹಂ ಚೈವ ಶಯನಂ ಚ ದ್ವಿಜಾಲಯಂ ।
ನಿರ್ಗಿಕ್ತಪಾದಃ ಪ್ರವಿಶೇನ್ನನಿರ್ಗಿಕ್ತಃ ಕಥಂಚನ ॥ ೧೭ ॥

ನೀರನ್ನು, ದೇವಸ್ಥಾನವನ್ನು, ಹಾಸಿಗೆಯನ್ನು, ಬ್ರಾಹ್ಮಣನ ಮನೆಯನ್ನು ಪ್ರವೇಶಿಸಬೇಕಾದರೆ ಪಾದವನ್ನು ನೀರಿನಿಂದ ನೆನಿಸಿದ ಹೊರತು ಪ್ರವೇಶಿಸಲಾಗದು.

ಅಶ್ವತ್ಥಸಾಗರೌ ಸೇವ್ಯೌ ನ ಸ್ಪ್ರಷ್ಟವ್ಯೌ ಕದಾಚನ ।
ಅಶ್ವತ್ಥಂ ಮಂದವಾರೇ ತು ಸಾಗರಂ ಪರ್ವಣಿ ಸ್ಪೃಶೇತ್ ॥ ೧೮ ॥

ಸೇವೆ ಮಾಡಲಿಕ್ಕೆ ಯೋಗ್ಯವಾದ ಅಶ್ವತ್ಥಸಮುದ್ರಗಳನ್ನು ಯಾವಾಗಲೂ ಮುಟ್ಟಬಾರದು. ಅಶ್ವತ್ಥವನ್ನು ಶನಿವಾರದಲ್ಲೂ ಸಮುದ್ರವನ್ನು ಪರ್ವತಿಥಿಗಳಲ್ಲಿಯೂ ಮುಟ್ಟಬಹುದು.

ಸೇತೌ ವಿಂಧ್ಯೇ ಸರಸ್ವತ್ಯಾಂ ಗೋಕರ್ಣೇ ಪುರುಷೋತ್ತಮೇ ।
ಉದನ್ವದಂಭಸಿ ಸ್ನಾನಂ ಪರ್ವಕಾಲೇ ವಿಧೀಯತೇ ॥ ೧೯ ॥

ಸೇತುವಿನಲ್ಲಿಯೂ (ರಾಮೇಶ್ವರ) ವಿಂಧ್ಯ ಪರ್ವತದ ಸಮೀಪದಲ್ಲಿಯೂ ಸರಸ್ವತೀ ನದಿಯ ಹತ್ತರದಲ್ಲೂ ಗೋಕರ್ಣದಲ್ಲಿಯೂ ಪುರುಷೋತ್ತಮ ಕ್ಷೇತ್ರದಲ್ಲಿಯೂ ಸಮುದ್ರಸ್ನಾನವನ್ನು ಯಾವ ಕಾಲದಲ್ಲಾದರೂ ಮಾಡಬಹುದು.

ನದೀಂ ಗಂತುಮಶಕ್ತಶ್ಚೇತ್ ಗೃಹೇ ವಾ ಸ್ನಾನಮಾಚರೇತ್ ।
ಸ್ವಯಂ ಚೈವಾಥ ಶಿಷ್ಯೈಶ್ಚ ಪುತ್ರೈರ್ವಾಹೃತವಾರಿಣಾ ॥ ೨೦ ॥

ನದಿಯಲ್ಲಿ ಸ್ನಾನಮಾಡಲಿಕ್ಕೆ ಶಕ್ತಿಯಿಲ್ಲದಿದ್ದರೆ ಮನೆಯಲ್ಲಾದರೂ ತನ್ನಿಂದ ಅಥವಾ ಶಿಷ್ಯರು ಇಲ್ಲವೆ ಪುತ್ರರು ಇವರಿಂದ ತರಲ್ಪಟ್ಟ ಜಲದಿಂದ ಸ್ನಾನಮಾಡತಕ್ಕದ್ದು.

ಉಷ್ಣೋದಕಸ್ನಾನಮ್ಮೃಗಾತುರಸ್ಯ ।
ನ ಶೀತಲೈಃ ಶೋಭನವಾಸರೇಷು ॥
ಶೀತೇನ ಸಂಷಿಜ್ಯ ತತೋಷ್ಣತೋಯಂ ।
ನ ತರ್ಪಣಂ ಮಾರ್ಜನಮಾತ್ರಮತ್ರ ॥ ೨೧ ॥

ರೋಗದಿಂದ ನರಳುತ್ತಿರುವ ಮನುಷ್ಯನೂ, ಮಂಗಲ ದಿನಗಳಲ್ಲಿಯೂ ಬಿಸಿನೀರಿನಿಂದ ಸ್ನಾನಮಾಡತಕ್ಕದ್ದು. ಬಿಸಿನೀರಿಗೆ ಸ್ವಲ್ಪ ತಣ್ಣೀರು ಹಾಕಿಕೊಳ್ಳತಕ್ಕದ್ದು. ಮಾತ್ರ ಈ ನೀರಿನಿಂದ ತರ್ಪಣ ಮಾರ್ಜನಾದಿಗಳನ್ನು ಮಾಡಕೂಡದು.

ಮೃತೇ ಜನ್ಮನಿ ಸಂಕ್ರಾಂತೌ ಶ್ರಾದ್ಧೇ ಜನ್ಮದಿನೇ ತಥಾ ।
ಪೌರ್ಣಮಾಸ್ಯಾಂ ತಥಾ ದರ್ಶೇ ನ ಸ್ನಾಯಾದುಷ್ಣವಾರಿಣಾ ॥ ೨೨ ॥

ಮನೆಯಲ್ಲಿ ಯಾರಾದರೂ ಸತ್ತ ದಿನದಲ್ಲಿಯೂ, ಹುಟ್ಟಿದ ದಿನದಲ್ಲಿಯೂ, ಶ್ರಾದ್ಧದಿನದಲ್ಲೂ, ಪುತ್ರಾದಿಗಳು ಹುಟ್ಟಿದ ದಿವಸದಲ್ಲಿಯೂ, ಹುಣ್ಣಿವೆಯಲ್ಲಿಯೂ, ಅಮಾವಾಸ್ಯೆಯಲ್ಲಿಯೂ ಬಿಸಿನೀರಿನಿಂದ ಸ್ನಾನಮಾಡಬಾರದು.

ಸಂಕಲ್ಪಂ ಸೂಕ್ತಪಠನಂ ಮಾರ್ಜನಂ ಚಾಘಮರ್ಷಣಂ ।
ತರ್ಪಣಂ ಪಿತೃದೇವಾನಾಂ ಸ್ನಾನಂ ಪಂಚಾಂಗಲಕ್ಷಣಂ ॥ ೨೩ ॥

ಸಂಕಲ್ಪ, ಸೂಕ್ತಪಠನ, ಮಾರ್ಜನ, (ನವವಿಧ) ಅಘಮರ್ಷಣ ಸೂಕ್ತ, ದೇವಪಿತೃತರ್ಪಣ ಈ ಐದು ಅಂಗಗಳಿಂದ ಸ್ನಾನವಿಧಿಯು ಸಂಪೂರ್ಣವಾಗುತ್ತದೆ.

ಸ್ನಾನಾರ್ಥಮಭಿಗಚ್ಛಂತಿ ದೇವಾಃ ಪಿತೃಗಣೈಃ ಸಹ ।
ವಾಯುಭೂತಾಶ್ಚಗಚ್ಛಂತಿ ತೃಷಿತಾಃ ಸಲಿಲಾರ್ಥಿನಃ ॥ ೨೪ ॥

ಬ್ರಾಹ್ಮಣನು ಸ್ನಾನಕ್ಕೆ ಹೋದಕೂಡಲೇ ದೇವತೆಗಳು ಪಿತೃಗಣಗಳಿಂದ ಕೂಡಿದವರಾಗಿ ಬಾಯಾರಿಕೆಯಿಂದ ಯುಕ್ತರಾಗಿ ಜಲವನ್ನು ಬಯಸಿದವರಾಗಿ ಅಲ್ಲಿ ಹೋಗುತ್ತಾರೆ. ಆದುದರಿಂದಲೇ ಅವರಿಗೆ ತರ್ಪಣವನ್ನು ಕೊಡುವದು. (ಅವರು ಗಾಳಿರೂಪದಿಂದ ಅಲ್ಲಿಗೆ ಬರುತ್ತಾರೆ.)

ಪ್ರಾಙ್ಮುಖೋ ದೇವತೀರ್ಥೇನ ನಿವೀತೀ ಚ ಉದಙ್ಮುಖಃ ।
ದಕ್ಷಿಣಾಭಿಮುಖಃ ಸವ್ಯಂ ತರ್ಪಯೇತ್ಪಿತೃಸಂಹಿತಿಂ ॥ ೨೫ ॥

ದೇವತೆಗಳಿಗೆ ಪೂರ್ವದಿಕ್ಕಿಗೆ ಮೋರೆಮಾಡಿಕೊಂಡು ದೇವತೀರ್ಥ (ಅಂಗುಲ್ಯಗ್ರ) ದಿಂದಲೂ ಋಷಿಗಳನ್ನು ಜನಿವಾರವನ್ನು ಮಾಲಿಕೆಮಾಡಿಕೊಂಡು ಉತ್ತರ ಮುಖನಾಗಿ ತೀರ್ಥದಿಂದಲೂ ಪಿತೃಗಳಿಗೆ ದಕ್ಷಿಣಾಭಿಮುಖನಾಗಿ ಜನಿವಾರವನ್ನು ಎಡಕ್ಕೆ ಮಾಡಿಕೊಂಡು ತರ್ಪಣಕೊಡತಕ್ಕದ್ದು.

ಏಕೈಕಮಂಜಲಿಂ ದೇವಾ ದ್ವೌ ದ್ವೌತು ಸನಕಾದಯಃ ।
ಅರ್ಹಂತಿ ಪಿತರಸ್ತ್ರೀಂ ಸ್ತ್ರೀಂ ಸ್ತ್ರೀಣಾಮೇಕೈಕ ಅಂಜಲಿಃ ॥ ೨೬ ॥

ದೇವತೆಗಳಿಗೆ ಒಂದೊಂದು, ಋಷಿಗಳಿಗೆ ಎರಡೆರಡು, ಪಿತೃಗಳಿಗೆ ಮೂರು ಮೂರು, ಸ್ತ್ರೀಯರಿಗೆ ಒಂದೊಂದು ಹೀಗೆ (ದ್ವೌ ದ್ವೌ ಸಪತ್ನ ಮಾತುಸ್ತು ತ್ರಿಸ್ತ್ರಿರ್ಮಾತೃಗಣಸ್ಯಚ ಸವತಿತಾಯಿಗೆ ಎರಡೆರಡು. ಮಾತೃಪಿತಾಮಹೀತ್ಯಾದಿಗಳಿಗೆ ಮೂರು ಮೂರು) ತಿಲಾಂಜಲಿ ಜಲಾಂಜಲಿಗಳನ್ನು ಕೊಡತಕ್ಕದ್ದು.

ತಾತಾಂಬಾತ್ರಿತಯಂ ಸಪತ್ನಜನನೀ ಮಾತಾಮಹಾದಿತ್ರಯಂ-
ಸಸ್ತ್ರಿಸ್ತ್ರೀ ತನಯಾದಿ ತಾತಜನನೀ ಸ್ವಭ್ರಾತರಃ ಸಸ್ತ್ರಿಯಃ ।

ತಾತಾಂಬಾತ್ಮ ಭಗಿನ್ಯಪತ್ಯಧವಯುಗ್ಜಾಯಾಪಿತಾ ಸದ್ಗುರುಃ
ಶಿಷ್ಯಾಪ್ತಾಃಪಿತರೋ ಮಹಾಲಯವಿಧೌ ತೀರ್ಥೇ ತಥಾ ತರ್ಪಣೇ ॥ ೨೭ ॥

ಮಹಾಲಯದಲ್ಲಿಯೂ, ತೀರ್ಥದಲ್ಲಿಯೂ ತರ್ಪಣ ಕೊಡುವಾಗ ಇಷ್ಟು ಪಿತೃಗಳನ್ನು ತಗೊಳ್ಳತಕ್ಕದ್ದು. ಪಿತೃ, ಪಿತಾಮಹ, ಪ್ರಪಿತಾಮಹ, ಮಾತೃ, ಪಿತಾಮಹಿ, ಪ್ರಪಿತಾಮಹಿ, ಸವತೀ ತಾಯಿ, ಮಾತಾಮಹ, ಮಾತುಃಪಿತಾಮಹ, ಮಾತುಃಪ್ರಪಿತಾಮಹ, ಮಾತಾಮಹಿ, ಮಾತುಃಪಿತಾಮಹಿ, ಮಾತುಃಪ್ರಪಿತಾಮಹಿ, ಸ್ವಕೀಯಪತ್ನಿ, ಪುತ್ರರು, ಪುತ್ರಿಯರು, ಜ್ಯೇಷ್ಠ ಪಿತೃ, ಜ್ಯೇಷ್ಠ ಪಿತೃಪತ್ನಿ, ಕನಿಷ್ಠ ಪಿತೃ, ಕನಿಷ್ಠ ಪಿತೃಪತ್ನಿ, ಮಾತುಲ, ಮಾತುಲಾನೀ, ಸ್ವಕೀಯ ಜ್ಯೇಷ್ಠ ಭ್ರಾತೃ, ತತ್ಪತ್ನಿ, ಕನಿಷ್ಠಭ್ರಾತೃ, ತತ್ಪತ್ನಿ, ಪಿತೃಭಗಿನಿ, ತತ್ಪತಿ, ತತ್ಪುತ್ರ, ಮಾತೃಭಗಿನಿ, ತತ್ಪತಿ, ತತ್ಪುತ್ರ, ಆತ್ಮಭಗಿನಿ, ತತ್ಪತಿ, ತತ್ಪುತ್ರ, ಆತ್ಮಪತ್ನೀಪಿತೃ,ಮಾತೃ, ಆಚಾರ್ಯ, ಶಿಷ್ಯ, ಜ್ಞಾತಿ ಇತ್ಯಾದಿ ಪಿತೃಗಳಿಗೆ ತರ್ಪಣ ಕೊಡತಕ್ಕದ್ದು.

ವಸ್ತ್ರೋದಕಮಪೇಕ್ಷಂತೇ ಯೇ ಮೃತಾದಾನಕರ್ಮಣಃ ।
ತಸ್ಮಾತ್ಸರ್ವಪ್ರಯತ್ನೇನ ಜಲಂಭೂವೌನಿಪಾತಯೇತ್ ॥ ೨೮ ॥

ಕುಲದಲ್ಲಿ ಚಾಕರಿ ಮಾಡಿ ಯಾವ ಜನರು ಸತ್ತಿರುವರೋ ಅವರು ವಸ್ತ್ರೋದಕವನ್ನು ಅಪೇಕ್ಷಿಸುತ್ತಾರೆ. ಕಾರಣ ಎಷ್ಟು ಪ್ರಯಾಸವಾದರೂ ಒದ್ದೆ ವಸ್ತ್ರದ ಸೆರಗಿನಿಂದ ಭೂಮಿಯಲ್ಲಿ ಅವರ ಸಲುವಾಗಿ ಜಲವನ್ನು ಬಿಡತಕ್ಕದ್ದು.

ಯನ್ಮಯಾದೂಷಿತಂ ತೋಯಂ ಶಾರೀರಮಲಪಾತನಾತ್ ।
ತದ್ದೋಷಪರಿಹಾರಾರ್ಥಂ ಯಕ್ಷ್ಮಾಣಂತರ್ಪಯಾಮ್ಯಹಂ ॥ ೨೯ ॥

ನಮ್ಮ ದೇಹದ ಮಲದಿಂದ ಜಲವು ಕೆಟ್ಟುಹೋಗುವದು. ಆ ದೋಷಪರಿಹಾರಕ್ಕಾಗಿ ಯಕ್ಷ್ಮನನ್ನು ತೃಪ್ತಿಪಡಿಸುತ್ತೇನೆ ಎಂದು ಒಂದು ತರ್ಪಣಮಾಡತಕ್ಕದ್ದು.

ಸಪ್ತಮ್ಯಾಂ ರವಿವಾರೇ ಚ ಗೃಹೇ ಜನ್ಮದಿನೇ ತಥಾ ।
ಪಕ್ಷಯೋರುಭಯೋ ರಾಜನ್ನ ಕುರ್ಯಾತ್ತಿಲತರ್ಪಣಂ ॥ ೩೦ ॥

ಎರಡೂ ಪಕ್ಷಗಳ ಸಪ್ತಮಿ, ಆದಿತ್ಯವಾರ, ಹುಟ್ಟಿದ ದಿನಗಳಲ್ಲಿಯೂ ಮನೆಯಲ್ಲಿಯೂ ತಿಲತರ್ಪಣವನ್ನು ಮಾಡಬಾರದು.

ಉಪರಾಗೇ ಪಿತುಃ ಶ್ರಾದ್ಧೇ ಪಾತೇ ಮಾಯಾಂ ಚ ಸಂಕ್ರಮೇ ।
ನಿಷಿದ್ಧೇಽಪಿ ಹಿ ಸರ್ವತ್ರ ತಿಲೈಸ್ತರ್ಪಣಮಾಚರೇತ್ ॥ ೩೧ ॥

ಗ್ರಹಣದಲ್ಲಿಯೂ ತಂದೆ ತಾಯಿಗಳ ಶ್ರಾದ್ಧದಲ್ಲಿಯೂ ವ್ಯತೀಪಾತದಲ್ಲಿಯೂ ಅಮಾವಾಸ್ಯೆಯಲ್ಲಿಯೂ ಸಂಕ್ರಾಂತಿಯಲ್ಲಿಯೂ ತಿಥಿವಾರಗಳು ನಿಷಿದ್ಧಗಳಾಗಿದ್ದರೂ ತಿಲತರ್ಪಣವನ್ನು ಮಾಡಲೇ ಬೇಕು.

ತಿಲಾನಾಮಪ್ಯಭಾವೇತು ಸುವರ್ಣರಜತಾನ್ವಿತಂ ।
ತದಭಾವೇ ನಿಷಿದ್ಧಂ ಚೇದ್ದರ್ಭೈರ್ಮಂತ್ರೇಣ ವಾ ಪುನಃ ॥ ೩೨ ॥

ಎಳ್ಳು ಸಿಗದಿದ್ದರೆ ಭಂಗಾರ ಇಲ್ಲವೆ ಬೆಳ್ಳಿಯಿಂದ ಯುಕ್ತವಾಗಿಯೂ ಅದೂ ಅಭಾವವಾದರೆ ದರ್ಭೆಗಳಿಂದಲೂ ಯಾವದೂ ಇಲ್ಲದಿದ್ದರೆ ಕೇವಲ ಮಂತ್ರಗಳಿಂದಲೂ ತಿಲತರ್ಪಣವನ್ನು ಮಾಡತಕ್ಕದ್ದು.

ದರ್ಶೇ ತಿಲೋದಕಂ ಪೂರ್ವಂ ಪಶ್ಚಾದ್ದದ್ಯಾನ್ಮಹಾಲಯೇ ।
ಕ್ಷಯಾಹೇ ಚ ಪರಂ ಪೂರ್ವಂ ಪ್ರತ್ಯಾಬ್ದಿಕೇ ಪರೇ ಹನಿ ॥ ೩೨ ॥

ಅಮಾವಾಸ್ಯೆಯಲ್ಲಿ ತಿಲೋದಕವನ್ನು ಮೊದಲೂ, ಮಹಾಲಯದಲ್ಲಿ ಕಡೆಗೂ, ಮರಣದಿನದಲ್ಲಿ ಮೊದಲೂ ಕಡೆಗೂ, ಪ್ರತಿ ಸಾಂವತ್ಸರಿಕ ಶ್ರಾದ್ಧದಲ್ಲಿ ಮೂರನೇ ದಿನದಲ್ಲೂ ಕೊಡತಕ್ಕದ್ದು.

ಪುತ್ರಃ ಪ್ರತ್ಯಾಬ್ದಿಕೇ ಪ್ರಾಪ್ತೇ ತರ್ಪಣಂ ತು ಕಥಂ ಭವೇತ್ ।
ತಿಲೈರ್ವಿನಾ ಪ್ರಕರ್ತವ್ಯಂ ನಿವೃತ್ತೇ ಪಿತೃಕರ್ಮಣಿ ॥ ೩೪ ॥

ಪುತ್ರನು ತಂದೆಯ ಶ್ರಾದ್ಧ ದಿನ ಹೇಗೆ ತರ್ಪಣವನ್ನು ಮಾಡತಕ್ಕದ್ದು? ಅಂದರೆ ಶ್ರಾದ್ಧವು ಮುಗಿದ ನಂತರ ಎಳ್ಳನ್ನು ತಗೊಳ್ಳದೆ ಕೇವಲ ಜಲಾಂಜಲಿಯಿಂದಲೇ ತರ್ಪಣವನ್ನು ಕೊಡುವದು.

ಜೀವಮಾನಪಿತಾ ಯಸ್ಯ ಮಾತಾ ಯದಿ ವಿಪದ್ಯತೇ ।
ಮಾತುಃ ಶ್ರಾದ್ಧಂ ಸುತಃ ಕುರ್ಯಾನ್ನ ಕುರ್ಯಾತ್ತಿಲತರ್ಪಣಂ ॥ ೩೫ ॥

ಯಾವಾತನಿಗೆ ತಂದೆಯಿದ್ದು ತಾಯಿಯು ಸತ್ತಿರುವಳೋ ಅವನು ತಾಯಿಯ ಶ್ರಾದ್ಧವನ್ನು ಮಾಡುವದೇ ಹೊರತು ತಿಲತರ್ಪಣವನ್ನು ಮಾಡಕೂಡದು

ಆರ್ದ್ರವಸ್ತ್ರೋ ಜಲೇ ಕುರ್ಯಾತ್ತರ್ಪಣಂ ಚಾಚಮಂಜಪಂ ।
ಶುಷ್ಕವಾಸಾಃ ಸ್ಥಲೇ ಕುರ್ಯಾತ್ತರ್ಪಣಂ ಚಾಚಮಂಜಪಂ ॥ ೩೬ ॥

ನೀರಿನಲ್ಲಿ ತರ್ಪಣಕೊಡುವದಾಗಲೀ ಆಚಮನಮಾಡುವದಾಗಲೀ ಜಪಮಾಡುವದಾಗಲೀ ಒದ್ದೆ ವಸ್ತ್ರದಿಂದ ಮಾಡತಕ್ಕದ್ದು. ನೆಲದಲ್ಲಿ ಮಾಡುವದಾದರೆ ಒಣವಸ್ತ್ರವನ್ನುಟ್ಟುಕೊಳ್ಳತಕ್ಕದ್ದು.

ಸ್ನಾನವಸ್ತ್ರೇಣ ಯೋ ವಿಪ್ರಃ ಶರೀರಂ ಪರಿಮಾರ್ಜಯೇತ್ ।
ವೃಥಾ ಭವತಿ ತತ್ಸ್ನಾನಂ ಪುನಃ ಸ್ನಾನೇನ ಶುಧ್ಯತಿ ॥ ೩೭ ॥

ಯಾವ ಬ್ರಾಹ್ಮಣನು ಸ್ನಾನಮಾಡುವಾಗ ಧರಿಸಿದ ವಸ್ತ್ರದಿಂದಲೇ ಶರೀರವನ್ನು ಒರಿಸಿಕೊಳ್ಳುತ್ತಾನೋ ಆತನ ಸ್ನಾನವು ವ್ಯರ್ಥವಾದದ್ದು. ಪುನಃ ಸ್ನಾನ ಮಾಡಿದರೆ ಶುದ್ಧನಾಗುವನು.

ತ್ವಕ್ಫಲಕೃಮಿರೋಮಾಣಿ ಚತಸ್ರೋ ವಸ್ತ್ರಯೋನಯಃ ।
ಪ್ರೋಕ್ಷಣಾತ್ಕ್ಷಾಳನಾದ್ವಾತಾತ್ರಿಭಿರ್ಝಟಿತಿ ಶುಧ್ಯತಿ ॥ ೩೮ ॥

ತೊಗಟೆ (ನಾರು) ಫಲ (ಹತ್ತಿ) ಕೃಮಿ (ರೇಶಿಮೆ) ರೋಮ (ಕಂಬಳಗುರಿ) ಈ ನಾಲ್ಕು ವಸ್ತುಗಳು ವಸ್ತ್ರಗಳಿಗೆ ಕಾರಣಗಳು. ನಾರುವಸ್ತ್ರವನ್ನು ಪ್ರೋಕ್ಷಣಮಾಡಿದರೆ ಶುದ್ಧವಾಗುವದು. ಹತ್ತಿಯ ವಸ್ತ್ರವನ್ನು ತೊಳೆದದ್ದರಿಂದಲೂ, ರೇಶಿಮೆವಸ್ತ್ರವನ್ನು ಗಾಳಿಗೆ ಹಾಕಿದ್ದರಿಂದಲೂ, ರೋಣೆವಸ್ತ್ರಗಳನ್ನು ಮೂರು ಸರ್ತಿ ಝುಟ್ ಝುಟ್ ಕುಡುಗುವದರಿಂದಲೂ ಶುದ್ಧವಾಗುವದು.

ಸ್ವಯಂ ಧೌತೇನ ಕರ್ತವ್ಯಾ ಕ್ರಿಯಾಧರ್ಮ್ಯಾವಿಪಶ್ಚಿತಾ ।
ನ ತು ತೇಜಿಕ ಧೌತೇನ ನೋಪಭುಕ್ತೇನ ವಾ ಕ್ವಚಿತ್ ॥ ೩೯ ॥

ಯಾವ ಧರ್ಮಕಾರ್ಯವನ್ನು ಮಾಡುವಾಗಲೂ ತಾನೇ ಒಗೆದುಕೊಂಡ ವಸ್ತ್ರವನ್ನುಪಯೋಗಿಸಬೇಕೇ ಹೊರತು ಅಗಸರವನಿಂದ ಒಗೆದ ವಸ್ತ್ರವನ್ನೂ, ಬೇರೆಯವರಿಂದ ಉಪಯೋಗಿಸಲ್ಪಟ್ಟ ವಸ್ತ್ರವನ್ನೂ ಉಪಯೋಗಿಸತಕ್ಕದ್ದಲ್ಲ.

ಸ್ನಾನಂ ದಾನಂ ಜಪಂ ಹೋಮಂ ಸ್ವಾಧ್ಯಾಯಂ ಪಿತೃಕರ್ಮ ಚ ।
ನೈಕವಸ್ತ್ರೋ ದ್ವಿಜಃ ಕುರ್ಯಾತ್ತತ್ಸರ್ವಂ ನಿಷ್ಫಲಂ ಭವೇತ್ ॥ ೪೦ ॥

ಸ್ನಾನವನ್ನಾಗಲೀ ದಾನ, ಜಪ, ಹೋಮ, ವೇದಾಭ್ಯಾಸ, ಪಿತೃಕಾರ್ಯ ಇವುಗಳನ್ನಾಗಲೀ ಒಂಟಿ ವಸ್ತ್ರದಿಂದ ಮಾಡಿದರೆ ನಿಷ್ಫಲಗಳೇ ಸರಿ. (ಅಂದರೆ ಮಾಡಕೂಡದೆಂದಭಿಪ್ರಾಯ.)

ಬ್ರಾಹ್ಮಣಸ್ಯ ಸಿತಂ ವಸ್ತ್ರಂ ನೃಪಸ್ಯ ರಕ್ತಮುಲ್ಬಣಂ ।
ಪೀತಂ ವೈಶ್ಯಸ್ಯ ಶೂದ್ರಸ್ಯ ನೀಲಂ ಮಲವದಿಷ್ಯತೇ ॥ ೪೧ ॥

ಬ್ರಾಹ್ಮಣನು ಶುಭ್ರ ವಸ್ತ್ರವನ್ನೂ ಕ್ಷತ್ರಿಯನು ಕೆಂಪು ವಸ್ತ್ರವನ್ನೂ ವೈಶ್ಯನು ಹಳದೀ ವಸ್ತ್ರವನ್ನೂ ಶೂದ್ರನು ಕಪ್ಪು ಮಲಿನ ವಸ್ತ್ರವನ್ನೂ ಉಟ್ಟುಕೊಳುವದು.

ಯಜ್ಞೋಪವೀತೇ ದ್ವೇ ಧಾರ್ಯೇ ಶ್ರೌತೇ ಸ್ಮಾರ್ತೇ ಚ ಕರ್ಮಣಿ ।
ತೃತೀಯಮುತ್ತರೀಯಾರ್ಥಂ ವಸ್ತ್ರಾಭಾವೇ ತದಿಷ್ಯತೇ ॥ ೪೨ ॥

ಸಾಮಾನ್ಯವಾಗಿ ಶ್ರೌತ, ಸ್ಮಾರ್ತ ಕಾರ್ಯಗಳಲ್ಲಿ ಎರಡು ಯಜ್ಞೋಪವೀತಗಳನ್ನು ಧರಿಸುವದು. ಉತ್ತರಿಗೆಗೆ ವಸ್ತ್ರವು ಅಭಾವವಾದರೆ ಮೂರು ಜನಿವಾರಗಳನ್ನು ತೊಟ್ಟುಕೊಳ್ಳುವದು.

ಉಪವೀತಂ ಬಟೋರೇಕಂ ದ್ವೇ ತಥೇತರಯೋಃ ಸ್ಮೃತೇ ।
ಏಕಮೇವ ಯತೀನಾಂ ಸ್ಯಾದಿತಿ ಶಾಸ್ತ್ರಸ್ಯ ನಿಶ್ಚಯಃ ॥ ೪೩ ॥

ಬ್ರಹ್ಮಚಾರಿಗೂ, ಯತಿಗಳಿಗೂ ಒಂದೊಂದೇ ಯಜ್ಞೋಪವೀತವು ಉಕ್ತವಾಗಿದೆ. ಗೃಹಸ್ಥ, ವಾನಪ್ರಸ್ಥ ಆಶ್ರಮಿಗಳಿಗೆ ಎರಡೆರಡು ಯಜ್ಞೋಪವೀತಗಳು—ಹೀಗೆಂದು ಶಾಸ್ತ್ರವು ನಿಶ್ಚಯಿಸಿರುತ್ತದೆ.

ಕೌಶೇಯಂ ಕೇವಲಂ ವಾಪಿ ಅಜಿನಂ ಪಟ್ಟಮೇವ ಚ ।
ದಾರುಜಂ ತಾಲಪರ್ಣಂ ವಾ ಆಸನಂ ಪರಿಕಲ್ಪಯೇತ್ ॥ ೪೪ ॥

ಬರೇ ರೇಶ್ಮೆಯದಾಗಲೀ, ಕೃಷ್ಣಮೃಗಾದಿ ಚರ್ಮದ್ದಾಗಲೀ, ನಾರುಪಟ್ಟಿಗಳಿಂದ ಮಾಡಿದ್ದಾಗಲೀ, ಕಟ್ಟಿಗೆಯಿಂದ ತಯಾರಿಸಿದ್ದಾಗಲೀ, ತಾಳೀ ಎಲೆಯದಾಗಲೀ ಆಸನವನ್ನು ಮಾಡಿಕೊಳ್ಳತಕ್ಕದ್ದು.

ಸ್ನಾತ್ವಾ ಪುಂಡ್ರಂ ಮೃದಾ ಕುರ್ಯಾದ್ಧೃತ್ವಾ ಚೈವ ತು ಭಸ್ಮನಾ ।
ಊರ್ಧ್ವಪುಂಡ್ರಂ ತ್ರಿಪುಂಡ್ರಂ ತು ಧಾರಯೇದ್ವೈದಿಕೋತ್ತಮಃ ॥ ೪೫ ॥

ಸ್ನಾನಮಾಡಿದ ನಂತರ ಗೋಪೀಚಂದನಾದಿಗಳಿಂದ ಊರ್ಧ್ವಪುಂಡ್ರ (ಹಣೆ ಮೊದಲಾದವುಗಳಲ್ಲಿ ನೆಟ್ಟಗಿನ ನಾಮ) ವನ್ನೂ ಹೋಮಮಾಡಿದ ನಂತರ ಆಗುವ ಭಸ್ಮದಿಂದ ತ್ರಿಪುಂಡ್ರ (ಹಣೆ ಮೊದಲಾದವುಗಳಲ್ಲಿ ಅಡ್ಡಲಾಗಿ ಮೂರು ರೇಖೆಗಳನ್ನೆಳೆಯೋಣ) ವನ್ನೂ ಧರಿಸಿಕೊಳ್ಳತಕ್ಕದ್ದು. (ಚಂದನೇನೋಭಯಂ ಕುರ್ಯಾನ್ನತಿರ್ಯಗ್ಗೋಪಿಚಂದನಂ ।) ಗಂಧದಿಂದ ಊರ್ಧ್ವಪುಂಡ್ರವನ್ನೂ, ತ್ರಿಪುಂಡ್ರವನ್ನೂ ಮಾಡಬಹುದು. ಗೋಪಿಚಂದನದಿಂದ ಮಾತ್ರ ತ್ರಿಪುಂಡ್ರವನ್ನು ಮಾಡಬಾರದು.

ಅಥೋರ್ಧ್ವಪುಂಡ್ರಂ ಬಿಭೃಯಾಲ್ಲಲಾಟೇ
ತತಶ್ಚ ನಾಭೌ ಹೃದಯೇ ಚ ಕಂಠೇ ।
ಪಾರ್ಶ್ವೇ ಚ ಕಂಠಸ್ಯ ಚ ಬಾಹುಮೂಲೇ
ಪಾರ್ಶ್ವೇ ಶ್ರುತೌ ಪೃಷ್ಠಗಳೋತ್ತಮಾಂಗೇ ॥ ೪೬ ॥

ಊರ್ಧ್ವಪುಂಡ್ರವನ್ನು ಹಣೆಯಲ್ಲಿಯೂ, ನಾಭಿಯಲ್ಲಿಯೂ, ಹೃದಯದ ಲ್ಲಿಯೂ, ಕುತ್ತಿಗೆಯಲ್ಲಿಯೂ, ಕಂಠಪಾರ್ಶ್ವದಲ್ಲಿಯೂ, ತೋಳುಗಳ ಸಂದುಗಳ ಲ್ಲಿಯೂ, ಎರಡೂ ಪಕ್ಕಗಳಲ್ಲಿಯೂ, ಕಿವಿಯಲ್ಲಿಯೂ, ಕೊರಳಲ್ಲಿಯೂ, ಶಿರಸ್ಸಿನ ಲ್ಲಿಯೂ ಧರಿಸತಕ್ಕದ್ದು.

ದಂಡಾಕೃತಿರ್ಲಲಾಟೇ ತು ಹೃದಯೇಽಶ್ವತ್ಥಪತ್ರಕಂ ।
ವೇಣುಪತ್ರಾಕೃತಿರ್ಬಾಹ್ವೋಃ ಶೇಷೇ ದೀಪಾಕೃತಿರ್ಭವೇತ್ ॥ ೪೭ ॥

ಊರ್ಧ್ವಪುಂಡ್ರವನ್ನು ಹಣೆಯಲ್ಲಿ ದಂಡಾಕಾರವಾಗಿಯೂ, ಎದೆಯಲ್ಲಿ ಅಶ್ವತ್ಥ ಎಲೆಯ ಆಕೃತಿಯಿಂದಲೂ, ತೋಳುಗಳಲ್ಲಿ ಬಿದುರಿನ ಎಲೆಯಂತೆಯೂ ಉಳಿದ ಸ್ಥಾನಗಳಲ್ಲಿ ದೀಪದ ಆಕೃತಿಯಿಂದಲೂ ಮಾಡತಕ್ಕದ್ದು.

ವಾಮೇ ಹಸ್ತೇ ಚ ಭಸ್ಮೋದಕಲವಸಹಿತಂ ಸುಸ್ಥಿತಂ ವಾ ವಿಮರ್ದಂ
ಭಾಲೇ ಕಂಠೇ ಚ ನಾಭೌ ಹೃದಯಸರಸಿಜೇ ಬಾಹುಮೂಲಾಗ್ರಮಧ್ಯೇ ।
ಪೃಷ್ಠೇ ಕರ್ಣೇ ಚ ನಾಭೌ ಕಕುದಿ ಚ ಧವಳಂ ತ್ರ್ಯಂಗುಲಂ ವಾ ತ್ರಿಪುಂಡ್ರಂ
ಚೋಕ್ತ್ವಾ ಪಂಚಾಕ್ಷರೀಯಂ ರಚಯತು ಪರಮಃ ಸಃ ಸ್ವಯಂ ನೀಲಕಂಠಃ
॥ ೪೮ ॥

ಎಡಗೈಯಲ್ಲಿ ಭಸ್ಮವನ್ನಿಟ್ಟು ಬಲಗೈಯಿಂದ ಜಲವನ್ನು ಸುರಿಸಿ ಚನ್ನಾಗಿ ತಿಕ್ಕಿಕೊಂಡು ಆ ಬಿಳಿದಾದ ತ್ರಿಪುಂಡ್ರವನ್ನು ಪಂಚಾಕ್ಷರ ಮಂತ್ರವನ್ನು ಹೇಳು ತ್ತ ಹಣೆಯಲ್ಲೂ, ಕುತ್ತಿಗೆಯಲ್ಲೂ, ನಾಭಿಯಲ್ಲೂ, ಹೃದಯದಲ್ಲೂ, ತೋಳುಗಳ ಬುಡ ತುದಿ ಮಧ್ಯಗಳಲ್ಲಿಯೂ, ಬೆನ್ನಿನಲ್ಲಿಯೂ, ಕಿವಿಯಲ್ಲೂ, ನಾಭಿಯ ಪಾ ರ್ಶ್ವಗಳಲ್ಲೂ, ಕಂಕುಳದಲ್ಲಿಯೂ ಧರಿಸತಕ್ಕದ್ದು. ತ್ರಿಪುಂಡ್ರವು ಮೂರು ಅಂಗು ಲ ಪರಿಮಿತವಾದದ್ದಿರಬೇಕು. ಹೀಗೆ ಧಾರಣಮಾಡಿದವನು ಪ್ರತ್ಯಕ್ಷ ಪರಮೇ ಶ್ವರನಂತೆಯೇ ಇರುತ್ತಾನೆ.

ಭಸ್ಮನಾ ವೈ ತ್ರಿಪುಂಡ್ರಂ ಚ ಗೃಹಿಣಾಂ ಜಲಸಂಯುತಂ ।
ಧಾರ್ಯಂ ತ್ರಿಪುಂಡ್ರಂ ಸ್ತ್ರೀಣಾಂ ಚ ಯತೀನಾಂ ಜಲವರ್ಜಿತಂ ॥ ೪೯ ॥

ಗೃಹಸ್ಥಾಶ್ರಮಿಗಳು ಭಸ್ಮವನ್ನು ಜಲಸಹಿತವಾಗಿ ತ್ರಿಪುಂಡ್ರಮಾಡಿಕೊ ಳ್ಳುವದು. ಯತಿಗಳೂ ಸ್ತ್ರೀಯರೂ ಒಣಭಸ್ಮದಿಂದ ತ್ರಿಪುಂಡ್ರವನ್ನು ಮಾಡು ವದು.

ತಿಲಕಂ ಬ್ರಹ್ಮಸೂತ್ರಂ ಚ ಪಾದ್ಯವಾಚಮನೀಯಕಂ ।
ತಿಸ್ರನ್ನಪಿ ಯದಾ ಕುರ್ಯಾತ್ಸದ್ಯಃ ಶೂದ್ರೋ ಭವೇದ್ದ್ವಿಜಃ ॥ ೫೦ ॥

ತಿಲಕವನ್ನೂ ಯಜ್ಞೋಪವೀತವನ್ನೂ ಪಾದ್ಯವನ್ನೂ ಆಚಮನವನ್ನೂ ಯಾವಾತನು ನಿಂತು ಮಾಡುವನೋ ಆತನು ಸದ್ಯದಲ್ಲಿಯೇ ಶೂದ್ರನಂತಾಗುವನು.

ರುದ್ರಾಕ್ಷಾನ್ ಕಂಠದೇಶೇ ದಶನಪರಿಮಿತಾನ್ ಮಸ್ತಕೇ ವಿಂಶತಿದ್ವೇ
ಷಟ್ ಷಟ್ ಕರ್ಣಪ್ರದೇಶೇ ಕರಯುಗಲಕೃತೇ ದ್ವಾದಶ ದ್ವಾದಶೈವ ।
ಬಾಹ್ವೋರಿಂದೋಃ ಕಲಾಭಿರ್ನಯನಯುಗಕೃತೇ ಏಕಮೇಕಂ ಶಿಖಾಯಾಂ
ವಕ್ಷಸ್ಯಷ್ಟಾಧಿಕಂ ಯಃ ಕಲಯತಿ ಶತಕಂ ಸಃ ಸ್ವಯಂ ನೀಲಕಂಠಃ ॥ ೫೧ ॥

ಮೂವತ್ತೆರಡು ರುದ್ರಾಕ್ಷೆಗಳನ್ನು ಕುತ್ತಿಗೆಯಲ್ಲೂ, ನಾಲ್ವತ್ತು ರುದ್ರಾಕ್ಷೆಗಳನ್ನು ಮಸ್ತಕದಲ್ಲಿಯೂ, ಕಿವಿಗಳಲ್ಲಿ ಆರಾರು ರುದ್ರಾಕ್ಷೆಗಳನ್ನೂ, ಹನ್ನೆರಡು ಹನ್ನೆರಡು ರುದ್ರಾಕ್ಷೆಗಳನ್ನು ಎರಡು ಕೈಗಳಲ್ಲಿಯೂ, ಹದಿನಾರು ರುದ್ರಾಕ್ಷೆಗಳನ್ನು ತೋಳುಗಳಲ್ಲಿಯೂ, ಒಂದೊಂದು ರುದ್ರಾಕ್ಷೆಯಂತೆ ನೇತ್ರಗಳಲ್ಲಿಯೂ, ಒಂದು ರುದ್ರಾಕ್ಷೆಯನ್ನು ಶಿಖೆಯಲ್ಲಿಯೂ, ನೂರಎಂಟು ರುದ್ರಾಕ್ಷೆಗಳನ್ನು ಎದೆಯಲ್ಲೂ ಯಾವಾತನು ಧರಿಸುವನೋ ಅವನು ಪ್ರತ್ಯಕ್ಷ ಪರಮೇಶ್ವರನೇ ಹೌದು.

॥ ಇತ್ಯಾಚಾರವಿಧೌ ದ್ವಿತೀಯೋಽಧ್ಯಾಯಃ ॥

ಆಚಾರವಿಧಿಯ ಎರಡನೇ ಅಧ್ಯಾಯವು ಮುಗಿದುದು.

॥ ತೃತೀಯೋಧ್ಯಾಯಃ ಪ್ರಾರಂಭಃ ॥

ಮೂರನೇ ಅಧ್ಯಾಯ ಪ್ರಾರಂಭವು.

ವಿಪ್ರೋ ವೃಕ್ಷೋ ಮೂಲಮೇತಸ್ಯ ಸಂಧ್ಯಾ
ವೇದಾಃ ಶಾಖಾ ಧರ್ಮಕರ್ಮಾಣಿ ಪತ್ರಂ।
ತಸ್ಮಾನ್ಮೂಲಂ ಯತ್ನತೋ ರಕ್ಷಣೀಯಂ
ಛಿನ್ನೇ ಮೂಲೇ ನಾಸ್ತಿ ಶಾಖಾ ನ ಪತ್ರಂ ॥ ೧ ॥

ಬ್ರಾಹ್ಮಣನೆಂಬ ವೃಕ್ಷಕ್ಕೆ ಸಂಧ್ಯಾವಂದನೆಯು ಮೂಲ (ಬೊಡ್ಡಿ) ವಾಗಿದೆ. ವೇದಗಳು ಶಾಖೆಗಳು; ಧರ್ಮಕರ್ಮಗಳು ಎಲೆಗಳು; ಕಾರಣ ಮೂಲ (ಸಂಧ್ಯಾವಂದನ) ವನ್ನು ಯತ್ನದಿಂದ ಪಾಲಿಸಿಕೊಳ್ಳುವದು. ಯಾಕಂದರೆ, ಬುಡವು ನಾಶವಾದರೆ ಶಾಖೆಗಳೂ ಪತ್ರಗಳೂ ಎಲ್ಲಿರುವವು? ಅರ್ಥಾತ್ ಸಕಲ ಕಾರ್ಯಕ್ಕೂ ಸಂಧ್ಯಾವಂದನೆಯೇ ಮೂಲವು.

ಉದಯಾತ್ಪ್ರಾಕ್ತನೀ ಸಂಧ್ಯಾ ಘಟಿಕಾತ್ರಯಮುಚ್ಯತೇ ।
ಸಾಯಂ ಸಂಧ್ಯಾ ತ್ರಿಘಟಿಕಾ ಅಸ್ತಾದುಪರಿ ಭಾಸ್ವತಃ ॥ ೨ ॥

ಪ್ರಾತಃ ಸಂಧ್ಯಾಕಾಲವು ಸೂರ್ಯೋದಯಕ್ಕಿಂತ ಮುಂಚೆಯೇ ಮೂರು ಘಳಿಗೆಯಿಂದಾರಂಭವಾಗುವದು. ಸಾಯಂಕಾಲದ ಸಂಧ್ಯಾವಂದನ ಕಾಲವು ಅಸ್ತಮಾನಕ್ಕಿಂತ ಮುಂದೆ ಮೂರು ಘಳಿಗೆ ವರೆಗಿರುವದು.

ಉತ್ತಮಾ ತಾರಕೋಪೇತಾ ಮಧ್ಯಮಾ ಲುಪ್ತತಾರಕಾ ।
ಅಧಮಾ ಸೂರ್ಯಸಹಿತಾ ಪ್ರಾತಃಸಂಧ್ಯಾ ವಿಧೀಯತೇ ॥ ೩ ॥

ನಕ್ಷತ್ರಗಳಿರುವಾಗ ಅಂದರೆ ಸೂರ್ಯೋದಯಾತ್ಪೂರ್ವದಲ್ಲಿ ಪ್ರಾತಃಸಂಧ್ಯೆಗೆ ಉತ್ತಮ ಕಾಲವು. ತಾರಕೆಗಳು ಲೋಪವಾದ ಮೇಲೆ ಅಂದರೆ ಚೊಕ್ಕ ಬೆಳಗಾದ ಮೇಲೆ ಮಧ್ಯಮವು. ಸೂರ್ಯೋದಯವಾದ ಮೇಲೆ ಕನಿಷ್ಠವು. ಹೀಗೆ ಪ್ರಾತಃಸಂಧ್ಯಾಕಾಲವು ಹೇಳಲ್ಪಟ್ಟಿದೆ.

ಉತ್ತಮಾ ಸೂರ್ಯಸಹಿತಾ ಮಧ್ಯಮಾ ಲುಪ್ತಭಾಸ್ಕರಾ ।
ಕನಿಷ್ಠಾ ತಾರಕೋಪೇತಾ ಸಾಯಂಸಂಧ್ಯಾ ತ್ರಿಧಾ ಮತಾ ॥ ೪ ॥

ಸೂರ್ಯನಿರುವಾಗ ಅಂದರೆ ಸೂರ್ಯನು ಮುಳುಗುವದರೊಳಗೆ ಸಾಯಂಕಾಲದ ಸಂಧ್ಯಾವಂದನೆಗೆ ಉತ್ತಮ ಕಾಲವು. ಸೂರ್ಯನು ಅಸ್ತಮಿಸಿದಾಗ ಮಧ್ಯಮವು. ನಕ್ಷತ್ರಗಳು ತೋರುವಾಗ ಅಂದರೆ ರಾತ್ರಿಯಾದ ಮೇಲೆ ಅಧಮವು. ಹೀಗೆ ಸಾಯಂಕಾಲದ ಸಂಧ್ಯಾವಂದನೆಯು ಮೂರು ವಿಧವು.

ಸಂಧ್ಯಾಮಕುರ್ವತಃ ಕಾಲೇ ಉದಯೇಸ್ತಮಯೇ ಪಿ ವಾ ।
ಗಾಯತ್ರ್ಯಷ್ಟಶತಂ ತಸ್ಯ ಪ್ರಾಯಶ್ಚಿತ್ತಂ ವಿಶುದ್ಧಯೇ ॥ ೫ ॥

ಸಂಧ್ಯಾಕಾಲವು ಅತಿಕ್ರಮಿಸಿದರೆ ನೂರೆಂಟು ಸರ್ತಿ ಗಾಯತ್ರಿಯನ್ನು ಜಪಿಸಿ ನಂತರ ಸಂಧ್ಯಾವಂದನೆಯನ್ನು ಮಾಡತಕ್ಕದ್ದು. ಇದೇ ಅತಿಕ್ರಾಂತ ಪ್ರಾಯಶ್ಚಿತ್ತವು.

ರಾಷ್ಟ್ರಭಂಗೇ ನೃಪಕ್ಷೋಭೇ ರೋಗಾರ್ತೌ ಸೂತಕೇಪಿ ಚ ।
ಸಂಧ್ಯಾವಂದನವಿಚ್ಛಿತ್ತಿರ್ನ ದೋಷಾಯ ಕದಾಚನ ॥ ೬ ॥

ರಾಷ್ಟ್ರದ ವಿಭಾಗದ ಕಾಲದಲ್ಲಿಯೂ ರಾಜಕ್ಷೋಭೆಯಲ್ಲಿಯೂ ರೋಗದಿಂದ ನರಳುವಾಗಲೂ ಸೂತಕದಲ್ಲಿಯೂ ಸಂಧ್ಯಾವಂದನೆ ಮಾಡದಿದ್ದರೆ ದೋಷವು ಬರುವುದಿಲ್ಲವು.

ದೇವಾಗ್ನಿ ದ್ವಿಜವಿದ್ಯಾನಾಂ ಕಾರ್ಯೇ ಮಹತಿ ಸಂಸ್ಥಿತೇ ।
ಸಂಧ್ಯಾ ಹೀನೇ ನ ದೋಷೋಸ್ತಿ ಯತಸ್ತತ್ಕರ್ಮ ಸಾಧನಾತ್ ॥ ೭ ॥

ದೇವತೆಗಳು, ಅಗ್ನಿ, ಬ್ರಾಹ್ಮಣ, ವಿದ್ಯಾ ಇವುಗಳ ಸಲುವಾಗಿ ಯಾವುದಾದರೊಂದು ಮಹತ್ತಾದ ಕಾರ್ಯವು ಪ್ರಾಪ್ತವಾದಾಗ ಸಂಧ್ಯಾವಂದನೆಯನ್ನು ಕದಾಚಿತ್ ಬಿಟ್ಟರೂ ದೋಷ ಬರುವಂತಿಲ್ಲ. ಯಾಕಂದರೆ ಸಂಧ್ಯಾವಂದನಕ್ಕೆ ಸಮಾನವಾದ ಕಾರ್ಯವೇ ಅದು.

ಗೃಹೇತ್ವೇಕಗುಣಂ ಸಂಧ್ಯಾ ಗೋಷ್ಠೇ ದಶಗುಣಂ ತಥಾ ।
ಶತಂ ಸಹಸ್ರಕಂ ನದ್ಯಾಮನಂತಂ ವಿಷ್ಣುಸನ್ನಿಧೌ ॥ ೮ ॥

ಮನೆಯಲ್ಲಿ ಸಂಧ್ಯಾವಂದನೆ ಮಾಡುವದಕ್ಕಿಂತಲೂ ದನಗಳ ಸನ್ನಿಧಿಯಲ್ಲಿ ಮಾಡಿದರೆ ಹತ್ತು ಪಟ್ಟು ಫಲವು ಹೆಚ್ಚು. ನದ್ಯಾದಿಗಳಲ್ಲಿ ನೂರು-ಸಾವಿರ ಪಟ್ಟು ಹೆಚ್ಚು. ವಿಷ್ಣು ಸನ್ನಿಧಿಯಲ್ಲಿ ಮಾಡಿದರೆ ಸಂಧ್ಯಾವಂದನೆಯ ಫಲವು ಅಕ್ಷಯವು.

ಅನೃತಂ ಮತ್ಸ್ಯಗಂಧಂ ಚ ದಿವಾಸ್ವಾಪಂ ಚ ಮೈಥುನಂ ।
ಪುನಾತಿ ವೃಷಲಸ್ಯಾನ್ನಂ ಕಾಲೇ ಸಂಧ್ಯಾಮುಪಾಸನಾತ್ ॥ ೯ ॥

ಸುಳ್ಳುಹೇಳಿದ ದೋಷವನ್ನೂ ಮತ್ಸ್ಯಾದಿಗಳ ನಾತವನ್ನು ಮೂಸಿರುವ ದೋಷವನ್ನೂ ಹಗಲು ನಿದ್ರಾಮಾಡಿದ, ಮೈಥುನದ, ಶೂದ್ರಾನ್ನಗಳ ದೋಷವನ್ನೂ ಯೋಗ್ಯ ಕಾಲದಲ್ಲಿ ಮಾಡಿದ ಸಂಧ್ಯಾವಂದನೆಯು ನಾಶಪಡಿಸಿ ಮನುಷ್ಯನನ್ನು ಪುನೀತನನ್ನಾಗಿ ಮಾಡುತ್ತದೆ.

ಪ್ರಣವವ್ಯಾಹೃತಿಯುತಾಂ ಗಾಯತ್ರೀಂ ಶಿರಸಾ ಸಹ ।
ತ್ರಿಃ ಪಠೇದಾಯತಪ್ರಾಣಃ ಪ್ರಾಣಾಯಾಮಃ ಸ ಉಚ್ಯತೇ ॥ ೧೦ ॥

ಪ್ರಣವ (ಓಂಕಾರ) ವ್ಯಾಹೃತಿ (ಭೂರ್ಭುವಃಸುವಃ) ಇವುಗಳಿಂದ ಸಹಿತವಾದ ಗಾಯತ್ರಿಯನ್ನು ಶಿರದಿಂದ ಸಹಿತ (ಆಪೋಜ್ಯೋತೀರಸೋಽಮೃತಂ= ಓಂ (೩.)) ವಾಗಿ ಶ್ವಾಸವನ್ನು ಕಟ್ಟಿಕೊಂಡು ಮೂರಾವರ್ತಿ ಪಠಿಸತಕ್ಕದ್ದು. ಇದಕ್ಕೆ ಪ್ರಾಣಾಯಾಮವೆನ್ನುತ್ತಾರೆ.

ನಾಸಿಕಾಮಂಗುಲೀಭಿಸ್ತು ತರ್ಜನೀ ಮಧ್ಯಮಾದೃತೇ ।
ದಕ್ಷಿಣೇನ ಸಮಾಕೃಷ್ಯ ಸವ್ಯೇನ ತು ವಿಸರ್ಜಯೇತ್ ॥ ೧೧ ॥

ತರ್ಜನೀ, ಮಧ್ಯಮಾ ಇವುಗಳನ್ನು ಬಿಟ್ಟು ಉಳಿದ ಬೆರಳುಗಳಿಂದ ಮೂಗಿನ ಸೊಳ್ಳೆಯನ್ನು ಒತ್ತತಕ್ಕದ್ದು. ಬಲಗಡೆಯ ಸೊಳ್ಳೆಯಿಂದ ಶ್ವಾಸವನ್ನು ಎಳಕೊಂಡು ಎಡಗಡೆಯ ರಂಧ್ರದಿಂದ ಬಿಡತಕ್ಕದ್ದು. (ಪ್ರಾಣಾಯಾಮ ಕ್ರಮವು.)

ಆಪೋಹಿಷ್ಠೇತಿ ತಿಸೃಭೀರುಗ್ಭಿಸ್ತು ಪ್ರಯತಃ ಶುಚಿಃ ।
ನವಪ್ರಣವಯುಕ್ತಾಭಿರ್ಜಲಂ ಶಿರಸಿ ಮಾರ್ಜಯೇತ್ ॥ ೧೨ ॥

ಒಂಭತ್ತು ಓಂಕಾರಗಳಿಂದ ಸಹಿತಗಳಾದ "ಆಪೋಹಿಷ್ಠಾ" ದಿ ಮೂರು ಮಂತ್ರಗಳಿಂದ ಮನಸ್ಸನ್ನು ಬಿಗಿಹಿಡಿದವನಾಗಿ ನೀರಿನಿಂದ ಶಿರಸ್ಸಾದಿ ಸ್ಥಾನಗಳಲ್ಲಿ ಪ್ರೋಕ್ಷಿಸಿಕೊಂಡು ಶುಚಿಯಾಗಬೇಕು.

ಭೂಮೌ ಶಿರಸಿ ಚಾಕಾಶೇ ಆಕಾಶೇ ಭುವಿ ಮಸ್ತಕೇ ।
ಮಸ್ತಕೇ ಚ ತಥಾಕಾಶೇ ಭೂಮೌ ಚ ನವಧಾ ಕ್ಷಿಪೇತ್ ॥ ೧೩ ॥

ಭೂಮಿಯಲ್ಲಿ ಶಿರಸ್ಸಿನಲ್ಲಿ ಆಕಾಶದಲ್ಲಿ (೩) ಆಕಾಶದಲ್ಲಿ ಭೂಮಿಯಲ್ಲಿ ಶಿರಸ್ಸಿನಲ್ಲಿ (೩) ಶಿರಸ್ಸಿನಲ್ಲಿ ಆಕಾಶದಲ್ಲಿ ಭೂಮಿಯಲ್ಲಿ (೩) ಹೀಗೆ ೯ ವಿಧವಾಗಿ ಮಾರ್ಜನ ಮಾಡತಕ್ಕದ್ದು.

ಕರಾಭ್ಯಾಂ ತೋಯಮಾದಾಯ ಗಾಯತ್ರ್ಯಾಚಾಭಿಮಂತ್ರ್ಯ ಚ ।
ರವೇರಭಿಮುಖಸ್ತಿಷ್ಠನ್ ತ್ರಿರೂರ್ಧ್ವಂ ಸಂಧ್ಯಯೋಃ ಕ್ಷಿಪೇತ್ ॥ ೧೪ ॥

ಎರಡೂ ಕೈಗಳ ಅಂಜಲಿಯಿಂದ ಜಲವನ್ನು ಸ್ವೀಕರಿಸಿ ಅದನ್ನು ಗಾಯತ್ರೀ ಸ್ಮರಣಪೂರ್ವಕ ಸೂರ್ಯನ ಸಮ್ಮುಖವಾಗಿ ನಿಂತು ಮೂರಾವರ್ತಿ ಸೂರ್ಯನಿಗೆ ಅರ್ಘ್ಯವನ್ನು ಕೊಡಬೇಕು.

ಪ್ರಾತಃ ಪಾದೌ ತು ಸಮೌ ಕೃತ್ವಾ ಸಂಪೂರ್ಯೋದಕಮಂಜಲಿಂ ।
ಗೋಶೃಂಗಮಾತ್ರಮುತ್ಕ್ಷಿಪ್ಯ ಜಲಮಧ್ಯೇ ಜಲಂ ಕ್ಷಿಪೇತ್ ॥ ೧೫ ॥

ಎರಡೂ ಪಾದಗಳನ್ನು ಸಮಮಾಡಿಕೊಂಡು ಉದಕವನ್ನು ಅಂಜಲಿಯಲ್ಲಿ ಹಿಡಕೊಂಡು ಗೋವಿನ ಕೋಡಿನಷ್ಟು ಎತ್ತರಕ್ಕೆ ಅಂಜಲಿಯನ್ನೆತ್ತಿ ಜಲಮಧ್ಯದಲ್ಲಿ ಆ ಜಲವನ್ನು ಕೆಡಹುವದು.

ಪರಂ ನಮ್ರಃ ಪ್ರಭಾತೇಸ್ಯಾನ್ಮಧ್ಯಾಹ್ನೇ ತು ರುಜುಃ ಸ್ಥಿತಃ ।
ದ್ವಿಜೋಽರ್ಘ್ಯಂ ಪ್ರಕ್ಷಿಪೇದ್ದೇವ್ಯಾಃ ಸಾಯಂ ಚೋಪವಿಶನ್ ದ್ವಿಜಃ ॥ ೧೬ ॥

ಪ್ರಾತಃಕಾಲದಲ್ಲಿ ಬಗ್ಗಿದವನಾಗಿಯೂ ಮಧ್ಯಾಹ್ನದಲ್ಲಿ ನೆಟ್ಟಗೆ ನಿಂತವನಾಗಿಯೂ ಸಾಯಂಕಾಲದಲ್ಲಿ ಕುಳಿತವನಾಗಿಯೂ ಅರ್ಘ್ಯವನ್ನು ಕೊಡತಕ್ಕದ್ದು.

ಚತುರರ್ಘ್ಯಂ ತುಂ ಗಾಯತ್ರ್ಯಾ ದದ್ಯಾದ್ವ್ಯಾಹೃತಿ ಸಂಯುತಂ ।
ಕಾಲಾತೀತವಿಶುದ್ಧ್ಯರ್ಥಂ ತತಃ ಸಂಧ್ಯಾಂ ಸಮಾಚರೇತ್ ॥ ೧೭ ॥

ಅರ್ಘ್ಯಪ್ರದಾನ ಕಾಲವು ಅತಿಕ್ರಮಿಸಿದರೆ ವ್ಯಾಹೃತಿ ಸಹಿತವಾದ ಗಾಯತ್ರಿಯಿಂದ ನಾಲ್ಕಾವರ್ತಿ ಅರ್ಘ್ಯವನ್ನು ಕೊಡುವದು. ಆ ಮೇಲೆ ಸಂಧ್ಯಾವಂದನೆಯನ್ನು ಮಾಡತಕ್ಕದ್ದು.

ಪೂರ್ವೋತ್ತರಾಶಾಭಿಮುಖಃ ಪ್ರಾತಃ ಪ್ರಯತಮಾನಸಃ ।
ಪ್ರಾಣಾಯಾಮತ್ರಯಂ ಕುರ್ಯಾದುಪವಿಶ್ಯ ಕುಶಾಸನೇ ॥ ೧೮ ॥

ಪೂರ್ವ ಅಥವಾ ಉತ್ತರ ದಿಕ್ಕಿನಲ್ಲಿ ಮೋರೆಯನ್ನು ಮಾಡಿಕೊಂಡು ಪ್ರಾತಃಕಾಲದಲ್ಲಿ ಮನಸ್ಸನ್ನು ಬಿಗಿಹಿಡಿದವನಾಗಿ ದರ್ಭಾಸನದಲ್ಲಿ ಕುಳಿತು ಮೂರಾವರ್ತಿ ಪ್ರಾಣಾಯಾಮವನ್ನು ಮಾಡತಕ್ಕದ್ದು-

ಗಾಯತ್ರೀ ಚೈವ ಪೂರ್ವಾಹ್ಣೇ ಸಾವಿತ್ರೀ ಮಧ್ಯಮೇಽಹನಿ ।
ಸರಸ್ವತೀ ಚ ಸಾಯಾಹ್ನೇ ಏವಂ ಸಂಧ್ಯಾ ತ್ರಿಧೇಷ್ಯತೇ ॥ ೧೯ ॥

ಪ್ರಾತಃ ಸಂಧ್ಯಾವಂದನೆಯಲ್ಲಿ ಗಾಯತ್ರಿಯೂ ಮಧ್ಯಾಹ್ನ ಸಂಧ್ಯೆಯಲ್ಲಿ ಸಾವಿತ್ರಿಯೂ ಸಾಯಂಸಂಧ್ಯೆಯಲ್ಲಿ ಸರಸ್ವತಿಯೂ ಹೀಗೆ ಸಂಧ್ಯಾ ಅಧಿಷ್ಠಾನ ದೇವತೆ (ಗಾಯತ್ರಿ) ಗೆ ಹೆಸರು ಕೊಡಲ್ಪಟ್ಟಿದೆ.

ಬ್ರಹ್ಮಚಾರೀ ಗೃಹಸ್ಥಶ್ಚ ಪ್ರಣವಾದ್ಯಾಮಿಮಾಂ ಜಪೇತ್ ।
ಅಂತೇಯಃ ಪ್ರಣವಂ ಕುರ್ಯಾನ್ನಾಸೌ ವೃದ್ಧಿಮವಾಪ್ನುಯಾತ್ ॥ ೨೦ ॥

ಬ್ರಹ್ಮಚಾರಿಯೂ ಗೃಹಸ್ಥನೂ ಆದಿಯಲ್ಲಿ ಓಂಕಾರವನ್ನು ಉಚ್ಚರಿಸಿ ವ್ಯಾಹೃತಿ ಶಿರಸ್ಸಿನಿಂದ ಸಹಿತವಾಗಿ ಗಾಯತ್ರಿಯನ್ನು ಜಪಿಸತಕ್ಕದ್ದು. ಅಂತ್ಯದಲ್ಲಿ ಓಂಕಾರವನ್ನು ಉಚ್ಚರಿಸಿದರೆ ಆತನು ವೃದ್ಧಿಯನ್ನು ಹೊಂದುವದಿಲ್ಲ.

ಅಷ್ಟೋತ್ತರಶತಂ ನಿತ್ಯಮಷ್ಟಾವಿಂಶತಿಮೇವ ವಾ ।
ವಿಧಿನಾ ದಶಕಂ ವಾಪಿ ತ್ರಿಕಾಲೇಷು ಜಪೇದ್ಬುಧಃ ॥ ೨೧ ॥

ಪ್ರತಿನಿತ್ಯ ನೂರಾಎಂಟಾಗಲೀ ಇಪ್ಪತ್ತೆಂಟಾಗಲೀ ಅಥವಾ ಹತ್ತಾಗಲೀ ವಿಧಿಪೂರ್ವಕವಾಗಿ ಮೂರು ಕಾಲಗಳಲ್ಲಿಯೂ ಗಾಯತ್ರಿಯನ್ನು ಜಪಿಸತಕ್ಕದ್ದು.

ಸಾ ಚ ಪ್ರದೋಷೇ ದರ್ಶೇ ಚ ಗಾಯತ್ರೀ ದಶಸಂಖ್ಯಕಾ ।
ಅಷ್ಟಾವಿಂಶತ್ಯನಧ್ಯಾಯೇ ಯಥೇಷ್ಟಂ ಸುದಿನೇ ಜಪೇತ್ ॥ ೨೨ ॥

ಪ್ರದೋಷಕಾಲ, ಅಮಾವಾಸ್ಯೆದಿನ ಇವುಗಳಲ್ಲಿ ಗಾಯತ್ರಿಯನ್ನು ಹತ್ತಾವರ್ತಿಯೂ ಅನಧ್ಯಾಯ ದಿನಗಳಲ್ಲಿ ಇಪ್ಪತ್ತೆಂಟಾವರ್ತಿಯೂ ಜಪಿಸತಕ್ಕದ್ದು.

ಜಪನ್ನಾಸೀತ ಸಾವಿತ್ರೀಂ ಪ್ರತ್ಯಗಾತಾರಕೋದಯಾತ್ ।
ಸಂಧ್ಯಾಪ್ರಾಕ್ಪ್ರಾತರೇವಂ ಹಿ ತಿಷ್ಠೇದಾಸೂರ್ಯದರ್ಶನಾತ್ ॥ ೨೩ ॥

ಸಾಯಂಕಾಲದಲ್ಲಿ ತಾರೆಗಳು ಉದಯವಾಗುವ ವರೆಗೂ ಪ್ರಾತಃಕಾಲದಲ್ಲಿ ಸೂರ್ಯೋದಯವಾಗುವ ವರೆಗೂ ಜಪಮಾಡತಕ್ಕದ್ದು. (ಸಾಯಂಕಾಲ ಪಶ್ಚಿಮದಿಕ್ಕಿಗೆ ಪ್ರಾತಃಕಾಲ ಪೂರ್ವದಿಕ್ಕಿಗೆ ಅಭಿಮುಖನಾಗಿ)

ವಸ್ತ್ರೇಣಾಚ್ಛಾದ್ಯ ಸ್ವಕರಂ ದಕ್ಷಿಣಂ ಯಃ ಸದಾ ಜಪೇತ್ ।
ತಸ್ಯ ತತ್ಸಫಲಂ ಜಪ್ಯಂ ತದ್ಧೀನಂ ನಿಷ್ಫಲಂ ಸ್ಮೃತಂ ॥ ೨೪ ॥

ಬಲಗೈಯನ್ನು ವಸ್ತ್ರದಿಂದ ಮುಚ್ಚಿಕೊಂಡು ಜಪಿಸುವನಾದರೆ ಆ ಜಪವು ಆತನಿಗೆ ಸಿದ್ಧಿಯನ್ನು ಕೊಡುವದು. ಇಲ್ಲವಾದರೆ ನಿಷ್ಫಲವೇ ಸರಿ.

ಮಧ್ಯಮಾನಾಮಿಕಾ ಮಧ್ಯಪರ್ವದ್ವಿತಯ ಕಲ್ಪಿತಂ ।
ಮೇರುಂ ಪ್ರದಕ್ಷಿಣಂ ಕುರ್ವನ್ ಅನಾಮಾಮೂಲಪರ್ವಸು
ಆರಭ್ಯ ಮಧ್ಯಮಾಮೂಲಂ ಪರ್ವಾಂತಗಣಯೇತ್ಕ್ರಮಾತ್ ॥ ೨೫ ॥

ಮಧ್ಯಬೊಟ್ಟಿನ ಕೆಳಗಿನ ಎರಡು ಪರ್ವ (ರೇಖೆ) ಗಳಿಗೆ ಮೇರುವೆಂಬ ಹೆಸರು. ಅನಾಮಿಕಾ ಬೆರಳಿನ ಎರಡನೇ ಅಂದರೆ ಮಧ್ಯಪರ್ವದಿಂದ ಆರಂಭಿಸಿ ಆ ಮೇರುವನ್ನು ಪ್ರದಕ್ಷಿಣ ಕ್ರಮದಿಂದ ಮಧ್ಯಮಾಮೂಲ ಪರ್ಯಂತವಾಗಿ ಎಣಿಸಬೇಕು. ಅಂದರೆ ಹತ್ತು ಹತ್ತರ ಸಂಖ್ಯೆಯು ಹೊರಡುವದಲ್ಲದೆ ಆ ಕ್ರಮವು ಫಲಕಾರಿಯೂ ಆಗಿದೆ.

ಸ್ಫಟಿಕೇಂದ್ರಾಕ್ಷಕೈರ್ಮಾಲಾ ತಥೈವಾಂಗುಲಿ ಪರ್ವಭಿಃ ।
ಶಂಖರೂಪ್ಯ ಮಯೀಮಾಲಾ ಕಾಂಚನೀನಿಂಬಜೋತ್ಪಲೈಃ ।
ಪದ್ಮಾಕ್ಷಕೈಶ್ಚ ರುದ್ರಾಕ್ಷೈರ್ವಿದ್ರುಮೈರ್ಮಣಿಮೌಕ್ತಿಕೈಃ ॥ ೨೬ ॥

ಸ್ಫಟಿಕ, ಇಂದ್ರನೀಲ ಅಥವಾ ಕೈಬೆರಳಿನ ಗಂಟು, ಶಂಖಮಣಿ, ಬೆಳ್ಳಿ, ಬಂಗಾರ, ತಾವರೇಬೀಜ, ರುದ್ರಾಕ್ಷ, ಹವಳ, ಮುತ್ತು ಈ ಮೊದಲಾದ ಮಣಿಗಳ ಸರದಿಂದ ಜಪವನ್ನು ಮಾಡತಕ್ಕದ್ದು.

ಉಷ್ಣಿಷೀ ಕಂಚುಕೀ ನಗ್ನೋ ಮುಕ್ತಕೇಶೋ ಗಲಾವೃತಃ ।
ಅಪವಿತ್ರಕರೋಽಶುದ್ಧಃ ಪ್ರಲಪನ್ನಜಪೇತ್ಕ್ವಚಿತ್ ॥ ೨೭ ॥

ತಲೆಗೆ ಮುಂಡಾಸವನ್ನು ಹಾಕಿಕೊಂಡು ಅಥವಾ ಅಂಗಿಯನ್ನು ಹಾಕಿಕೊಂಡು ಬತ್ತಲೆಯಾಗಿಯೂ ತಲೆಕೂದಲುಗಳನ್ನು ಹರಡಿಕೊಂಡು ಕುತ್ತಿಗೆಗೆ ವಸ್ತ್ರಾದಿಗಳನ್ನು ಸುತ್ತಿಕೊಂಡು ಅಪವಿತ್ರವಾದ ಕೈಗಳುಳ್ಳವನಾಗಿ ಅಥವಾ ಅಶುಚಿಯಾಗಿ ಬಾಯಲ್ಲಿ ಬಡಬಡಿಸುತ್ತಾ ಜಪವನ್ನು ಮಾಡಲಾಗದು.

ಹಸ್ತಾಭ್ಯಾಂ ಸ್ವಸ್ತಿಕಂ ಕೃತ್ವಾ ಪ್ರಾತಸ್ತಿಷ್ಠೇದ್ದಿವಾಕರಂ ।
ಮಧ್ಯಾಹ್ನೇ ಚ ರುಜೂಬಾಹೂ ಸಾಯಂ ಮುಕುಳಿತೌ ಕರೌ ॥ ೨೮ ॥

ಪ್ರಾತಃಕಾಲದಲ್ಲಿ ಸೂರ್ಯನ ಸಮ್ಮುಖದಲ್ಲಿ ಕೈಗಳನ್ನು ಸ್ವಸ್ತಿಕಾಕಾರ (×) ಮಾಡಿಕೊಂಡೂ, ಮಧ್ಯಾಹ್ನದಲ್ಲಿ ನೆಟ್ಟಗೆ ಮಾಡಿಕೊಂಡೂ, ಸಾಯಂಕಾಲದಲ್ಲಿ ಮೊಗ್ಗೆಯಂತೆ ಮಾಡಿಕೊಂಡೂ ಉಪಸ್ಥಾನ ಮಾಡತಕ್ಕದ್ದು.

ಸಂಧ್ಯಾಹೀನೋ ಶುಚಿರ್ನಿತ್ಯಮನರ್ಹಃ ಸರ್ವಕರ್ಮಸು ।
ಯತ್ಕಿಂಚಿತ್ಕುರುತೇ ಕರ್ಮ ತತ್ಸರ್ವಂ ನಿಷ್ಫಲಂ ಭವೇತ್ ॥ ೨೯ ॥

ಸಂಧ್ಯಾವಂದನೆಯನ್ನು ಮಾಡದಿದ್ದವನು ಯಾವ ಕಾರ್ಯಕ್ಕೂ ಯೋಗ್ಯನಾಗಲಾರನು. ಏನಾದರೂ ಮಾಡಿದರೂ ನಿಷ್ಫಲವೇ ಸರಿ.

ಸಂಧ್ಯಾ ಕರ್ಮಾವಸಾನೇ ತು ಸ್ವಯಂ ಹೋಮೋ ವಿಧಿಯತೇ ।
ರುತ್ವಿಕ್ ಪುತ್ರೋ ಗುರುರ್ಭ್ರಾತಾ ಭಾಗಿನೇ ಯೋಥವಿಟ್‌ಪತಿಃ ।
ಏತೈರೇವಹುತಂ ಯತ್ಸ್ಯಾತ್ತದ್ಧುತಂ ಸ್ವಯಮೇವ ತು ॥ ೩೦ ॥

ಸಂಧ್ಯಾವಂದನೆಯನ್ನು ಮಾಡಿದ ನಂತರದಲ್ಲಿ ತಾನು ಔಪಾಸನ ಹೋಮವನ್ನು ಮಾಡತಕ್ಕದ್ದು. ತನಗೆ ಅನನುಕೂಲವಾದರೆ ರುತ್ವಿಜರು, ಪುತ್ರರು, ಗುರು, ಅಣ್ಣ ತಮ್ಮಂದಿರು, ತಂಗಿ ಅಥವಾ ಅಕ್ಕನ ಮಕ್ಕಳು, ಅಳಿಯ ಈ ಪೈಕಿ ಯಾರು ಮಾಡಿದರೂ ತಾನು ಮಾಡಿದಂತೆಯೇ ಸರಿ. (ಪ್ರತಿನಿಧಿಗಳೆಂದರ್ಥ.)

ಅಸಮಕ್ಷಂ ತು ದಂಪತ್ಯೋರ್ಹೋತವ್ಯಂ ನರ್ತ್ವಿಗಾದಿನಾ ।
ದ್ವಯೋರಪ್ಯಸಮಕ್ಷಂ ಚೇತ್ ಭವೇದ್ಧುತಮನರ್ಥಕಂ ॥ ೩೧ ॥

ದಂಪತಿಗಳ ಪೈಕಿ ಯಾರಾದರೂ ಇಲ್ಲದಿದ್ದರೆ ಅವರ ಸಲುವಾಗಿ ಋತ್ವಿಗಾದಿಗಳನ್ನು ಮಾಡುವದಲ್ಲ. ದಂಪತಿಗಳ ಪೈಕಿ ಒಬ್ಬರೂ ಇಲ್ಲದಿದ್ದರೆ ಋತ್ವಿಗಾದಿಗಳನ್ನು ಮಾಡಿದರೆ ಅನರ್ಥವನ್ನುಂಟುಮಾಡಿದಂತೆಯೇ ಸರಿ

ಪ್ರಾತರ್ಹೋಮಃ ಸಂಗವಾಂತಃ ಕಾಲಸ್ತ್ವನುದಿನಸ್ತಥಾ ।
ಸಾಯಮಸ್ತಮಿತೇ ಹೋಮಕಾಲಸ್ತು ನವನಾಡಿಕಾಃ ॥ ೩೨ ॥

ಪ್ರಾತಃಕಾಲದ ಹೋಮವನ್ನು ಸಂಗವಾಂತ (೧೨ ಘಳಿಗೆ) ದ ಒಳಗೆ ಮಾಡಬಹುದು. ಸಾಯಂಕಾಲದ ಹೋಮವನ್ನು ಮಾತ್ರ ೯ ಘಟಿ ಒಳಗೆ ಮಾಡುವದು.

ಅಗ್ನಿಸಂರಕ್ಷಣೇ ನಿತ್ಯಂ ಯಸ್ಯ ಶಕ್ತಿರ್ನವಿದ್ಯತೇ ।
ಸಮಿಧ್ಯಾರೋಪಯೇದಗ್ನಿಂ ಹಸ್ತಯೋರಥವಾಪಿ ಚ ॥ ೩೩ ॥

ಯಾವಾತನು ಮನೆಯಲ್ಲಿ ಅಗ್ನಿಯನ್ನಿಟ್ಟು ಅದನ್ನು ಕಾಯಲಸಮರ್ಥನೋ ಆತನು ಆಗಿಂದಾಗ ಸಮಿತ್ತುಗಳಲ್ಲಾಗಲೀ ಹಸ್ತದಲ್ಲಾಗಲೀ ಅಗ್ನಿಯನ್ನಾರೋಪಿಸಿ ಇಟ್ಟುಕೊಳ್ಳತಕ್ಕದ್ದು.

ಪಲಾಶಃ ಖದಿರೋಽಶ್ವತ್ಥಃ ಶಮ್ಯೌದುಂಬರಜಾಃ ಸಮಿತ್ ।
ಅಪಾಮಾರ್ಗಾಶ್ಚ ದೂರ್ವಾಶ್ಚ ಕುಶಾಶ್ಚೇತ್ಯಪರೇ ವಿದುಃ ॥ ೩೪ ॥

ಮುತ್ತುಗ, ಖೈರ, ಅಶ್ವತ್ಥ, ಶಮಿ, ಅತ್ತಿ ಅಥವಾ ಉತ್ತರಣೆ, ದೂರ್ವೆ, ದರ್ಭೆ ಈ ಸಮಿಧಗಳನ್ನುಪಯೋಗಿಸುವದು.

ಸತ್ವಚಃ ಸಮಿಧಃ ಕಾರ್ಯಾಋಜ್ವ್ಯಃಶ್ಲಕ್ಷ್ಣಾಃ ಸಮಾಸ್ತಥಾ ।
ಶಸ್ತಾ ದಶಾಂಗುಲಾಸ್ತಾಸ್ತು ದ್ವಾದಶಾಂಗುಲಿಕಾಸ್ತಥಾ ॥ ೩೫ ॥

ಸಮಿಧಗಳು ತೊಗಟೆಯಿಂದ ಸಹಿತಗಳಾಗಿಯೂ, ನೆಟ್ಟಗಿರುವಂಥವೂ, ಮೆತ್ತಗಿರುವಂಥವೂ ಸಮಾನಗಳಾಗಿಯೂ ಹತ್ತು ಇಲ್ಲವೆ ಹನ್ನೆರಡಂಗುಲಿಗಳಷ್ಟು ಪ್ರಮಾಣ ಉಳ್ಳವುಗಳಾಗಿಯೂ ಇರತಕ್ಕದ್ದು.

ಚತುರಸ್ರಂ ಚ ಷಟ್ಕೋಣಂ ಪ್ರಾಚೀದಿಕ್ಪ್ರವಣಂ ತಥಾ ।
ಅರತ್ನಿ ಮಾತ್ರಂ ವಿಜ್ಞೇಯಂ ಅಗ್ನ್ಯಾಯತನಂ ಶುಭಂ ॥ ೩೬ ॥

ಅಗ್ನಿಕುಂಡವು, ಚತುರಸ್ರ ಇಲ್ಲವೆ ಷಟ್ಕೋಣವಾಗಿ ಪೂರ್ವದಿಕ್ಕಿಗೆ ತಗ್ಗಿರುವದಾಗಿ ಅರತ್ನಿ (ಒಂದು ಮೊಳ) ಪರಿಮಾಣ ಉಳ್ಳದ್ದಾಗಿಯೂ ಇರತಕ್ಕದ್ದು. ಇದು ಶುಭವಾದದ್ದು.

ಪ್ರತ್ಯುತ್ಥಾನಾಭಿಗಮನೇ ವಂದನಂ ಪ್ರಿಯಭಾಷಣಂ ।
ಆಸನಂ ಚಾನ್ನತೋಯೇ ಚ ಸ್ವರ್ಗಸೋಪಾನಮುತ್ತಮಂ ॥ ೩೭ ॥

ಯಾರಾದರೂ ಹಿರಿಯರು ಬಂದರೆ ಎದ್ದು ನಿಲ್ಲುವದು, ಸಮ್ಮುಖವಾಗಿ ಹೋಗುವದು, ನಮಸ್ಕರಿಸುವದು, ಒಳ್ಳೇ ಮಾತುಗಳನ್ನಾಡುವದು, ಆಸನವ ನ್ನೀಯುವದು. ಅನ್ನವನ್ನು ಕೊಡುವದು, ಜಲವನ್ನೆರೆಯುವದು ಇವೆಲ್ಲ ನಿಜವಾಗಿ ಸ್ವರ್ಗದ ಮೆಟ್ಟಲುಗಳಾಗಿವೆ.

ಊರ್ಧ್ವಂ ಪ್ರಾಣಾ ಹ್ಯುತ್ಕ್ರಾಮಂತಿ ಯೂನಃ ಸ್ಥವಿರ ಆಯತಿ ।
ಪ್ರತ್ಯುತ್ಥಾನಾಭಿವಾದಾಭ್ಯಾಂ ಪುನಸ್ತಾನ್ ಪ್ರತಿಪದ್ಯತೇ ॥ ೩೮ ॥

ಕಿರಿಯವನ ಮುಂದೆ ಹಿರಿಯನು ಬಂದ ಕೂಡಲೇ ಶರೀರದಲ್ಲಿರುವ ಪ್ರಾಣಗಳು ಮೇಲಕ್ಕೆಳೆಯಲ್ಪಡುತ್ತವೆ. ಎದ್ದು ನಿಂತು ಎದುರಾದರೆ ಪುನಃ ಆ ಪ್ರಾಣಗಳು ತಮ್ಮ ಸ್ಥಾನದಲ್ಲಿ ನಿಂತುಕೊಳ್ಳುವವು.

ಅಭಿವಾದನಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ ।
ಚತ್ವಾರಿ ಸಮ್ಯಗ್ವರ್ಧಂತೇ ಆಯುಃ ಪ್ರಜ್ಞಾಯಶೋಬಲಂ ॥ ೩೯ ॥

ನಿತ್ಯದಲ್ಲೂ ಹಿರಿಯರನ್ನು ನಮಸ್ಕಾರಾದಿಗಳಿಂದ ಸೇವಿಸುತ್ತಿರುವ ಜನರ ಆಯುಸ್ಸೂ, ಬುದ್ಧಿಯೂ, ಕೀರ್ತಿಯೂ, ಬಲವೂ ಹೆಚ್ಚುತ್ತಿರುವವು.

ಭೋಃ ಶಬ್ದಂ ಕೀರ್ತಯೇದಂತೇ ಸ್ವಸ್ಯ ನಾಮ್ನೋಭಿವಾದನೇ ।
ಆಯುಷ್ಮಾನ್ ಭವ ಸೌಮ್ಯೇತಿ ವಾಚ್ಯೋ ವಿಪ್ರೋಭಿವಾದನೇ ॥ ೪೦ ॥

ನಮಸ್ಕಾರ ಮಾಡುವವನು ತನ್ನ ನಾಮೋಚ್ಚಾರಣೆಯನ್ನು ಮಾಡುತ್ತ 'ಭೋ ಅಭಿವಾದಯೇ' ಎಂದು ಹೇಳುವದು. ನಮಸ್ಕಾರ ಮಾಡಿಸಿಕೊಳ್ಳುವವನು ನಮಸ್ಕಾರ ಮಾಡಿದ ಕೂಡಲೇ 'ಆಯುಷ್ಮಾನ್ ಭವ' ಎಂದು ಹೇಳತಕ್ಕದ್ದು.

ಜಪೇ ಹೋಮೇ ಜಲಸ್ಥೇ ಚ ವಿಣ್ಮೂತ್ರಾದಿ ವಿಸರ್ಜನೇ ।
ಉಚ್ಛಿಷ್ಟಸಮಯೇ ವಾಪಿ ನಾಭಿವಾದ್ಯಃ ಕದಾಚನ ॥ ೪೦ ॥

ಜಪಮಾಡುವಾಗಲೂ, ಹೋಮಮಾಡುವಾಗಲೂ, ನೀರಿನಲ್ಲಿರುವಾಗಲೂ, ಮಲಮೂತ್ರ ವಿಸರ್ಜನಮಾಡುವಾಗಲೂ, ಉಚ್ಛಿಷ್ಟವಾಗಿರುವಾಗಲೂ ಆತನಿಗೆ ನಮಸ್ಕಾರ ಮಾಡಬಾರದು.

ಸಭಾಯಾಂ ಯಜ್ಞಶಾಲಾಯಾಂ ದೇವತಾಯತನೇ ತಥಾ ।
ಪ್ರತ್ಯೇಕಂ ತು ನಮಸ್ಕುರ್ಯಾದ್ಧಂತಿ ಪುಣ್ಯಂ ಪುರಾಕೃತಂ ॥ ೪೨ ॥

ಸಭೆಯಲ್ಲಿಯೂ, ಯಜ್ಞಶಾಲೆಯಲ್ಲಿಯೂ, ದೇವಸ್ಥಾನದಲ್ಲೂ ಪ್ರತ್ಯೇಕವಾಗಿ ನಮಸ್ಕಾರ ಮಾಡಿದರೆ ಪೂರ್ವದಲ್ಲಿ ಮಾಡಿದ ಪುಣ್ಯವು ನಾಶವಾಗುವದು.

ಇಕ್ಷುಮಾಪಃ ಫಲಂ ಮೂಲಂ ತಾಂಬೂಲಂ ಚ ಯದೌಷಧಂ ।
ಭಕ್ಷಯಿತ್ವಾಪಿ ಕರ್ತವ್ಯಂ ಜಪದಾನಾದಿಕಾಃ ಕ್ರಿಯಾಃ ॥ ೪೩ ॥

ಕಬ್ಬು, ಜಲ, ಫಲ, ಮೂಲ, ತಾಂಬೂಲ, ಔಷಧ ಇವುಗಳನ್ನು ಸ್ನಾನ ಮಾಡಿದ ಮೇಲೆ ಮಾಡಿದರೂ ಪುನಃ ಸ್ನಾನಮಾಡದೆ ಜಪದಾನಾದಿ ಕಾರ್ಯಗಳನ್ನು ಮಾಡಬಹುದು.

॥ ಇತ್ಯಾಚಾರವಿಧೌ ತೃತೀಯೋಽಧ್ಯಾಯಃ ॥

ಆಚಾರನಿಧಿಯಲ್ಲಿ ಮೂರನೇ ಅಧ್ಯಾಯವು ಸಮಾಪ್ತಿಯನ್ನು ಹೊಂದಿತು.

॥ ಅಥ ಚತುರ್ಥೋಽಧ್ಯಾಯಃ ॥

ನಾಲ್ಕನೇ ಅಧ್ಯಾಯ ಪ್ರಾರಂಭವು.

ಚತುರ್ಥೇ ತು ತಥಾ ಭಾಗೇ ಸ್ನಾನಾರ್ಥಂ ಮೃದಮಾಹರೇತ್ ।
ಅರುಗ್ ದಿವಾಚರೇತ್ಸ್ನಾನಂ ಮಧ್ಯಾಹ್ನಾತ್ಪ್ರಾಗ್ವಿಶೇಷತಃ ॥ ೧ ॥

ದಿವಸದ ನಾಲ್ಕನೇ ಭಾಗದಲ್ಲಿ ಸ್ನಾನಕ್ಕೋಸ್ಕರ ಮೃತ್ತಿಕಾ ಸಂಗ್ರಹ ಮಾಡತಕ್ಕದ್ದು. ಪ್ರಾತಃಕಾಲದಲ್ಲಿ ಸ್ನಾನಮಾಡಿದರೂ ಮಧ್ಯಾಹ್ನದ ಒಳಗೆ ನಿರೋಗಿಯಾದವನು ಪುನಃ ಸ್ನಾನಮಾಡಬೇಕು.

ಶೂದ್ರೋಚ್ಛಿಷ್ಟಂ ದ್ವಿಜಃ ಸ್ಪೃಷ್ಟ್ವಾ ಉಚ್ಛಿಷ್ಟಂ ಶೂದ್ರಮೇವ ವಾ ।
ಶುಚಿಮಪ್ಯವಗುಹ್ಯೈನಂ ಸವಾಸಾ ಜಲಮಾವಿಶೇತ್ ॥ ೨ ॥

ಶೂದ್ರನ ಉಚ್ಛಿಷ್ಟವನ್ನೂ ಶೂದ್ರನನ್ನೂ ಉಚ್ಛಿಷ್ಟವಸ್ತುವನ್ನೂ ಸ್ಪರ್ಶ ಮಾಡಿದರೆ ಬ್ರಾಹ್ಮಣನು ಕೂಡಲೇ ಉಟ್ಟ, ತೊಟ್ಟ, ವಸ್ತ್ರಸಹಿತನಾಗಿ ಸ್ನಾನ ಮಾಡಬೇಕು.

ತೀರ್ಥೇ ವಿವಾಹೇ ಯಾತ್ರಾಯಾಂ ಸಂಗ್ರಾಮೇ ದೇಶವಿಪ್ಲವೇ ।
ನಗರಗ್ರಾಮದಾಹೇ ಚ ಸ್ಪೃಷ್ಟಾಸ್ಪೃಷ್ಟಿರ್ನ ದುಷ್ಯತಿ ॥ ೩ ॥

ತೀರ್ಥದಲ್ಲಿಯೂ ವಿವಾಹಕಾಲದಲ್ಲಿಯೂ ಯಾತ್ರೆಯಲ್ಲಿಯೂ ಯುದ್ಧದಲ್ಲಿಯೂ, ದೇಶಕ್ಷೋಭೆಯಲ್ಲೂ, ಪಟ್ಟಣ ಗ್ರಾಮಗಳಿಗೆ ಬೆಂಕಿಬಿದ್ದಾಗಲೂ, ಸ್ಪೃಷ್ಟಾಸ್ಪೃಷ್ಟಿ (ಮಡಿಮೈಲಿಗೆ) ಯ ದೋಷವಿಲ್ಲವು.

ಅಧ್ಯಯನಂ ಬ್ರಹ್ಮಯಜ್ಞಃ ಪಿತೃಯಜ್ಞಸ್ತು ತರ್ಪಣಂ ।
ಹೋಮೋ ದೈವೋ ಬಲಿರ್ಭೌತೋ ನೃಯಜ್ಞೋಽತಿಥಿಪೂಜನಂ ॥ ೪ ॥

ಬ್ರಾಹ್ಮಣನು ಪ್ರತಿನಿತ್ಯದಲ್ಲಿ ಐದು ಯಜ್ಞಗಳನ್ನು ಮಾಡಬೇಕು. ವೇದಾಧ್ಯಯನ ಮಾಡಿದರೆ ಬ್ರಹ್ಮಯಜ್ಞವೂ, ತರ್ಪಣದಿಂದ ಪಿತೃಯಜ್ಞವೂ, ವೈಶ್ವದೇವಾದಿ ಹೋಮಗಳಿಂದ ದೇವಯಜ್ಞವೂ, ಬಲಿಹರಣದಿಂದ ಭೂತಯಜ್ಞವೂ, ಅತಿಥಿ ಭೋಜನದಿಂದ ಮನುಷ್ಯಯಜ್ಞವೂ ಆಗುತ್ತದೆ.

ಪಂಚಸೂನಾಗೃಹಸ್ಥಸ್ಯ ಚುಲ್ಲೀಪೇಷಣ್ಯುಪಸ್ಕರಃ ।
ಕಂಡನೀ ಚೋದಕುಂಭಶ್ಚ ಬಧ್ಯತೇ ಯಾಸ್ತುವಾಹಯನ್ ॥ ೫ ॥

ಗೃಹಸ್ಥನಿಗೆ ಒಲೆಯಿಂದಲೂ, ಬೀಸುವ ಕಲ್ಲಿನಿಂದಲೂ, ಸದೆ ಉಡುಗುವ ಕಸಬರಿಗೆಯಿಂದಲೂ, ಒನಿಕೆ ಮೊದಲಾದವುಗಳಿಂದಲೂ, ನೀರು ತುಂಬಿದ ಕೊಡದಿಂದಲೂ ಹಿಂಸಾರೂಪವಾದ ದೋಷವು ಪ್ರಾಪ್ತವಾಗುತ್ತದೆ. ಇದಕ್ಕೆ ಪಂಚಸೂನಾದೋಷವೆನ್ನುವರು.

ಪಂಚೈತಾನ್ಯೋ ಮಹಾಯಜ್ಞಾನ್ನಹಾಪಯತಿ ಶಕ್ತಿತಃ ।
ಸಗೃಹೇಪಿ ವಸನ್ನಿತ್ಯಂ ಸೂನಾ ದೋಷೈರ್ನ ಲಿಪ್ಯತೇ ॥ ೬ ॥

ಯಾವಾತನು ಮನೆಯಲ್ಲಿರುತ್ತಿರುವವನಾಗಿ ಯಥಾಶಕ್ತಿಯಾಗಿ ಪಂಚಯಜ್ಞಗಳನ್ನು ನೆರವೇರಿಸುತ್ತಾನೋ ಆತನ ಆ ಪಂಚಸೂನಾ ದೋಷಗಳು ಅವುಗಳಿಂದ ನಾಶವನ್ನು ಹೊಂದುವವು.

ಅನಿವರ್ತ್ಯ ಮಹಾಯಜ್ಞಾನ್ ಯೋ ಭುಂಕ್ತೇ ಪ್ರತ್ಯಹಂ ಗೃಹೀ ।
ಅನಾತುರಃ ಸತಿಧನೇ ಸಕೃಚ್ಛ್ರಾರ್ಧೇನ ಶುಧ್ಯತಿ ॥ ೭ ॥

ಯಾವ ಗೃಹಸ್ಥನು ಪ್ರತಿನಿತ್ಯ ಪಂಚಮಹಾಯಜ್ಞಗಳನ್ನಾಚರಿಸದೆ ಊಟಮಾಡುತ್ತಾನೋ ಆತನು ಅರ್ಧಕೃಚ್ಛ್ರ ಪ್ರಾಯಶ್ಚಿತ್ತದಿಂದ ಶುದ್ಧನಾಗುವನು. (ಇದು ಧನಾನುಕೂಲತೆಯೂ, ದೇಹಾನುಕೂಲತೆಯೂ ಇದ್ದ ಗೃಹಸ್ಥನ ಪರವಾದದ್ದು)

ಅಧ್ಯರ್ಧಯಾಮಾದಾ ಸಾಯಂಸಂಧ್ಯಾ ಮಾಧ್ಯಾಹ್ನಿಕೇಷ್ಯತೇ ।
ಸಂಧ್ಯಾತ್ರಯಂ ತು ಕರ್ತವ್ಯಂ ದ್ವಿಜೇನಾತ್ಮವಿದಾ ಸದಾ ॥ ೮ ॥

ಮೂರುವರೆ ಘಳಿಗೆಯಿಂದ ಸಾಯಂಕಾಲವಾಗುವ ಪರ್ಯಂತವಾಗಿಯೂ ಮಾಧ್ಯಾಹ್ನ ಸಂಧ್ಯಾವಂದನೆಗೆ ಅವಧಿಯಿರುತ್ತದೆ. ಒಟ್ಟಿನ ಮೇಲೆ ತಿಳಿದಂಥವನು ಮೂರು ಸಂಧ್ಯಾವಂದನೆಗಳನ್ನು ಮಾಡಬೇಕು.

ಪ್ರಾತರ್ಹೋಮಂ ಚ ಕೃತ್ವಾ ವಾ ದೇವತಾರ್ಚನಮಾರಭೇತ್ ।
ಯದ್ವಾ ಮಾಧ್ಯಾಹ್ನಿಕಂ ಕೃತ್ವಾ ಪೂಜಯೇತ್ಪುರುಷೋತ್ತಮಂ ॥ ೯ ॥

ಪ್ರಾತಃಕಾಲದ ಔಪಾಸನ ಹೋಮಮಾಡುವ ನಂತರದಲ್ಲಾಗಲೀ ಅಥವಾ ಮಧ್ಯಾಹ್ನದ ಸಂಧ್ಯಾವಂದನ ಮಾಡಿದ ಮೇಲಾಗಲೀ ದೇವರ ಪೂಜೆಯನ್ನು ಮಾಡತಕ್ಕದ್ದು.

ಆವಾಹನಾಸನಾರ್ಘ್ಯ ಪಾದ್ಯಾಚಮನ ಮಧುಪರ್ಕಸ್ನಾನಾಶ್ಚ ।
ಭೂಷಣ ಗಂಧಾಃ ಸುಮನೋಯುತ ಧೂಪದೀಪ ಭೋಜ್ಯಾನಿ ।
ಪ್ರಾದಕ್ಷಿಣ್ಯಂ ಸ್ತುತಿರಿತಿ ಕಥಯಂತ್ಯುಪಚಾರ ಷೋಡಶಕಂ ॥ ೧೦ ॥

ಆವಾಹನ, ಆಸನ, ಅರ್ಘ್ಯ, ಪಾದ್ಯ, ಆಚಮನ, ಮಧುಪರ್ಕ, ಸ್ನಾನ, ಆಭರಣ, ಗಂಧ, ಅಕ್ಷತ, ಪುಷ್ಪ, ಧೂಪ, ದೀಪ, ನೈವೇದ್ಯ, ಪ್ರದಕ್ಷಿಣ, ಪ್ರಾರ್ಥನಾ ಇತ್ಯಾದಿ ಷೋಡಶ ಉಪಚಾರಗಳು.

ಶೈಲೀದಾರುಮಯೀ ತಾಹೀ ಲೇಪ್ಯಾಲೇಖ್ಯಾ ಚ ಸೈಕತೀ ।
ಮನೋಮಯೀ ಮಣಿಮಯೀ ಪ್ರತಿಮಾಷ್ಟವಿಧಾ ಸ್ಮೃತಾ ॥ ೧೧ ॥

ಶಿಲಾ, ಕಟ್ಟಿಗೆ, ಲೋಹ, ಲೇಪ, ಚಿತ್ರ, ಮಳಲು, ಮನಃಶಿಲಾ, ರತ್ನ ಹೀಗೆ ಎಂಟು ವಸ್ತುಗಳಿಂದ ದೇವಪ್ರತಿಮೆಯನ್ನು ಮಾಡತಕ್ಕದ್ದು.

ನಾರ್ಚ್ಯಾ ಗೃಹೇಶ್ಮಜಾ ಮೂರ್ತಿಶ್ಚತುರಂಗುಲತೋಧಿಕಾ ।
ನ ವಿತಸ್ತ್ಯಧಿಕಾಧಾತು ಸಂಭವಾಶ್ರೇಯ ಇಚ್ಛತಾ ॥ ೧೨ ॥

ಮನೆಯಲ್ಲಿ ಶಿಲೆಯಿಂದ ನಾಲ್ಕು ಅಂಗುಲಕ್ಕಿಂತ ಹೆಚ್ಚಾದ ಮೂರ್ತಿಯನ್ನೂ ಕಂಚು ಹಿತ್ತಾಳಿ ಮೊದಲಾದ ಧಾತುಗಳಿಂದ ಹನ್ನೆರಡು ಅಂಗುಲಕ್ಕಿಂತ ಹೆಚ್ಚು ದೊಡ್ಡದಾದ ಮೂರ್ತಿಯನ್ನೂ ಇಟ್ಟು ಪೂಜಿಸಬಾರದು.

ಶಾಲಗ್ರಾಮ ಶಿಲಾಯಾಸ್ತು ಪ್ರತಿಷ್ಠಾ ನೈವವಿದ್ಯತೇ ।
ಮಹಾಪೂಜಾಂ ತು ಕೃತ್ವಾದೌ ಪೂಜಯೇತ್ತಾಂ ತತೋ ಬುಧಃ ॥ ೧೩ ॥

ಶಾಲಗ್ರಾಮ ಶಿಲೆಯಲ್ಲಿ ಪ್ರತ್ಯಕ್ಷ ವಿಷ್ಣುವಿನ ಅಂಶವಿರುವದರಿಂದ ಅದಕ್ಕೆ ಪ್ರತಿಷ್ಠೆಮಾಡುವದವಶ್ಯವಿಲ್ಲ. ಮಹಾಪೂಜಾದಿಗಳನ್ನು ಯಥೋಕ್ತ ಪೂಜಿಸತಕ್ಕದ್ದು.

ಗೃಹೇ ಲಿಂಗದ್ವಯಂ ನಾರ್ಚ್ಯಂ ಶಾಲಗ್ರಾಮದ್ವಯಂ ತಥಾ ।
ಶಕ್ತಿತ್ರಯಂ ತಥಾನಾರ್ಚ್ಯಂ ಗಣೇಶತ್ರಯಮೇವ ಚ ॥ ೧೪ ॥

ಮನೆಯಲ್ಲಿ ಎರಡು ಶಿವಲಿಂಗವನ್ನೂ ಎರಡು ಸಾಲಿಗ್ರಾಮುವನ್ನೂ ಮೂರು ದುರ್ಗಾ ಮೂರ್ತಿಗಳನ್ನೂ ಮೂರು ಗಣಪತಿ ಪ್ರತಿಮೆಗಳನ್ನೂ ಅರ್ಚಿಸಬಾರದು. ಇದಕ್ಕಿಂತ ಹೆಚ್ಚು ಕಡಿಮೆ ಸಂಖ್ಯೆಯಿಂದ ಪೂಜಿಸುವದೆಂದಭಿಪ್ರಾಯ.

ಪ್ರತಿಮಾ ಪಟ್ಟಯಂತ್ರಾಣಾಂ ನಿತ್ಯಂ ಸ್ನಾನಂ ನ ಕಾರಯೇತ್ ।
ಕಾರಯೇತ್ಪರ್ವದಿವಸೇ ಯದಾ ವಾಮಲಧಾರಣಂ ॥ ೧೫ ॥

ಪ್ರತಿಮೆಗಳು ಪಟ್ಟಯಿಂದ ತಯಾರಿಸಿದ್ದು ಯಂತ್ರ ಮೊದಲಾದವುಗಳು ಇವುಗಳಿಗೆಲ್ಲ ನಿತ್ಯ ಸ್ನಾನವನ್ನು ಮಾಡಿಸಲಾಗದು. ಪರ್ವದಿವಸಗಳಲ್ಲೂ ಮಣ್ಣು ಮೊದಲಾದವುಗಳಿಂದ ದೂಷಿತವಾದಾಗಲೂ ಸ್ನಾನಮಾಡಿಸುವದು.

ರಕ್ತಾನ್ಯಕಾಲಜಾತಾನಿ ಚೈತ್ಯವೃಕ್ಷೋದ್ಭವಾನಿ ಚ ।
ಸ್ಮಶಾನಜಾತಪುಷ್ಪಾಣಿ ನೈವದೇಯಾನಿ ಕರ್ಹಿಚಿತ್ ॥ ೧೬ ॥

ಕೆಂಪು ವರ್ಣದ್ದಾಗಿಯೂ, ಅಕಾಲದಲ್ಲಿ ಉಂಟಾಗಿಯೂ, ಸಾರ್ವಜನಿಕ ಮಾರ್ಗದಲ್ಲಿ ಉತ್ಪನ್ನವಾಗಿಯೂ, ಸ್ಮಶಾನದಲ್ಲಿ ಉತ್ಪನ್ನವಾಗಿಯೂ, ಇರುವ ಪುಷ್ಪಗಳನ್ನು ದೇವರಿಗೆ ಸಮರ್ಪಿಸಬಾರದು.

ಪಲಾಶಂ ದಿನಮೇಕಂ ಚ ಪಂಕಜಂ ಚ ದಿನತ್ರಯಂ ।
ಪಂಚಾಹಂ ಬಿಲ್ವಪತ್ರಂ ಚ ದಶಾಹಂ ತುಲಸೀದಲಂ ॥ ೧೭ ॥

ಮುತ್ತುಗದಹೂವು ಒಂದು ದಿವಸವೂ, ಕಮಲವು ಮೂರು ದಿನ ಪರ್ಯಂತವೂ, ಬಿಲ್ವಪತ್ರೆಯು ಐದು ದಿನ ಪರ್ಯಂತವಾಗಿಯೂ, ತುಲಸೀ ಪತ್ರೆಯು ಹತ್ತು ದಿನ ಪರ್ಯಂತವಾಗಿಯೂ ಉಪಯೋಗಕ್ಕೆ ಯೋಗ್ಯವಾಗುವದು. ಅಂದರೆ ನಿಷಿದ್ಧವಲ್ಲ.

ನ ಬಿಲ್ವೈರ್ನಾರ್ಚಯೇದ್ಭಾನುಂ ನ ಕೇತಕ್ಯಾ ಮಹೇಶ್ವರಂ ।
ನಾಕ್ಷತೈಃ ಪೂಜಯೇದ್ವಿಷ್ಣುಂ ನ ತುಲಸ್ಯಾ ಗಣಾಧಿಪಂ ॥ ೧೮ ॥

ಬಿಲ್ವಪತ್ರೆಯಿಂದ ಸೂರ್ಯನನ್ನೂ ಕೇದಿಗೆಯಿಂದ ಪರಮೇಶ್ವರನನ್ನೂ ಅಕ್ಷತಗಳಿಂದ ವಿಷ್ಣುವನ್ನೂ ತುಲಸಿಯಿಂದ ಗಣಪತಿಯನ್ನೂ ಪೂಜಿಸಬಾರದು.

ಭೃಗ್ವರ್ಕಾಂಗಾರ ವಾರೇಷು ದ್ವಾದಶ್ಯಾಂ ಪಂಚಪರ್ವಸು ।
ಯೇ ವಿಚಿನ್ವಂತಿ ತುಲಸೀಂ ತೇ ಛಿಂದಂತಿ ಹರೇಃ ಶಿರಃ ॥ ೧೯ ॥

ಶುಕ್ರ ಆದಿತ್ಯ ಕುಜವಾರಗಳಲ್ಲಿಯೂ ದ್ವಾದಶಿಯಲ್ಲೂ ಪಂಚಪರ್ವತಿಥಿಗಳಲ್ಲಿಯೂ ಯಾರಾದರೂ ತುಳಸಿಯನ್ನು ಕೊಯ್ದರೆ ಅವರು ವಿಷ್ಣುವಿನ ಶಿರಸ್ಸನ್ನು ಕತ್ತರಿಸಿದಂತೆಯೇ ಸರಿ.

ಅಸಮರ್ಥನಾದರೆ ಒಂದೇ ಪಾತ್ರೆಯಲ್ಲಿ ಬೇಯಿಸಿ ಪ್ರತ್ಯೇಕಮಾಡಿ ಮೊದಲು ದೇವರ ನೈವೇದ್ಯವನ್ನು ಮಾಡಿ ವೈಶ್ವದೇವ ಮಾಡತಕ್ಕದ್ದು.

ಅಭಾವಾದಗ್ನಿಹೋತ್ರಸ್ಯ ತಥಾ ಚಾವಸಥಸ್ಯ ಚ ।
ಯಸ್ಮಿನ್ನಗ್ನೌಪಚೇದನ್ನಂ ತತ್ರ ಹೋಮೋ ವಿಧೀಯತೇ ॥ ೩೨ ॥

ಅಗ್ನಿಹೋತ್ರವಿಲ್ಲಧಿದ್ದರೆ ಅಥವಾ ಆವಸಥ್ಯಾಗ್ನಿಯ ಅಭಾವವಾದಲ್ಲಿ ಯಾವ ಅಗ್ನಿಯಲ್ಲಿ ಅನ್ನಮಾಡಿರುತ್ತಾರೋ ಆ ಅಗ್ನಿಯಲ್ಲಿ ವೈಶ್ವದೇವವನ್ನು ಮಾಡತಕ್ಕದ್ದು.

ಉತ್ತಾನೇನ ತು ಹಸ್ತೇನ ಅಂಗುಷ್ಠಾಗ್ರೇಣ ಪೀಡಿತಂ ।
ಸಂಹತಾಂಗುಲಿ ಪಾಣಿಸ್ತು ವಾಗ್ಯತೋ ಜುಹುಯಾದ್ಧವಿಃ ॥ ೩೩ ॥

ಅಂಗೈಯನ್ನು ಅಂಗಾತ ಮಾಡಿಕೊಂಡು ಬೆರಳನ್ನು ಒಟ್ಟುಗೂಡಿಸಿ ಅಂಗುಷ್ಠದಿಂದ ಹತ್ತಿಕ್ಕಿ ಆಹುತಿಯನ್ನು ಕೊಡತಕ್ಕದ್ದು.

ತತೋ ಗೋದೋಹಮಾತ್ರಂ ವೈ ಕಾಲಂ ತಿಷ್ಠೇದ್ಗೃಹಾಂಗಣೇ ।
ಅತಿಥಿಗ್ರಹಣಾರ್ಥಾಯ ತದೂರ್ಧ್ವಂ ವಾ ಯಥೇಚ್ಛಯಾ ।
ಅತಿಥಿಂ ತತ್ರ ಸಂಪ್ರಾಪ್ತಂ ಪೂಜಯೇತ್ಸ್ವಾಗತಾದಿನಾ ॥ ೩೪ ॥

ವೈಶ್ವದೇವ, ಬಲಿಹರಣಾನಂತರದಲ್ಲಿ ದನ ಕರೆಯುವಷ್ಟು ಹೊತ್ತು ಮನೆಯ ಅಂಗಳದಲ್ಲಿ ನಿಂತು ಅತಿಥಿ ನಿರೀಕ್ಷಣೆಮಾಡತಕ್ಕದ್ದು. ಆ ಕಾಲಕ್ಕೆ ಬಂದ ಅತಥಿಗಳನ್ನು ಸ್ವಾಗತಾದಿಗಳಿಂದ ಪೂಜಿಸತಕ್ಕದ್ದು.

ದೂರಾಚ್ಚೋಪಗತಂ ಶ್ರಾಂತಂ ವೈಶ್ವದೇವ ಉಪಸ್ಥಿತಂ ।
ಅತಿಥಿಂ ತಂ ವಿಜಾನೀಯಾತ್ ನಾತಿಥಿಃ ಪೂರ್ವಮಾಗತಃ ॥ ೩೫ ॥

ವೈಶ್ವದೇವಾಂತದಲ್ಲಿ ಪ್ರಾಪ್ತನಾಗಿಯೂ, ದೂರದಿಂದ ಬಂದವನಾಗಿಯೂ, ದಣಿದವನಾಗಿಯೂ ಇರುವವನೇ ಅತಿಥಿಯು. ಮೊದಲೇ ಬಂದಿದ್ದವನು ನಿಜವಾಗಿ ಅತಿಥಿಯಾಗಲಾರನು.

ಬ್ರಹ್ಮಚಾರೀ ಯತಿಶ್ಚೈವ ವಿದ್ಯಾರ್ಥೀ ಗುರುಪೋಷಕಃ ।
ಅಧ್ವಗಃ ಕ್ಷೀಣವೃತ್ತಿಶ್ಚ ಷಡೈತೇ ಭಿಕ್ಷುಕಾಃ ಸ್ಮೃತಾಃ ।

ಬ್ರಹ್ಮಚಾರಿಯೂ, ಯತಿಯೂ, ವಿದ್ಯಾರ್ಥಿಯೂ, ಬಹು ಜನರನ್ನು ಪೋಷಿಸುವವನೂ, ದಾರಿಕಾರನೂ, ವೃತ್ತಿರಹಿತನಾಗಿರುವವನೂ ಈ ಆರು ಜನರು ಭಿಕ್ಷುಕರೆಂದೆನ್ನಲ್ಪಡುತ್ತಾರೆ. ಇವರಿಗೆ ಭಿಕ್ಷೆಯನ್ನು ಕೊಡಬೇಕು.

ಆತ್ಮಾಹಾರಪ್ರಮಾಣೇನ ಪ್ರತ್ಯಹಂ ಗೋಷು ದೀಯತೇ ।
ಅಕೃತ್ವಾ ಸ್ವಯಮಾಹಾರಂ ಕುರ್ವನ್ ಪ್ರಾಪ್ನೋತಿ ದುರ್ಗತಿಂ ॥ ೩೭ ॥

ಪ್ರತಿನಿತ್ಯ ತಾನು ಉಣ್ಣುವಷ್ಟು ಅನ್ನವನ್ನು ಗೋವುಗಳಿಗೆ ಗ್ರಾಸಕೊಡಬೇಕು. ಹಾಗೆ ಮಾಡದೆ (ಸಮರ್ಥನಾಗಿದ್ದು) ಊಟಮಾಡಿದರೆ ದುರ್ಗತಿಯನ್ನು ಹೊಂದುತ್ತಾನೆ.

॥ ಇತ್ಯಾಚಾರವಿಧೌ ಚತುರ್ಥೋಽಧ್ಯಾಯಃ ॥

ನಾಲ್ಕನೇ ಅಧ್ಯಾಯವು ಮುಗಿದುದು.

॥ ಅಥ ಪಂಚಮೋಽಧ್ಯಾಯಃ ॥

ಐದನೇ ಅಧ್ಯಾಯ ಪ್ರಾರಂಭವು.

ಬಾಲಸ್ವವಾಸಿನೀ ವೃದ್ಧಗರ್ಭಿಣ್ಯಾತುರಕನ್ಯಕಾಃ ।
ಸಂಭೋಜ್ಯಾತಿಥಿಭೃತ್ಯಾಂಶ್ಚ ದಂಪತ್ಯೋಃ ಶೇಷಭೋಜನಂ ॥ ೧ ॥

ಬಾಲಕರು, ಸುವಾಸಿನಿಯರು, ವೃದ್ಧರು, ಗರ್ಭಿಣಿ, ರೋಗಪೀಡಿತರು, ಕನ್ನಿಕೆಯರು, ಅತಿಥಿಗಳು, ಸೇವಕರು ಇವರನ್ನು ಮೊದಲುಣಿಸಿ ನಂತರ ದಂಪತಿಗಳು ಊಟಮಾಡಬೇಕು.

ಯಸ್ತು ಭೋಜನಶಾಲಾಯಾಂ ಭೋಕ್ತುಕಾಮ ಉಪಸ್ಪೃಶೇತ್ ।
ಆಸನಸ್ಥೋ ನ ಚಾನ್ಯತ್ರ ಸ ವಿಪ್ರಃ ಪಂಕ್ತಿದೂಷಕಃ ॥ ೨ ॥

ಯಾವಾತನು ಊಟಮಾಡುವ ಒಳಗೆ ಅದೇ ಆಸನದಲ್ಲಿ ಕುಳಿತು ಆಚಮನಮಾಡುವನೋ ಆತನು ಪಂಕ್ತಿದೂಷಕ (ದೋಷಿ) ನಾಗುವನು.

ಸೌವರ್ಣೇ ರಾಜತೇ ತಾಮ್ರೇ ಪದ್ಮಪತ್ರಪಲಾಶಯೋಃ ।
ಭುಂಜೀತ ಪಾತ್ರೇ ಕಾಂಸ್ಯೇ ವಾ ಗೃಹೀ ಭಾಜನಸಿರಿತಂ ॥ ೩ ॥

ಬಂಗಾರ, ಬೆಳ್ಳಿ, ತಾಮ್ರ, ಕಂಚು ಇವುಗಳ ಪಾತ್ರೆಯಲ್ಲಿಯೂ ಕಮಲದ, ಮುತ್ತುಗದ ಎಲೆಗಳಿಂದ ರಚಿಸಿರುವ ಪಾತ್ರೆಯಲ್ಲಿಯೂ ಗೃಹಸ್ಥನಾದವನು ಊಟಮಾಡಬಹುದು.

ಪ್ರಾಙ್ಮುಖೋದಙ್ಮುಖೋ ವಾಪಿ ಸ್ವಾಚಾಂತೋ ವಾಗ್ಯತಃ ಶುಚಿಃ ।
ಭುಂಜೀತಾನ್ನಂ ಚ ತಚ್ಚಿತ್ತೋ ಹ್ಯಂತರ್ಜಾನುಃ ಸದಾ ನರಃ ॥ ೪ ॥

ಪೂರ್ವ ಮುಖ ಇಲ್ಲವೆ ಉತ್ತರಾಭಿ ಮುಖನಾಗಿ ಅನ್ನದಲ್ಲೇ ಮನಸ್ಸಿಟ್ಟು ಮೊಣಕಾಲುಗಳನ್ನು ಒಳಗೆ ಮಾಡಿಕೊಂಡು ಮೌನಿಯಾಗಿ ಊಟಮಾಡತಕ್ಕದ್ದು.

ಚತುರಸ್ರಂ ತ್ರಿಕೋಣಂ ಚ ವರ್ತುಲಂ ಚಾರ್ಧಚಂದ್ರಕಂ ।
ಕರ್ತವ್ಯಮಾನು ಪೂರ್ವ್ಯೇಣ ಬ್ರಾಹ್ಮಣಾದಿಷು ಮಂಡಲಂ ॥ ೫ ॥

ಬ್ರಾಹ್ಮಣನು ನಾಲ್ಕು ಮೂಲೆಯದೂ, ಕ್ಷತ್ರಿಯನು ಮೂರು ಮೂಲೆಯದೂ, ವೈಶ್ಯನು ವರ್ತುಲಾಕಾರವಾದದ್ದೂ, ಶೂದ್ರನು ಅರ್ಧ ಚಂದ್ರಾಕೃತಿಯದೂ ಮಂಡಲ ಮಾಡಿಕೊಂಡು ಊಟಮಾಡುವದು.

ಸಾಯಂ ಪ್ರಾತರ್ದ್ವಿಜಾತೀನಾಮಶನಂ ಶ್ರುತಿಚೋದಿತಂ ।
ನಾಂತರಾಭೋಜನಂ ಕುರ್ಯಾದಗ್ನಿಹೋತ್ರಸಮೋ ವಿಧಿಃ ॥ ೬ ॥

ಮಧ್ಯಾಹ್ನ ಸಾಯಂಕಾಲ ಹೀಗೆ ಎರಡು ಭೋಜನಗಳನ್ನು ವೇದವು ವಿಧಿಸುತ್ತದೆ. ಮಧ್ಯದಲ್ಲಿ ಭೋಜನಮಾಡಬಾರದು. ಇದು ಅಗ್ನಿಹೋತ್ರಕ್ಕೆ ಸಮಾನವಾದ ವ್ರತವು.

ಅದತ್ತಮಗ್ನಿಹೀನಸ್ಯ ನಾನ್ನಮದ್ಯಾದನಾಪದಿ ।
ಕದರ್ಯಬದ್ಧಚೌರಾಣಾಂ ಕ್ಲೀಬರಂ ಗಾವತಾರಿಣಾಂ ।
ವೈಣಾಭಿಶಸ್ತವಾರ್ಧುಷ್ಯ ಗಣಿಕಾಗಣದೀಕ್ಷಿಣಾಂ । ೭ ॥

ಬೇರೆಯವರಿಂದ ಕೊಡಲ್ಪಡದೇ ಇರುತ್ತಿರುವ ಮತ್ತು ಶೂದ್ರನ, ಕೃಪಣನ, ಚೋರರ, ನಪುಂಸಕನ, ಚಿತ್ರಕಾರರ, ಗಾಯಕರ, ಪತಿತರ, ಬಡ್ಡಿಯಿಂದ ಜೀವಿಸುವವರ, ವೇಶ್ಯಾಜನರ, ಶೂದ್ರಯಾಜಕರ ಅನ್ನವನ್ನು ಉಣ್ಣಬಾರದು. (ಆಪತ್ತಿನಲ್ಲಿ ಊಟಮಾಡಬಹುದು.)

ಘೃತಂ ತೈಲಂ ಪಯಃ ಕ್ಷೀರಂ ತಥೈವೇಕ್ಷುರಸೋಗುಡಃ ।
ಶೂದ್ರಭಾಂಡಸ್ಥಿತಂ ತಕ್ರಂ ತಥಾಮಧು ನ ದುಷ್ಯತಿ ॥ ೮ ॥

ತುಪ್ಪ, ತೈಲ, ಹಾಲು, ಜಲ, ಕಬ್ಬಿನಹಾಲು, ಮಜ್ಜಿಗೆ, ಜೇನುತುಪ್ಪ ಇವು ಶೂದ್ರ ಪಾತ್ರದಲ್ಲಿರುವವಾದರೂ ದೂಷಿಸಲ್ಪಡುವದಿಲ್ಲ.

ಅಪೂಪಾಶ್ಚ ಕರಂಭಶ್ಚ ಧಾನಾವಟಕಸಕ್ತವಃ ।
ಶಾಕಂ ಮಾಂಸಮಪೂಪಂ ಚ ಸೂಪಂ ಕೃಸರಮೇವ ಚ ॥ ೯ ॥
ಯವಾಗೂಂ ಪಾಯಸಂ ಚೈವ ಯಚ್ಚಾನ್ಯತ್ಸ್ನೇಹಸಂಯುತಂ ।
ಸರ್ವಂ ಪರ್ಯುಷಿತಂ ಭೋಜ್ಯಂ ಶುಷ್ಕಂ ಚೇತ್ಪರಿವರ್ಜಯೇತ್ ॥ ೧೦ ॥

ಮೋದಕ, ಮುಳಕ, ದೋಸೆ ಮೊದಲಾದವುಗಳು ಹಿಟ್ಟಿನಿಂದ ಮಾಡಿದ್ದು ಶಾಕಾಹಾರ ಸಾಮುಗ್ರಿ, ಮಾಂಸ, ತೊವ್ವೆ ಮೊದಲಾದವುಗಳೂ ಗಂಜಿ, ಪಾಯಸ, ತೈಲ ಪಕ್ವ ಇವೆಲ್ಲ ಪರ್ಯುಷಿತ (ಒಂದು ದಿನ ಕಳೆದರೂ) ವಾದರೂ ತಿನ್ನಬಹುದು. ಒಣಗಿದರೆ ಮಾತ್ರ ಬಿಡತಕ್ಕದ್ದು.

ಅಮೇಧ್ಯೇಷು ಚ ಯೇ ವೃಕ್ಷಾ ಉಪ್ತಾಃ ಪುಷ್ಪಫಲೋಪಗಾಃ ।
ತೇಷಾಮಪಿ ನ ದುಷ್ಯಂತಿ, ಪುಷ್ಪಾಣಿ ಚ ಫಲಾನಿ ಚ ॥ ೧೧ ॥

ಕೇವಲ ಅಶುಚಿ ಸ್ಥಾನದಲ್ಲಾದರೂ ಬೆಳಿಸಲ್ಪಟ್ಟ ವೃಕ್ಷಗಳ ಪುಷ್ಪಫಲಗಳು ಅಗ್ರಾಹ್ಯವಲ್ಲ. ಸ್ವೀಕರಿಸಬಹುದೆಂದಭಿಪ್ರಾಯ.

ಆಜ್ಯಪಾತ್ರೇ ಸ್ಥಿತಂ ತಕ್ರಂ ಮಧುಮಿಶ್ರಂ ತು ಯದ್ಘೃತಂ ।
ತಾಮ್ರಪಾತ್ರಸ್ಥಿತಂ ಕ್ಷೀರಂ ತ್ರಪುಸರ್ಪಿಃ ಸುರಾಸಮಂ ॥ ೧೨ ॥

ತುಪ್ಪದ ಪಾತ್ರದಲ್ಲಿರುವ ಮಜ್ಜಿಗೆಯೂ, ಜೇನುತುಪ್ಪದಿಂದ ಸಹಿತವಾದ ತುಪ್ಪವೂ, ತಾಮ್ರಪಾತ್ರದಲ್ಲಿರುತ್ತಿರುವ ಹಾಲೂ, ಸೀಸದ ಪಾತ್ರೆಯಲ್ಲಿರುವ ತುಪ್ಪವೂ ಮದ್ಯಕ್ಕೆ ಸಮಾನವು. ತ್ಯಾಜ್ಯವೆಂದರ್ಥ.

ವೃದ್ಧಾರ್ಕೋ ಹೋಮಧೂಮಶ್ಚ ಬಾಲಾಸ್ತ್ರೀ ನಿರ್ಮಲೋದಕಂ ।
ರಾತ್ರೌ ಕ್ಷೀರಾನ್ನ ಭುಕ್ತಿಶ್ಚ ಆಯುರ್ವೃದ್ಧಿರ್ದಿನೇ ದಿನೇ ॥ ೧೩ ॥

ಸಾಯಂಕಾಲದ ಹೊಳಬಿಸಿಲೂ, ಹೋಮದ ಹೊಗೆಯೂ, ಬಾಲಸ್ತ್ರೀಯೂ, ನಿರ್ಮಲವಾದ ಜಲವೂ, ರಾತ್ರಿಯಲ್ಲಿ ಹಾಲನ್ನ ಊಟಮಾಡುವದೂ ಪ್ರತಿನಿತ್ಯ ಆಯುರ್ವೃದ್ಧಿಗೆ ಕಾರಣವು.

ಬಾಲಾರ್ಕೋ ಪ್ರೇತಧೂಮಶ್ಚ ವೃದ್ಧಾಸ್ತ್ರೀ ಪಲ್ವಲೋದಕಂ ।
ರಾತ್ರೌ ದಧ್ಯನ್ನ ಭುಕ್ತಿಶ್ಚ ಆಯುಃಕ್ಷೈಣ್ಯಂ ದಿನೇ ದಿನೇ ॥ ೧೪ ॥

ಎಳೇ ಸೂರ್ಯನ ಬಿಸಿಲೂ, ಶವದ ಹೊಗೆಯೂ, ವೃದ್ಧಸ್ತ್ರೀಸೇವನೆಯೂ, ಕೊಳಚಿಯ ನೀರೂ, ರಾತ್ರಿಯಲ್ಲಿ ಮೊಸರನ್ನ ಉಣ್ಣುವದೂ ಆಯುಃಕ್ಷೀಣತೆಗೆ ಕಾರಣವಾಗುವದು.

ಲವಣಂ ವ್ಯಂಜನಂ ಚೈವ ಘೃತಂ ತೈಲಂ ತಥೈವ ಚ ।
ಲೇಹ್ಯಂ ಪೇಯಂ ಚ ವಿವಿಧಂ ಹಸ್ತದತ್ತಂ ನ ಭಕ್ಷಯೇತ್ ॥ ೧೫ ॥

ಉಪ್ಪು, ಮೇಲೋಗರ, ತುಪ್ಪ, ಎಣ್ಣೆ, ನೆಕ್ಕಿ ತಿನ್ನುವ ಭಕ್ಷ್ಯ, ಕುಡಿಯುವ ವಸ್ತು ಇವುಗಳನ್ನು ಕೈಯಿಂದ ಬಡಿಸಬಾರದು.

ಅಪಕ್ವಂ ಸ್ನೇಹಪಕ್ವಂ ಚ ಹಸ್ತೇ ನೈವ ಪ್ರದಾಪಯೇತ್ ।
ಯತ್ಕಿಂಚಿದಿತರಂ ಭಕ್ಷ್ಯಂ ದರ್ವ್ಯಾದೇಯಂ ತು ಯತ್ನತಃ ॥ ೧೬ ॥

ಬೇಯಿಸದೆ ಇರುತ್ತಿರುವ, ತೈಲದಲ್ಲಿ ಕರಿದಿರುವ ಪದಾರ್ಥಗಳನ್ನು ಕೈಯಿಂದ ಬಡಿಸಬಹುದು. ಬೇರೆ ಯಾವ ವಸ್ತುವನ್ನಾದರೂ ಸವಟನಿಂದಲೇ ಬಡಿಸಬೇಕು.

ದತ್ವಾನ್ನಂ ಚಿತ್ರಗುಪ್ತಾಯ ಹಸ್ತಂ ಪ್ರಕ್ಷಾಳಯೇತ್ತತಃ ।
ಅಕ್ಷಾಳಿತ ಕರೋ ಭುಂಕ್ತೇ ರೌರವಂ ನರಕಂ ವ್ರಜೇತ್ ॥ ೧೭ ॥

ಚಿತ್ರಗುಪ್ತಾದಿಗಳಿಗೆ ಬಲಿಯನ್ನು ಕೊಟ್ಟು ಕೈಯನ್ನು ತೊಳೆದುಕೊಳ್ಳಬೇಕು. ಕೈ ತೊಳಕೊಳ್ಳದೆ ಊಟಮಾಡಿದರೆ ರೌರವನರಕವನ್ನು ಹೊಂದುವನು.

ಆಪೋಶನಂ ಕರೇ ಧೃತ್ವಾ ಯಃ ಪುನಃ ಪೂರಯೇದ್ಯದಿ ।
ಶ್ವಾನಮೂತ್ರ ಸಮಂ ತೋಯಂ ಅನ್ನಂ ಗೋಮಾಂಸಸಂಭವಂ ॥ ೧೮ ॥

ಯಾವಾತನು ಹಸ್ತದಲ್ಲಿ ಆಪೋಶನವನ್ನಿಟ್ಟು ಪುನಃ ಜಲವನ್ನು ತುಂಬುತ್ತಾನೋ ಆತನ ಆ ಜಲವು ನಾಯಿ ಮೂತ್ರದಂತಾಗುವದಲ್ಲದೆ ಅನ್ನವು ಗೋಮಾಂಸಕ್ಕೆ ಸದೃಶವಾಗುತ್ತದೆ.

ಸಮುತ್ಥಿತಸ್ತು ಯೋ ಭುಂಕ್ತೇ ಯೋ ಭುಂಕ್ತೇ ಮುಕ್ತಭಾಜನೇ ।
ಏವಂ ವೈವಸ್ವತಃ ಪ್ರಾಹ ಭುಕ್ತ್ವಾ ಸಾಂತಪನಂ ಚರೇತ್ ॥ ೧೯ ॥

ಯಾವಾತನು ನಿಂತು ಭೋಜನಮಾಡುತ್ತಾನೋ, ಒಂದಾವರ್ತಿ ಬಿಟ್ಟ ಪಾತ್ರದಲ್ಲಿ ಪುನಃ ಅದೇ ಉಚ್ಛಿಷ್ಟವನ್ನು ತಿನ್ನುತ್ತಾನೋ ಆತನು ಸಾಂತಪನ ಎಂಬ ಪ್ರಾಯಶ್ಚಿತ್ತಕ್ಕೆ ಅರ್ಹನಾಗುತ್ತಾನೆ. ಹೀಗೆ ವೈವಸ್ವತನು ಹೇಳಿರುವನು.

ಅಶ್ನೀಯಾತ್ತನ್ಮನಾ ಭೂತ್ವಾ ಪೂರ್ವಂ ತು ಮಧುರಂ ರಸಂ ।
ಲವಣಾಮ್ಲೌ ತಥಾ ಮಧ್ಯೇ ಕಟುತಿಕ್ತಾದಿಕಂ ತತಃ ॥ ೨೦ ॥

ಪ್ರಾಕ್ ದ್ರವಂ ಪುರುಷೋಶ್ನೀಯಾನ್ಮಧ್ಯೇ ತು ಕಠಿಣಂ ಪುನಃ ।
ಅಂತೇ ಪುನರ್ದ್ರವಾಶೀತು ಬಲಾರೋಗ್ಯೇ ನ ಮುಂಚತಿ ॥ ೨೧ ॥

ಅನ್ನದಲ್ಲೇ ಮನಸ್ಸನ್ನಿಟ್ಟು ಮೊದಲು ಮಧುರಪದಾರ್ಥವನ್ನೂ ಆಮೇಲೆ ಉಪ್ಪು, ಹುಳಿ, ಮೆಣಸು ಮೊದಲಾದವುಗಳನ್ನೂ ಊಟಮಾಡುವದು. ಮೊದಲು ರಸಪದಾರ್ಥವನ್ನೂ ಅಂತ್ಯದಲ್ಲಿ ಪುನಃ ರಸವಸ್ತುವನ್ನೂ ಸ್ವೀಕರಿಸತಕ್ಕದ್ದು, ಹಾಗೆ ಮಾಡಿದರೆ ಆತನನ್ನು ಬಲಾರೋಗ್ಯಗಳು ಬಿಡುವದಿಲ್ಲ.

ಆತ್ಮಾರ್ಥಂ ಭೋಜನಂ ಯಸ್ಯ ರತ್ಯರ್ಥಂ ಯಸ್ಯ ಮೈಥುನಂ ।
ವೃತ್ತ್ಯರ್ಥಂ ಯಸ್ಯ ಚಾಧೀತಂ ನಿಷ್ಫಲಂ ತಸ್ಯ ಜೀವಿತಂ ॥ ೨೨ ॥

ಯಾವವನ ಊಟವು ತನ್ನ ಸಲುವಾಗಿಯೇ ಇರುವದೋ, ಯಾವವನ ಮೈಥುನವು ರತಿಕ್ರೀಡೆಗಾಗಿರುತ್ತದೋ, ಕೇವಲ ಧನಸಂಪಾದನೆಗಾಗಿ ಯಾವವನ ವಿದ್ಯೆಯಿರುತ್ತದೋ ಆತನ ಜೀವನವು ವ್ಯರ್ಥವು.

ನೈಕವಸ್ತ್ರಸ್ತು ಭುಂಜೀತ ನ ವಾಪಿ ಶಯನಸ್ಥಿತಃ ।
ನ ಪಾದುಕಾಧಿಷ್ಠಿತೋ ವಾ ನ ಹಸನ್ ವಿಲಪನ್ನಪಿ ॥ ೨೩ ॥

ಒಂಟು ವಸ್ತ್ರದಿಂದಲೂ ಹಾಸಿಗೆ ಮೊದಲಾದವುಗಳಲ್ಲಿ ಕುಳಿತವನಾಗಿಯೂ, ಪಾದುಕಾದಿಗಳನ್ನು ಧರಿಸಿಯೂ, ಬಹು ನಗೆಯಾಡುತ್ತಿರುವವನಾಗಿಯೂ, ಹೆಚ್ಚು ಮಾತುಗಳನ್ನಾಡುತ್ತಿರುವವನಾಗಿಯೂ ಊಟಮಾಡಬಾರದು.

ನ ಭುಂಜೀತಾಘೃತಂ ನಿತ್ಯಂ ಗೃಹಸ್ಥೋ ಭೋಜನಂ ಸ್ವಯಂ ।
ಪವಿತ್ರಮಥ ಹೃದ್ಯಂಚ ಸರ್ಪಿರಾಹುರಘಾಪಹಂ ॥ ೨೪ ॥

ಪ್ರತಿನಿತ್ಯದಲ್ಲೂ ತುಪ್ಪದ ಹೊರತು ಊಟಮಾಡಬಾರದು. ಯಾಕಂದರೆ ಅದು ಹಿತಕರವಾಗಿಯೂ ಪವಿತ್ರವಾಗಿಯೂ ಪಾಪನಾಶಕರವಾಗಿಯೂ ಇರುತ್ತದೆ.

ಶಿರೋವೇಷ್ಟ್ಯ ತು ಯೋ ಭುಂಕ್ತೇ ಯೋ ಭುಂಕ್ತೇ ದಕ್ಷಿಣಾಮುಖಃ ।
ವಾಮಪಾದೇ ಕರಂ ನ್ಯಸ್ಯ ತದ್ವೈರಕ್ಷಾಂಸಿ ಗಚ್ಛತಿ ॥ ೨೫ ॥

ಯಾವಾತನು ತಲೆಗೆ ವಸ್ತ್ರಾದಿಗಳನ್ನು ಕಟ್ಟಿಕೊಂಡು ದಕ್ಷಿಣ ದಿಕ್ಕಿಗೆ ಮೋರೆಮಾಡಿಕೊಂಡು ಎಡಪಾದದಲ್ಲಿ ಕೈಯ್ಯನ್ನಿಟ್ಟು ಉಣ್ಣುವನೋ ಆತನ ಆ ಊಟವು ಆಸುರವಾಗಿ ರಾಕ್ಷಸರ ಪಾಲಾಗುವದು. (ಆತನಿಗೆ ಅದು ಪೋಷಕವಾಗದೆಂದರಿಯುವದು.)

ನ ಪಿಬೇನ್ನ ಚ ಭುಂಜೀತ ದ್ವಿಜಃ ಸವ್ಯೇನ ಪಾಣಿನಾ ।
ನೈಕಹಸ್ತೇನ ಚ ಜಲಂ ಶೂದ್ರೇಣಾವರ್ಜಿತಂ ಪಿಬೇತ್ ॥ ೨೬ ॥

ಬ್ರಾಹ್ಮಣನು ಎಡಗೈಯಿಂದ ಉಣ್ಣಲೂ ಬಾರದು. ಮತ್ತು ಕುಡಿಯಲೂ ಬಾರದು. ಒಂದು ಕೈಯಿಂದ ಜಲಪಾನವನ್ನು ಮಾಡಬಾರದು ಮತ್ತು ಶೂದ್ರಸಂಸ್ಪರ್ಶ ಜಲಾದಿಗಳನ್ನು ಸ್ವೀಕರಿಸಬಾರದು.

ಅಷ್ಟೌ ಗ್ರಾಸಾಮುನೇರ್ಭೈಕ್ಷಂ ಷೋಡಶಾರಣ್ಯವಾಸಿನಃ ।
ದ್ವಾತ್ರಿಂಶತಂ ಗೃಹಸ್ಥಸ್ಯ ಅಮಿತಂ ಬ್ರಹ್ಮಚಾರಿಣಃ ॥ ೨೭ ॥

ಯೋಗಿಯು ಎಂಟು ತುತ್ತುಗಳನ್ನೂ ವಾನಪ್ರಸ್ಥಾಶ್ರಮಿಗಳು ಹದಿನಾರು ತುತ್ತುಗಳನ್ನೂ ಗೃಹಸ್ಥನು ಮೂವತ್ತೆರಡು ಗ್ರಾಸಗಳನ್ನೂ ಬ್ರಹ್ಮಚಾರಿಯು ಯಥೇಷ್ಟ ಗ್ರಾಸಗಳನ್ನೂ ಉಣ್ಣುವದು.

ಏಕಪಂಕ್ತ್ಯುಪವಿಷ್ಟಾನಾಂ ವಿಪ್ರಾಣಾಂ ಸಹಭೋಜನೇ ।
ಯದ್ಯೇಕೋಽಪಿ ತ್ಯಜೇತ್ಪಾತ್ರಂ ನಾಶ್ನೀಯುರಪರೇಽಪ್ಯನು ॥ ೨೮ ॥

ಬ್ರಾಹ್ಮಣರೆಲ್ಲ ಕೂಡಿ ಒಂದೇ ಪಂಕ್ತಿಯಲ್ಲಿ ಭೋಜನಮಾಡುತ್ತಿರುವಾಗ ಯಾವನಾದರೊಬ್ಬನು ಎಡೆಯನ್ನು ಬಿಟ್ಟುಹೋದರೆ ಉಳಿದವರು ಊಟ ಮಾಡಬಾರದು. (ಅದು ಉಚ್ಛಿಷ್ಟವಾಗುವದು.)

ಅಗ್ನಿನಾ ಭಸ್ಮನಾ ಚೈವ ಸ್ತಂಭೇನ ಸಲಿಲೇನ ವಾ ।
ದ್ವಾರೇಣ ಚೈವ ಮಾರ್ಗೇಣ ಪಂಕ್ತಿಭೇದೋ ಬುಧೈಃ ಸ್ಮೃತಃ ॥ ೨೯ ॥

ಮಧ್ಯದಲ್ಲಿರುವ ಅಗ್ನಿಯಿಂದಲೂ, ಭಸ್ಮದಿಂದಲೂ, ಕಂಭದಿಂದಲೂ, ಜಲದಿಂದಲೂ, ಬಾಗಿಲಿನಿಂದಲೂ, ದಾರಿಯಿಂದಲೂ ಪಂಕ್ತಿಭೇದ(ಬೇರೆ ಪಂಕ್ತಿ)ವು ಆಗುವದು.

ನೃಣಾಂ ಭೋಜನಕಾಲೇ ತು ಯದಿ ದೀಪೋ ವಿನಶ್ಯತಿ ।
ಪಾಣಿಭ್ಯಾಂ ಪಾತ್ರಮಾಲಭ್ಯ ಭಾಸ್ಕರಂ ಮನಸಾ ಸ್ಮರೇತ್ ॥ ೩೦ ॥

ಪುನಶ್ಚ ದೀಪಿಕಾಂ ಕೃತ್ವಾ ತಚ್ಛೇಷಂ ಭೋಜಯೇನ್ನರಃ ।
ಪುನರನ್ನಂ ನ ಭೋಕ್ತವ್ಯಂ ಭುಕ್ತ್ವಾ ಪಾಪೈರ್ವಿಲಿಪ್ಯತೇ ॥ ೩೧ ॥

ಊಟಮಾಡುವ ವೇಳೆಯಲ್ಲಿ ದೀಪವು ನಂದಿದರೆ ಎರಡೂ ಕೈಗಳಿಂದ ಪಾತ್ರವನ್ನು ಹಿಡಕೊಂಡು ಸೂರ್ಯನನ್ನು ಸ್ಮರಿಸಿ, ಪುನಶ್ಚ ದೀಪವನ್ನು ಹಚ್ಚಿ ಶೇಷವನ್ನುಣ್ಣಬೇಕು. ಪುನಃ ಬಡಿಸಿಕೊಂಡು ಊಟಮಾಡಿದರೆ ಪಾಪವು ಬರುವದು.

ಜಠರಂ ಪೂರಯೇದರ್ಧಮನ್ನೈರರ್ಧಂ ಜಲೇನ ಚ ।
ವಾಯೋಃ ಸಂಚರಣಾರ್ಥಾಯ ಚತುರ್ಥಮವಶೇಷಯೇತ್ ॥ ೩೨ ॥

ಅನ್ನವನ್ನು ಅರ್ಧಹೊಟ್ಟೆ ಉಣ್ಣುವದು ಒಂದು ಪಾಲನ್ನು ನೀರಿನಿಂದ ತುಂಬಬೇಕು. ಪುನಃ ಒಂದು ಭಾಗದ ಹೊಟ್ಟೆಯನ್ನು ಖಾಲಿ ಇಡಬೇಕು. ಅಂದರೆ ವಾಯುವು ಸುಖದಿಂದ ಸಂಚರಿಸಿ ಪರಿಣಾಮವನ್ನುಂಟುಮಾಡುವದು.

ಆಯುಃಸತ್ವಬಲಾರೋಗ್ಯ ಸುಖಪ್ರೀತಿವಿವರ್ಧನಾಃ ।
ರಸ್ಯಾಃಸ್ನಿಗ್ಧಾಸ್ಥಿರಾಹೃದ್ಯಾ ಆಹಾರಾಃ ಸಾತ್ವಿಕ ಪ್ರಿಯಾಃ ॥ ೩೩ ॥

ಯಾವ ಆಹಾರವು ಆಯುಸ್ಸನ್ನೂ ಬಲವನ್ನೂ ಆರೋಗ್ಯ, ಸುಖ, ಪ್ರೀತಿ ಇವುಗಳನ್ನೂ ಹೆಚ್ಚಿಸತಕ್ಕವುಗಳಾಗಿ ರಸವಿಶಿಷ್ಟವಾಗಿಯೂ ಮೆತ್ತಗಾಗಿಯೂ ರುಚಿಕರವಾಗಿಯೂ ಇರುತ್ತದೋ ಆ ಆಹಾರವು ಸಾತ್ವಿಕಾಹಾರವೆನ್ನಲ್ಪಡುವುದು.

ಕಟ್ವಮ್ಲ ಲವಣಾತ್ಯುಷ್ಣ ತೀಕ್ಷ್ಣರೂಕ್ಷವಿದಾಹಿನಃ ।
ಆಹಾರಾ ರಾಜಸಸ್ಯೇಷ್ಟಾದುಃಖಶೋಕಾಮಯಪ್ರದಾಃ ॥ ೩೪ ॥

ಯಾವ ಆಹಾರವು ಮೆಣಸು, ಹುಳಿ, ಉಪ್ಪು, ಅತಿ ಬಿಸಿ, ತೀಕ್ಷ್ಣಕ್ಷಾರ, ದಾಹಕಗಳಾಗಿರುವವೋ ಆ ಆಹಾರಗಳು ರಾಜಸಾಹಾರಗಳು. ದುಃಖ, ಶೋಕ, ವ್ಯಾಧಿಗಳನ್ನುಂಟುಮಾಡುವವು.

ಯಾತಯಾಮಂ ಗತರಸಂ ಪೂತಿ ಪರ್ಯುಷಿತಂ ಚ ಯತ್ ।
ಉಚ್ಛಿಷ್ಟಮಪಿ ಚಾ ಮೇಧ್ಯಂ ಚಾಹಾರಂ ತಾಮಸಪ್ರಿಯಂ ॥ ೩೫ ॥

ಯಾವ ಆಹಾರವು ಹುಳಿಸಿಯೂ, ನೀರಸವಾಗಿಯೂ, ದುರ್ಗಂಧವಾಗಿಯೂ, ತಣ್ಣಗಾಗಿಯೂ, ಉಚ್ಛಿಷ್ಟವಾಗಿಯೂ, ಅಪವಿತ್ರವಾಗಿಯೂ ಇರುವದೋ ಅದು ತಾಮಸಾಹಾರವು.

ಅಗಸ್ತಿಂ ಕುಂಭಕರ್ಣಂ ಚ ಶನಿಂ ಚ ವಡವಾನಲಂ ।
ಆಹಾರಪರಿಣಾಮಾರ್ಥಂ ಸಂಸ್ಮರಾಮಿ ವೃಕೋದರಂ ॥ ೩೬ ॥

ಅಗಸ್ತಿ, ಕುಂಭಕರ್ಣ, ಶನಿ,ವಡವಾಗ್ನಿ,ಭೀಮ ಇವರನ್ನು ಆಹಾರ ಜೀರ್ಣಪಡಿಸುವದಕ್ಕಾಗಿ ಸ್ಮರಿಸುತ್ತೇನೆ. ಹೀಗೆ ಊಟವಾದ ಮೇಲೆ ಹೇಳಬೇಕು.

ಸುಪೂಗಂ ಚ ಸುಪತ್ರಂ ಚ ಸುಚೂರ್ಣೇನ ಸಮನ್ವಿತಂ ।
ಅದತ್ವಾ ದ್ವಿಜದೇವೇಭ್ಯಸ್ತಾಂಬೂಲಂ ವರ್ಜಯೇದ್ದ್ವಿಜಃ ॥ ೩೭ ॥

ಒಳ್ಳೇ ವೀಳ್ಯದೆಲೆ, ಒಳ್ಳೇ ಅಡಿಕೆ, ಒಳ್ಳೇ ಕಟುಚೂರ್ಣ ಇವುಗಳನ್ನು ದೇವ ಬ್ರಾಹ್ಮಣರಿಗೆ ಅರ್ಪಿಸಿ ತಾನು ತಾಂಬೂಲ ಚರ್ವಣ ಮಾಡತಕ್ಕದ್ದು.

ಯತೇಶ್ಚ ವಿಧವಾಯಾಶ್ಚ ದೀಕ್ಷಿತಸ್ಯ ಬಟೋರಪಿ ।
ತಾಂಬೂಲಭಕ್ಷಣಂ ವರ್ಜ್ಯಂ ಮೈಥುನಂ ಚ ವಿಶೇಷತಃ ॥ ೩೮ ॥

ಸನ್ಯಾಸಿಯೂ, ವಿಧವೆಯೂ, ವ್ರತಸ್ಥನೂ, ಬ್ರಹ್ಮಚಾರಿಯೂ ತಾಂಬೂಲವನ್ನು–ವಿಶೇಷವಾಗಿ ಮೈಥುನವನ್ನು ತ್ಯಾಜ್ಯಮಾಡಬೇಕು.

ದಂತಧಾವನತಾಂಬೂಲಂ ತೈಲಾಭ್ಯಂಗಮಭೋಜನಂ ।
ರತ್ಯೌಷಧಪರಾನ್ನಂ ಚ ಶ್ರಾದ್ಧಕೃತ್ಸಪ್ತ ವರ್ಜಯೇತ್ ॥ ೩೯ ॥

ಶ್ರಾದ್ಧಮಾಡುವವನು ದಂತಧಾವನೆಯನ್ನೂ ತಾಂಬೂಲವನ್ನೂ ತೈಲಾಭ್ಯಂಗವನ್ನೂ ಉಪವಾಸವನ್ನೂ ಮೈಥುನವನ್ನೂ ಔಷಧ ಸೇವನೆಯನ್ನೂ ಪರಾನ್ನವನ್ನೂ ಬಿಡತಕ್ಕದ್ದು.

ಭುಕ್ತ್ವಾ ತು ಸುಖಮಾಸ್ಥಾಯ ತದತ್ರ ಪರಿಣಾಮಯೇತ್ ।
ಇತಿಹಾಸ ಪುರಾಣಾದ್ಯೈಃ ಷಷ್ಠ ಸಪ್ತಮ ಕೌನಯೇತ್ ॥ ೪೦ ॥

ಊಟಮಾಡಿ ಸುಖವಾಗಿ ಕುಳಿತು ಆಹಾರವನ್ನು ಪರಿಣಮಿಸತಕ್ಕದ್ದು. ದಿನದ ೬-೭ ನೇ ಭಾಗವನ್ನು ಇತಿಹಾಸ ಪುರಾಣಾದಿಗಳಿಂದ ಕಳಿಯತಕ್ಕದ್ದು.

ಭುಕ್ತ್ವೋಪವಿಶತಸ್ತುಂದಂ ಬಲಮುತ್ತಾನಶಾಯಿನಃ ।
ಆರೋಗ್ಯಂ ವಾಮಕುಕ್ಷೌ ತು ಮೃತ್ಯುರ್ಧಾವತಿ ಧಾವತಃ ॥ ೪೧ ॥

ಊಟಮಾಡಿ ಕುಳಿತುಕೊಂಡರೆ ಹೊಟ್ಟೆಯು ಬರುವದು. ಅಂಗಾತ ಮಲಗಿದರೆ ಬಲವು ಪ್ರಾಪ್ತವಾಗುತ್ತದೆ. ಎಡಮಗ್ಗಲಲ್ಲಿ ಮಲಗಿದರೆ ಆರೋಗ್ಯ ಪ್ರಾಪ್ತವಾಗುತ್ತದೆ. ಊಟಮಾಡಿದ ಕೂಡಲೇ ಓಡಿದರೆ ಆತನನ್ನು ಮೃತ್ಯುವು ಬೆನ್ನು ಹಿಡಿಯುವದು. (ಸ್ವಲ್ಪ ಮಲಗಿಕೊಳ್ಳಬೇಕೆಂದರ್ಥವು.)

॥ ಇತ್ಯಾಚಾರವಿಧೌ ಪಂಚಮೋಽಧ್ಯಾಯಃ ॥

ಐದನೇ ಅಧ್ಯಾಯವು ಮುಗಿದುದು.

॥ ಅಥ ಷಷ್ಠೋಽಧ್ಯಾಯಃ ॥

ಆರನೇ ಅಧ್ಯಾಯ ಪ್ರಾರಂಭವು.

ಚತ್ವಾರಿ ಖಲು ಕರ್ಮಾಣಿ ಸಂಧ್ಯಾಕಾಲೇಷು ವರ್ಜಯೇತ್ ।
ಆಹಾರಂ ಮೈಥುನಂ ನಿದ್ರಾಂ ಸ್ವಾಧ್ಯಾಯಂ ಚ ಚತುರ್ಥಕಂ ॥ ೧ ॥

ಸಾಯಂಸಂಧ್ಯಾವೇಳೆಯಲ್ಲಿ ಆಹಾರ, ಮೈಥುನ, ನಿದ್ರಾ, ವೇದಪಾರಾಯಣ ಈ ನಾಲ್ಕು ಕಾರ್ಯಗಳನ್ನು ಮಾಡಬಾರದು.

ದ್ಯೂತಂ ಚ ಕಲಹಂ ಚೈವ ಸಾಯಂ ಸಂಧ್ಯಾಂ ದಿವಾಶಯಂ ।
ಶ್ರಾದ್ಧಕರ್ತಾ ಚ ಭೋಕ್ತಾ ಚ ಪುನರ್ಭುಕ್ತಿಂ ಚ ವರ್ಜಯೇತ್ ॥ ೨ ॥

ಪಗಡೆ ಮೊದಲಾದ ಜೂಜಿನ ಆಟವನ್ನೂ ಜಗಳವನ್ನೂ ಸಾಯಂಕಾಲದ ಸಂಧ್ಯಾವಂದನೆಯನ್ನೂ ಹಗಲು ನಿದ್ದೆಯನ್ನೂ ಶ್ರಾದ್ಧ ಊಟಮಾಡಿದವನೂ ಶ್ರಾದ್ಧಕರ್ತನೂ ಸಹ ಅಷ್ಟು ಕಾರ್ಯಗಳನ್ನು ಬಿಡಬೇಕು.

ದಶಕೃತ್ವಃ ಪಿಬೇದಾಪೋ ಗಾಯತ್ರ್ಯಾ ಶ್ರಾದ್ಧಭುಗ್ದ್ವಿಜಃ ।
ತತಃ ಸಂಧ್ಯಾಮುಪಾಸೀತ ಶುದ್ಧ್ಯೇಚ್ಚ ತದನಂತರಂ ॥ ೩ ॥

ಶ್ರಾದ್ಧವನ್ನು ಊಟಮಾಡಿದವನು ಹತ್ತಾವರ್ತಿ ಗಾಯತ್ರಿಯನ್ನಭಿಮಂತ್ರಿಸಿದ ಜಲವನ್ನು ಕುಡಿದರೆ ಸಾಯಂಕಾಲ ಸಂಧ್ಯಾ ಮಾಡಲಿಕ್ಕೆ ಯೋಗ್ಯನಾಗುತ್ತಾನೆ.

ಉಪಾಸ್ಯ ಪಶ್ಚಿಮಾಂ ಸಂಧ್ಯಾಂ ಹುತ್ವಾಗ್ನೀನ್ ಸಮುಪಾಸ್ಯ ಚ ।
ಭೃತ್ಯೈಃ ಪರಿವೃತೋ ಭುಕ್ತ್ವಾ ನಾತಿತೃಪ್ತ್ಯಾಥ ಸಂವಿಶೇತ್ ॥ ೪ ॥

ಸಾಯಂಕಾಲದ ಸಂಧ್ಯಾವಂದನೆಯನ್ನು ತೀರಿಸಿ ಔಪಾಸನಾಗ್ನಿಯಲ್ಲಿ ಹೋಮಿಸಿ ಭೃತ್ಯಾದಿಗಳಿಂದ ಸಹಿತನಾಗಿ ಊಟಮಾಡಿ (ಅಲ್ಪಾಹಾರ ತುಷ್ಟನಾಗಿ) ಮಲಗಬೇಕು.

ಆಸನಂ ಶಯನಂ ಯಾನಂ ಜಾಯಾಪತ್ಯಂ ಕಮಂಡಲುಂ ।
ಶುಚೀನ್ಯಾತ್ಮನ ಏತಾನಿ ಪರೇಷಾಮಶುಚೀನಿ ತು ॥ ೫ ॥

ಆಸನವೂ, ಹಾಸಿಗೆಯೂ, ವಾಹನವೂ, ಪತ್ನಿಯೂ, ಪುತ್ರಾದಿಗಳೂ, ಕಮಂಡಲವೂ ತನ್ನವೇ ಆಗಿದ್ದರೆ ಮಾತ್ರ ಶುಚಿಯು. ಬೇರೆಯವರದಾದರೆ ಅಶುಚಿಯೆಂದು ತಿಳಿಯತಕ್ಕದ್ದು.

ಸ್ವಗೃಹೇ ಪ್ರಾಕ್‌ಶಿರಾಃ ಶೇತೇ ಶ್ವಾಶುರ್ಯೇ ದಕ್ಷಿಣಾಶಿರಾಃ ।
ಪ್ರತ್ಯಕ್‌ಶಿರಾಃ ಪ್ರವಾಸೇ ತು ನ ಕದಾಚಿದುದಕ್‌ಶಿರಾಃ ॥ ೬ ॥

ತನ್ನ ಮನೆಯಲ್ಲಿ ಪೂರ್ವಕ್ಕೆ ತಲೆಮಾಡಿಯೂ, ಮಾವನ ಮನೆಯಲ್ಲಿ ದಕ್ಷಿಣಕ್ಕೆ ತಲೆಮಾಡಿಯೂ, ಪ್ರವಾಸದಲ್ಲಿ ಪಶ್ಚಿಮ ಶಿರಸ್ಕನಾಗಿಯೂ ಮಲಗತಕ್ಕದ್ದು. ಉತ್ತರಕ್ಕೆ ತಲೆಮಾಡಿ ಯಾವಾಗಲೂ ಮಲಗಬಾರದು.

ಸರ್ಪಾಪ ಸರ್ಪಭದ್ರಂತೇ ದೂರಂ ಗಚ್ಛ ಮಹಾವಿಷ ।
ಜನಮೇಜಯಸ್ಯ ಯಜ್ಞಾಂತೇ ಆಸ್ತೀಕವಚನಂ ಸ್ಮರ ॥ ೭ ॥

ಆಸ್ತೀಕ ವಚನಂ ಶ್ರುತ್ವಾ ಯಃ ಸರ್ಪೋ ನ ನಿವರ್ತತೇ ।
ಶತಧಾ ಭಿದ್ಯತೇ ಮೂರ್ಧ್ನಿ ಶಿಂಶವೃಕ್ಷಫಲಂ ಯಥಾ ॥ ೮ ॥

ಈ ಎರಡು ಶ್ಲೋಕಗಳನ್ನು ಹೇಳಿ ಮಲಗಿಕೊಳ್ಳುವದು.

ಅಗಸ್ತಿರ್ಮಾಧವಶ್ಚೈವ ಮುಚಕುಂದೋ ಮಹಾಮುನಿಃ ।
ಕಪಿಲೋ ಮುನಿರಾಸ್ತೀಕಃ ಪಂಚೈತೇ ಸುಖಶಾಯಿನಃ ॥ ೯ ॥

ಅಗಸ್ತಿ, ಮಾಧವ, ಮುಚಕುಂದಮುನಿ, ಕಪಿಲಮುನಿ, ಆಸ್ತೀಕ ಇವರನ್ನು ಸ್ಮರಿಸಿ ಮಲಗಿದರೆ ಸುಖವಾಗುವದು.

ಚತುರ್ದಶ್ಯಷ್ಟಮೀ ಚೈವ ಅಮಾವಾಸ್ಯಾ ಚ ಪೂರ್ಣಿಮಾ ।
ಪರ್ವಾಣ್ಯೇತಾನಿ ರಾಜೇಂದ್ರ ರವಿಸಂಕ್ರಾಂತಿ ರೇವ ಚ ॥ ೧೦ ॥

ತೈಲಸ್ತ್ರೀ ಮಾಂಸ ಸಂಭೋಗೀ ಪರ್ವಸ್ವೇತೇಷು ಯಃ ಪುಮಾನ್ ।
ವಿಣ್ಮೂತ್ರ ಭೋಜನಂ ನಾಮ ನರಕಂ ಪ್ರತಿಪದ್ಯತೇ ॥ ೧೧ ॥

ಚತುರ್ದಶೀ, ಅಷ್ಟಮೀ, ಅಮಾವಾಸ್ಯಾ, ಹುಣ್ಣಿವೆ, ಸಂಕ್ರಾಂತಿ ಇವು ಗಳಿಗೆ ಪರ್ವತಿಥಿಗಳೆಂಬ ಹೆಸರು. ಈ ತಿಥಿಗಳಲ್ಲಿ ತೈಲಾಭ್ಯಂಗ, ಸ್ತ್ರೀಸಂಭೋಗಗಳನ್ನು ಯಾವಾತನು ಮಾಡುತ್ತಾನೋ ಆತನು ವಿಣ್ಮೂತ್ರಭೋಜನ (ಮಲಮೂತ್ರಗಳನ್ನುಣ್ಣಬೇಕಾದ) ವೆಂಬ ನರಕವನ್ನು ಹೊಂದುವನು.

ಷೋಡಶರ್ತುನಿಶಾಃ ಸ್ತ್ರೀಣಾಂ ತಸ್ಮಿನ್ ಯುಗ್ಮಾಸು ಸಂವಿಶೇತ್ ।
ಬ್ರಹ್ಮಚಾರ್ಯೇವ ಪರ್ವಣ್ಯಾದ್ಯಾಶ್ಚತಸ್ರಶ್ಚ ವರ್ಜಯೇತ್ ॥ ೧೨ ॥

ಸ್ತ್ರೀಯರು ಋತುಮತಿಯರಾದ್ದರಿಂದ ಮುಂದೆ ೧೬ ರಾತ್ರಿಗಳು ಋತುರಾತ್ರಿಗಳೆನ್ನಲ್ಪಟ್ಟು ಆ ಕಾಲದಲ್ಲಿ ಸಂಭೋಗಕ್ಕೆ ಅವರು ಅರ್ಹರಾಗುವರು. ಯಾವಾತನು ಪರ್ವತಿಥಿಗಳನ್ನೂ ಋತುಕಾಲದ ಮೊದಲಿನ ನಾಲ್ಕು ರಾತ್ರಿಗಳನ್ನೂ ಬಿಟ್ಟು ಸರಿ ದಿನಗಳಲ್ಲಿ ಸಂಭೋಗಿಸುವನೋ ಆತನು ಬ್ರಹ್ಮಚಾರಿಯೇ ಆಗುವನು. (ಆತನ ಬ್ರಹ್ಮಚರ್ಯಕ್ಕೆ ಭಂಗಬರುವದಿಲ್ಲ.)

ಶುಷ್ಕಮಾಂಸಾಃ ಸ್ತ್ರೀಯೋ ವೃದ್ಧಾ ಬಾಲಾರ್ಕಸ್ತರುಣಂ ದಧಿ ।
ಪ್ರಭಾತೇ ಮೈಥುನಂ ನಿದ್ರಾ ಸದ್ಯಃ ಪ್ರಾಣಹರಾಣಿ ಷಟ್ ॥ ೧೩ ॥

ಒಣಮಾಂಸವೂ, ವೃದ್ಧಸ್ತ್ರೀ, ಎಳೇ ಸೂರ್ಯ, ಹೊಸ ಮೊಸರು, ಪ್ರಾತಃಕಾಲದ ಮೈಥುನ ಹಾಗೂ ನಿದ್ರಾ ಈ ಆರು ಕೃತ್ಯಗಳು ಸದ್ಯದಲ್ಲೇ ಪ್ರಾಣನಾಶಕಗಳು.

ಸಾ ಭಾರ್ಯಾ ಯಾ ಗೃಹೇ ದಕ್ಷಾ ಸಾ ಭಾರ್ಯಾ ಯಾ ಪ್ರಿಯಂವದಾ ।
ಸಾ ಭಾರ್ಯಾ ಯಾ ಪ್ರಿಯಪ್ರಾಣಾ ಸಾ ಭಾರ್ಯಾ ಯಾ ಪತಿವ್ರತಾ॥೧೪॥

ಯಾವಳು ಗೃಹಕೃತ್ಯದಲ್ಲಿ ದಕ್ಷಳಾಗಿಯೂ, ಪ್ರಿಯವಾಗಿ ನುಡಿಯುವವಳಾಗಿಯೂ, ಪತಿಪ್ರೀತಿಗೆ ಕಾರಣಳಾಗಿಯೂ, ಪತಿವ್ರತೆಯಾಗಿಯೂ ಇರುವಳೋ ಅವಳೇ ನಿಜವಾದ ಪತ್ನಿಯು. ಅಂಥ ಹೆಂಡತಿಯಿಂದ ಪುರುಷನು ಧನ್ಯನಾಗುವನು.

ಯಾವನ್ನಿದ್ರಾಗಮಸ್ತಾವತ್ಪತಿಸೇವಾವಿಧೀಯತೇ ॥
ಸ್ವಯಂ ನಿದ್ರಾಂ ತತಃ ಕೃತ್ವಾ ತಸ್ಮಾತ್ಪೂರ್ವಮಥೋತ್ಥಿತಾ ॥ ೧೫ ॥

ಪತಿಗೆ ನಿದ್ದೆಹತ್ತುವ ವರೆಗೆ ಪತಿಸೇವೆಯನ್ನು ಮಾಡಿ ನಂತರ ತಾನು ಮಲಗಿ ಪತಿ ಏಳುವದಕ್ಕಿಂತ ಮುಂಚೆಯೇ ಎದ್ದುಕೊಳ್ಳಬೇಕು. (ಸ್ತ್ರೀಯು)

ಸಂಧ್ಯಾಂ ಪಂಚ ಮಹಾಯಜ್ಞಾನ್ನೈತ್ಯಕಂ ಸ್ಮೃತಿಕರ್ಮ ಚ ।
ತನ್ಮಧ್ಯೇ ಹಾಪಯೇತ್ತೇಷಾಂ ದಶಾಹಾಂತೇ ಪುನಃ ಕ್ರಿಯಾ ॥ ೧೬ ॥

ಸಂಧ್ಯಾವಂದನ,ಪಂಚಮಹಾಯಜ್ಞ ಮೊದಲಾದ ನಿತ್ಯಕರ್ಮಗಳನ್ನೂ ಸ್ಮಾರ್ತ ವಿಶೇಷಕಾರ್ಯಗಳನ್ನೂ ಆಶೌಚ ಮಧ್ಯದಲ್ಲಿ ಮಾಡಬಾರದು. ಹತ್ತು ದಿನ ಕಳೆದ ಮೇಲೆ ಪುನಃ ಆಚರಿಸತಕ್ಕದ್ದು.

ಸೂತಕೇ ಮೃತಕೇ ಚೈವ ಸಂಧ್ಯಾಕರ್ಮ ಸಮಾಚರೇತ್ ।
ಮನಸೋಚ್ಚಾರಯೇನ್ಮಂತ್ರಾನ್ ಪ್ರಾಣಾಯಾಮ ಮೃತೇ ದ್ವಿಜಃ ॥ ೧೭ ॥

ಜನನಾಶೌಚ, ಮೃತಾಶೌಚಗಳಲ್ಲಿ ಸಂಧ್ಯಾವಂದನೆಯನ್ನು ಮಾಡಬೇಕು. ಆದರೆ ಮಂತ್ರಗಳನ್ನು ಉಚ್ಚಾರ ಮಾಡದೆ ಮನಸ್ಸಿನಲ್ಲಿಯೇ ಎಣಿಸತಕ್ಕದ್ದು. ಪ್ರಾಣಾಯಾಮವನ್ನು ಮಾಡಬಾರದು.

ಸೂತಕೇ ಮತಕೇ ಚೈವ ಅಶುಚೌ ಶ್ರಾದ್ಧಭೋಜನೇ ।
ಪ್ರವಾಸಾದಿ ನಿಮಿತ್ತೇಷು ಹಾವಯೇನ್ನ ತು ಹಾಪಯೇತ್ ॥ ೧೮ ॥

ಜನನ ಮರಣ ಆಶೌಚಗಳಲ್ಲೂ ಅಶುಚಿಯಾದಾಗಲೂ ಶ್ರಾದ್ಧ ಭೋಜನ ಮಾಡಿದಾಗಲೂ ಪ್ರವಾಸಾದಿ ಕಾರಣಗಳಲ್ಲೂ ಶ್ರೌತ (ಅಗ್ನಿಹೋತ್ರಾದಿ) ಕಾರ್ಯಗಳನ್ನು ತಾನು ಮಾಡಬಾರದು. ಬೇರೆ ಕಡೆಯವರಿಂದ ಮಾಡಿಸಬೇಕು.

ದೇವತಾಶ್ಚ-ಮುನೀಂಶ್ಚೈವ ಪಿತ್ರೂನ್ನೈ ಯೋ ನ ತರ್ಪಯೇತ್ ।
ದೇವಾದೀನಾಮೃಣೀಭೂತ್ವಾ ನರಕಂ ಸ ವ್ರಜತ್ಯಧಃ ॥ ೧೯ ॥

ಯಾವಾತನು ದೇವತೆಗಳನ್ನೂ ಮುನಿಗಳನ್ನೂ ಪಿತೃಗಳನ್ನೂ ತೃಪ್ತಿಪಡಿಸುವದಿಲ್ಲವೋ ಆತನು ಆ ದೇವಾದಿಗಳಿಗೆ ಋಣಿಯಾಗಿ ನರಕವನ್ನು ಹೊಂದುವನು.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚಾಪಿ ಮಹೀಪತೇ ।
ಸ್ವಧರ್ಮ ತತ್ಪರೋ ವಿಷ್ಣುಮಾರಾಧಯತಿ ನಾನ್ಯಥಾ ॥ ೨೦ ॥

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು ತಮ್ಮತಮ್ಮ ಧರ್ಮದಂತೆ ನಡೆದೇ ದೇವರನ್ನು ತೃಪ್ತಿಪಡಿಸತಕ್ಕದ್ದು. ಅಂದರೆ ಚಿರಾನಂದವನ್ನನುಭವಿಸುವರು.

॥ ಇತ್ಯಾಚಾರವಿಧೌ ಷಷ್ಠೋಽಧ್ಯಾಯಃ ॥

ಆರನೇ ಅಧ್ಯಾಯವು ಮುಗಿದುದು.

ಶ್ರೀಮಚ್ಛೈಲ ಸುತಾವಿಲಾಸಿ ವಿಲಸತ್ಕಾರುಣ್ಯ ದೃಷ್ಟ್ಯೈ ದೃತಃ
ಶಂಭುಃ ಶಂಭುನಿದೇಶ ಸೂಕ್ತಿ ಪಠನಾಚ್ಛಿದ್ಧ್ವಾಂತರಾತ್ಮಾ ಸುಧೀಃ।
ಸುವ್ಯಾಖ್ಯಾಂ ರಚಯಾಂ ಚಕಾರ ಲಲಿತಾಂ ಕರ್ಣಾಟಭಾಷಾತ್ಮಿಕಾಂ
ಯಾಂ ಜ್ಞಾತ್ವಾ **ಸ್ಮೃತಿಸಂಗ್ರಹಾ**ರ್ಥಕರಣೇ ಮಾಭೂತ್ಪ್ರಯಾ
ಸೋಽನ್ನೃಣಾಂ ॥

ಸಮಾಪ್ತಿ.

Shri Ramkrishna Printing Works, Ltd., Kumta.

"ಅಂತಿಮ ನಿವೇದನ."

ಪ್ರಿಯ ಕನ್ನಡ ಬಾಂಧವರೇ,

ಇದೇನೋ ಒಂದು ಕೃತಿಯನ್ನು ತಮ್ಮ ಅವಗಾಹನೆಗಾಗಿ ಸಮರ್ಪಿಸುತ್ತಿರುವೆನು. ಮೊದಲು ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಇದನ್ನು ಬಾಯಿಪಾಠ ಮಾಡಿಸುವ ರೂಢಿಯು ವಿಶೇಷವಾಗಿ "ಹವ್ಯಕ" ರಲ್ಲಿತ್ತು. ಈ ಕಾಲದ ವೈದಿಕರಿಗೆ ಪೃಷ್ಠಕ್ಕೆ ಮಣ್ಣು ಲೇಪಿಸಲಿಕ್ಕೆ ಗೊತ್ತಿಲ್ಲ. ಸುಧಾರಣಾಕಾಲವಿದಂತೆ! ಬರೇ ಬಾಯಿಪಾಠಮಾಡಿದರೆ ಸಾಕಷ್ಟು ಪ್ರಯೋಜನವಾಗಲಿಕ್ಕಿಲ್ಲ. ಕಾರಣವೇ ಈ ಕನ್ನಡ ಟೀಕೆಯನ್ನು ಮಾಡುವ ಪ್ರಸಂಗವು ಒದಗಿತು. "नहिकल्याणकृत्कश्चिद्दुर्गतिं तात गच्छति" ಈ ತತ್ತ್ವವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಉದ್ಯೋಗವನ್ನಾರಂಭಿಸಿದ್ದಾಯಿತು. ಮುದ್ರಣವಾಗುವ ಪೂರ್ವದಲ್ಲೇ ಈ ಪುಸ್ತಕದ ಬೇಡಿಕೆಯು ಕೆಲ ಕಡೆಯಿಂದ ಬಂದಿರುವದೇ ಕನ್ನಡಿಗರಿಗೆ ಇದರಲ್ಲಿರುವ ಆದರಾತಿಶಯವನ್ನು ವ್ಯಕ್ತಪಡಿಸುತ್ತದೆ. ಯಾವದಾದರೊಂದು ಪ್ರಮಾದದಿಂದ ಸ್ಖಲನೆಯು ತೋರಿದರೆ ಕ್ಷಮಿಸಿ ಪುಸ್ತಕಕ್ಕೆ ಆಶ್ರಯಕೊಡುವಿರಾಗಿ ನಂಬಿರುತ್ತೇನೆ.

ಕನ್ನಡಿಗರ ಪ್ರಿಯ ವಶಂವದ,

ಶಂಭು ಶರ್ಮಾ ನಾಜಗಾರ.

‘ಜ್ಯೋತಿಷ ಕಾರ್ಯಾಲಯ’

ಎಂಬ

ಸಂಸ್ಥೆಯು ಸ್ಥಾಪಿ ... ಗಣಿತ
ಪ್ರಕಾರ ಗ್ರಹಸ್ಫುಟಾದಿಗಳ
ಯಿಂದ ಮಾಡುವದು,
ದಲ್ಲಿ ಗ್ರಹಣಾಂತ ಗಣಿತ
ಗ್ರಂಥಗಳೇ ಆದಿಯಾಗಿ
ಲಯಕ್ಕೆ ‘ಶಂಕರಾರ್ಯ
ಸಂಸ್ಕೃತ ಸಾಹಿತ್ಯವನ್ನು
ವವು. ಕನ್ನಡ ಬಾಂಧ
ಡು ಆನಂದಪಡುತ್ತಲಿರು

ಭಾವ
ಮೇಳ

ಸಾದಾ
ಸ್ಫುಟ
ಫಲಾ
ಯ ಸ
ಖುಲ

ಪತ್ತೆ:—

ಮನೆ